ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಡಿಸೆಂಬರ್ 17 ಶನಿವಾರ 2022

ಸಂಪುಟ: 43 | ಸಂಚಿಕೆ: 240 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528, ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಸಾರ್ವಜನಿಕರ ಸಮ್ಮುಖದಲ್ಲಿ ಮಚ್ಚು ಹಿಡಿದು, ಕೆಎಸ್‌ಆರ್‌ಟಿಸಿ ಅಧಿಕಾರಿಗಳಿಗೆ ಧಮ್ಕಿ ಪ್ರಕರಣ

ವಿರಾಜಪೇಟೆ ಬಳಿ ದಂಪತಿ ಬಂಧನ; ಇಬ್ಬರ ವಿರುದ್ಧವೂ ರೌಡಿಶೀಟ್ ತೆರೆಯಲು ನಿರ್ಧಾರ

● ಪತ್ರಿಕಾಗೋಷ್ಠಿಯಲ್ಲಿ ಪೊಲೀಸ್ ಆಯುಕ್ತ ಬಿ.ರಮೇಶ ಅವರಿಂದ ಮಾಹಿತಿ ● ಆರೋಪಿಗಳ ಜೊತೆಗಿದ್ದವರು, ಸಹಕರಿಸಿದವರ ಬಂಧನಕ್ಕೆ ಕ್ರಮ



ಮೈಸೂರು, ಡಿ.16(ಎಸ್‌ಬಿಡಿ)– ಮೈಸೂರಿನ ಸಾತಗಳ್ಳಿ ಬಸ್ ನಿಲ್ದಾಣದ ಬಳಿ ಕೆಎಸ್‌ಆರ್‌ಟಿಸಿ ಅಧಿಕಾರಿಗಳಿಗೆ ಮಚ್ಚು ಹಿಡಿದು, ಧಮ್ಕಿ ಹಾಕುವುದರೊಂದಿಗೆ ಪ್ರಾಣಬೆದರಿಕೆ ಹಾಕಿ ತಲೆಮರೆಸಿಕೊಂಡಿದ್ದ ದಂಪತಿಯನ್ನು ಬಂಧಿಸಿದ್ದು, ಇಬ್ಬರ ವಿರುದ್ಧ ತಕ್ಷಣವೇ ರೌಡಿಶೀಟ್ ತೆಗೆಯುವುದಾಗಿ ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ತಿಳಿಸಿದರು.

ತಮ್ಮ ಕಚೇರಿ ಸಭಾಂಗಣದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಅವರು, ಆರೋಪಿಗಳಾದ ಬನ್ನಿಮಂಟಪ ಸಿ ಲೇಔಟ್ ನಿವಾಸಿ ಶಫೀಕ್ ಅಹಮದ್ ಹಾಗೂ ಆತನ ಪತ್ನಿ ಸೈಯದ್ ಮುನ್ನೀಸಾರನ್ನು ಇಂದು ಮುಂಜಾನೆ 3 ಗಂಟೆ ಸಮಯದಲ್ಲಿ ಕೊಡಗಿನ ವಿರಾಜಪೇಟೆ ಸಮೀಪದ ಗ್ರಾಮವೊಂದರಲ್ಲಿ ಬಂಧಿಸಲಾಗಿದೆ. ಸಾರ್ವಜನಿಕವಾಗಿ ಮಚ್ಚು ಹಿಡಿದು ಪ್ರಾಣ ಬೆದರಿಕೆ ಹಾಕಿ, ಭಯದ ವಾತಾವರಣ ಸೃಷ್ಟಿಸಿದ ಈ ಇಬ್ಬರ ವಿರುದ್ಧ ಕೂಡಲೇ



ರೌಡಿಶೀಟ್ ತೆರೆಯುವಂತೆ ಎಸಿಪಿ ಅವರಿಗೆ ಸೂಚಿಸಿದ್ದೇನೆ ಎಂದರು. ಬಂಧಿತರಿಂದ ಕೆಎಸ್‌ಆರ್‌ಟಿಸಿ ಅಧಿಕಾರಿಗಳನ್ನು ಬೆದರಿಸಲು ಝಳಪಿಸಿದ್ದ ಮಚ್ಚು ▶ 8ನೇ ಪುಟಕ್ಕೆ

ಪೊಲೀಸ್ ಆಯುಕ್ತರ ಖಡಕ್ ಶಾಸ್ತಿ

ಸಾತಗಳ್ಳಿ ಬಸ್ ನಿಲ್ದಾಣದಲ್ಲಿರುವ ವಾಣಿಜ್ಯ ಸಂಕೀರ್ಣ ಸಂಬಂಧ ನ್ಯಾಯಾಲಯದ ಆದೇಶವನ್ನು ಜಾರಿ ಮಾಡಲು ಕೆಎಸ್‌ಆರ್‌ಟಿಸಿ ಮೈಸೂರು ಡಿಟಿಓ ಮರೀಗೌಡ, ಕೆಎಸ್‌ಆರ್‌ಟಿಸಿ ಘಟಕದ ವ್ಯವಸ್ಥಾಪಕ ಶಂಕರ್, ಸಹಾಯಕ ಸಂಚಾರ ವ್ಯವಸ್ಥಾಪಕಿ ಕಲಾಶ್ರೀ, ಸಹಾಯಕ ಸಂಚಾರ ಅಧೀಕ್ಷಕ ಚೇತನ್ ಮತ್ತಿತರರು ತೆರಳಿದ್ದಾಗ ಶಫೀಕ್ ಅಹಮದ್, ಪತ್ನಿ ಸೈಯ್ಯದ್ ಮುನ್ನೀಸಾ ಬ್ಯಾಗ್‌ನಿಂದ ಮಚ್ಚು ಹೊರತೆಗೆದು ಮೇಲಕೆತ್ತಿ ಝಳಪಿಸಿ, ಕೊಲೆ ಬೆದರಿಕೆ ಹಾಕಿದ್ದಳು. ಇದೇ ವೇಳೆ ಇಬ್ಬರೂ ಅತ್ಯಂತ ಅಸಹ್ಯ, ಅವಾಚ್ಯ ಪದಗಳಿಂದ ಅಧಿಕಾರಿಗಳನ್ನು ನಿಂದಿಸಿ ಹಲ್ಲೆ ಯತ್ನ ನಡೆಸಿದ್ದರು. ಇದರಿಂದ ಭಯ–ಭೀತರಾದ ಸಾರ್ವಜನಿಕರು ಹಾಗೂ ಪ್ರಯಾಣಿಕರು ಗಲಾಟೆ ದೃಶ್ಯವನ್ನು ಮೊಬೈಲ್‌ನಲ್ಲಿ ಸೆರೆ ಹಿಡಿದಿದ್ದರು. ಒಂದು ದಿನದ ಬಳಿಕ ಈ ವಿಡಿಯೋ ವೈರಲ್ ಆಗಿತ್ತು. ಡಿಟಿಓ ಮರೀಗೌಡರು ನೀಡಿದ ದೂರಿನನ್ವಯ ಬೆದರಿಕೆ ಕೇಸ್ ದಾಖಲಿಸಿಕೊಂಡಿದ್ದ ಪೊಲೀಸರು, ವಿಡಿಯೋ ವೈರಲ್ ಆದ ಬಳಿಕ ಆಯುಕ್ತರ ಸೂಚನೆ ಮೇರೆಗೆ ಸೆಕ್ಷನ್ 307ನ್ನು ಸೇರ್ಪಡೆ ಮಾಡಿದ್ದರು. ಇದೀಗ ಸಾರ್ವಜನಿಕವಾಗಿ ಮಚ್ಚು ಝಳಪಿಸಿ ಆತಂಕ ಸೃಷ್ಟಿಸಿದ್ದ ದಂಪತಿಯನ್ನು ಬಂಧಿಸಿ, ಅವರ ವಿರುದ್ಧ ರೌಡಿಶೀಟ್ ತೆರೆಯುವ ಮೂಲಕ ಪೊಲೀಸರು ಇಂತಹವರಿಗೆ ಖಡಕ್ ಎಚ್ಚರಿಕೆ ರವಾನಿಸಿದ್ದಾರೆ.

ಬಹು ನಿರೀಕ್ಷಿತ ಮುಡಾ ಸಭೆಯಲ್ಲಿ ಸಾರ್ವಜನಿಕ ಹಿತಾಸಕ್ತಿಯುಳ್ಳ ಒಂದೂ ವಿಷಯ ಪ್ರಸ್ತಾಪವಾಗಿಲ್ಲ

ಖಾಸಗಿ ಡೆವಲಪರ್‌ಗಳಿಗೆ ಅನುಕೂಲಕಾರಿ ನಿರ್ಧಾರ!



ಮೈಸೂರು, ಡಿ. 16(ಆರ್‌ಕೆ)–ಸುದೀರ್ಘ 6 ತಿಂಗಳ ನಂತರ ಶುಕ್ರವಾರ ನಡೆದ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದ ಸಭೆಯಲ್ಲಿ ಯಾವುದೇ ಮಹತ್ವದ ವಿಷಯಗಳು ಪ್ರಸ್ತಾಪವಾಗದೇ ಕೇವಲ ಖಾಸಗಿ ಡೆವಲಪರ್‌ಗಳಿಗೆ ಅನುಕೂಲವಾಗುವಂತಹ ವಿಷಯಗಳನ್ನು ಮಾತ್ರ ಚರ್ಚಿಸಿ ನಿರ್ಣಯ ಕೈಗೊಳ್ಳಲಾಗಿದೆ.

ಜಿಲ್ಲಾಧಿಕಾರಿಗಳೂ ಆದ ಮುಡಾ ಅಧ್ಯಕ್ಷ ಕೆ.ವಿ.ರಾಜೇಂದ್ರ ಅವರ ಅಧ್ಯಕ್ಷತೆಯಲ್ಲಿ ನಡೆದ ಈ ಸಭೆಯಲ್ಲಿ ಮುಡಾ ಸದಸ್ಯತ್ವ ಹೊಂದಿರುವ ಶಾಸಕರಾದ ಎಸ್.ಎ. ರಾಮದಾಸ್, ತನ್ವೀರ್ ಸೇಠ್, ಎಲ್.ನಾಗೇಂದ್ರ, ಹರ್ಷವರ್ಧನ, ವಿಧಾನಪರಿಷತ್ ಸದಸ್ಯರಾದ ಎ.ಹೆಚ್. ವಿಶ್ವನಾಥ್, ಸಿ.ಎನ್. ಮಂಜೇಗೌಡ, ದಿನೇಶ್ ಗೂಳೀಗೌಡ, ಡಾ.ಡಿ.ತಿಮ್ಮಯ್ಯ, ಮಧು ಮಾದೇಗೌಡ, ಮರಿತಿಬ್ಬೇಗೌಡ, ನಗರಪಾಲಿಕೆಯಿಂದ ಮುಡಾ ಸದಸ್ಯರಾಗಿ ಆಯ್ಕೆಯಾಗಿರುವ ಎಸ್‌ಬಿಎಂ ಮಂಜು, ಮುಡಾ ಆಯುಕ್ತ ಜಿ.ಟಿ. ದಿನೇಶ್ ಕುಮಾರ್ ಹಾಗೂ ಅಧಿಕಾರಿಗಳು ಭಾಗವಹಿಸಿದ್ದರು. ಈ ಸಭೆಯಲ್ಲಿ ಒಟ್ಟು 750 ವಿಷಯ ಗಳನ್ನು ಮಂಡಿಸಲಾಗಿತ್ತಾದರೂ, ಅದರಲ್ಲಿ 343 ವಿಷಯಗಳನ್ನು ಮಾತ್ರ ಕೈಗೆತ್ತಿಕೊಳ್ಳಲಾಗಿತ್ತು. ಈ ಪೈಕಿ 200 ವಿಷಯಗಳ ಬಗ್ಗೆ ನಿರ್ಣಯಗಳನ್ನು ಕೈಗೊಳ್ಳಲಾಯಿತು. ಮೈಸೂರು ನಗರ ದಲ್ಲಿರುವ 152 ಸಿಎ ನಿವೇಶನಗಳ ಹಂಚಿಕೆ ಬಗ್ಗೆ ಆರು ತಿಂಗಳ ಹಿಂದೆ ನಡೆದಿದ್ದ ಉಪಸಮಿತಿ ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಗಿತ್ತು. ಈ ಸಭೆಯಲ್ಲಿ ಆ ನಿರ್ಣಯಗಳನ್ನು ಅಂತಿಮಗೊಳಿಸಲಾಗುತ್ತದೆ ಎಂದು ಕಳೆದ ಒಂದು ▶ 2ನೇ ಪುಟಕ್ಕೆ

ಈ ಸಲ ದೇವೇಗೌಡರ ಕುಟುಂಬದಿಂದ

ನಾಲ್ವರ ಸ್ಪರ್ಧೆ

ಹೆಚ್.ಡಿ.ಕುಮಾರಸ್ವಾಮಿ, ಚನ್ನಪಟ್ಟಣ
ಹೆಚ್.ಡಿ.ರೇವಣ್ಣ, ಹೊಳೆನರಸೀಪುರ
ಶ್ರೀಮತಿ ಭವಾನಿ ರೇವಣ್ಣ, ಹಾಸನ
ನಿಖಿಲ್ ಕುಮಾರಸ್ವಾಮಿ, ರಾಮನಗರ






ಯಾವ ಕ್ಷಣದಲ್ಲಾದರೂ 100 ಅಭ್ಯರ್ಥಿಗಳ ಪಟ್ಟಿ ಬಿಡುಗಡೆ

ಬೆಂಗಳೂರು, ಡಿ.16 (ಕೆಎಂಶಿ)– ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ದೇವೇಗೌಡರ ಕುಟುಂಬದಿಂದ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಸೇರಿದಂತೆ ನಾಲ್ಕು ಮಂದಿ ಕಣಕ್ಕಿಳಿಯಲಿದ್ದಾರೆ.

ಅನಿತಾ ಕುಮಾರಸ್ವಾಮಿ ಈ ಬಾರಿ ಚುನಾವಣಾ ಕಣಕ್ಕಿಳಿಯಲು ಆಸಕ್ತಿ ತೋರದ ಕಾರಣ ಅವರ ಪುತ್ರ ನಿಖಿಲ್‌ಕುಮಾರಸ್ವಾಮಿ ರಾಮನಗರದಿಂದ, ಹೆಚ್.ಡಿ. ಕುಮಾರಸ್ವಾಮಿ ಚನ್ನಪಟ್ಟಣ ವಿಧಾನಸಭಾ ಕ್ಷೇತ್ರದಿಂದ ಕಣಕ್ಕಿಳಿಯಲಿದ್ದಾರೆ.

ದೇವೇಗೌಡರ ಮತ್ತೊಬ್ಬ ಪುತ್ರ ಹೆಚ್.ಡಿ. ರೇವಣ್ಣ ಹೊಳೆನರಸೀಪುರದಿಂದಲೂ, ಅವರ ಪತ್ನಿ ಭವಾನಿ ರೇವಣ್ಣ ಇಲ್ಲವೇ ಡಾ.ಸೂರಜ್ ರೇವಣ್ಣ ಅವರನ್ನು ಹಾಸನ

- ಜಿ.ಟಿ.ದೇವೇಗೌಡ –ಚಾಮುಂಡೇಶ್ವರಿ
- ಜಿ.ಡಿ.ಹರೀಶ್‌ಗೌಡ –ಹುಣಸೂರು
- ಸಾ.ರಾ.ಮಹೇಶ್ –ಕೆ.ಆರ್.ನಗರ
- ಕೆ.ಮಹದೇವ –ಪಿರಿಯಾಪಟ್ಟಣ
- ಅಶ್ವಿನ್‌ಕುಮಾರ್ –ತಿ.ನರಸೀಪುರ









ವಿಧಾನಸಭಾ ಕ್ಷೇತ್ರದಿಂದ ಕಣಕ್ಕಿಳಿಸಲು ಸಿದ್ಧತೆ ನಡೆದಿದೆ.

2023ರ ಏಪ್ರಿಲ್–ಮೇ ತಿಂಗಳಲ್ಲಿ ನಡೆಯುವ ವಿಧಾನಸಭಾ ಚುನಾವಣೆಗೆ ಸುಮಾರು 100 ವಿಧಾನಸಭಾ ಕ್ಷೇತ್ರಗಳಿಗೆ ತಡರಾತ್ರಿ ವೇಳೆಗೆ ಮೊದಲ ಪಟ್ಟಿ ಬಿಡುಗಡೆಯಾಗುವ ಸಾಧ್ಯತೆ ಇದೆ. ರಾಮನಗರದಲ್ಲಿ ಇಂದು ಎರಡನೇ ಹಂತದ ಪಂಚರತ್ನ ಯಾತ್ರೆ ಆರಂಭಿಸಿರುವ ಕುಮಾರಸ್ವಾಮಿ ಅಲ್ಲಿನ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಶ್ರೀನಿವಾಸ ಕಲ್ಯಾಣ ಕಾರ್ಯಕ್ರಮದ ನಂತರ ಪಟ್ಟಿ ಬಿಡುಗಡೆ ಮಾಡಲು ▶ 8ನೇ ಪುಟಕ್ಕೆ

ಮತ್ತೊಬ್ಬ ರೌಡಿಶೀಟರ್ ಗೌಸಿಯಾನಗರದ ಅಕ್ಮಲ್‌ಪಾಷ 6 ತಿಂಗಳು ರಾಮನಗರಕ್ಕೆ ಗಡಿಪಾರು

● ರೌಡಿಗಳ ರಹಸ್ಯ ವ್ಯವಹಾರಗಳ ಮೇಲೆ ಹದ್ದಿನ ಕಣ್ಣು ● ಸಮಾಜಕ್ಕೆ ಕಂಟಕವಾಗಿರುವವರ ಮೇಲೆ ಮುಲಾಜಿಲ್ಲದೆ ರೌಡಿಶೀಟ್ ● ಕಟ್ಟಡ ನಿರ್ಮಿಸುವವರ ಬಳಿ ಸುಲಿಗೆ ಮಾಡುವವರ ವಿರುದ್ಧ ಕಠಿಣ ಕ್ರಮ

ಮೈಸೂರು, ಡಿ.16(ಎಸ್‌ಬಿಡಿ)– ಮೈಸೂರಿನ ರೌಡಿಶೀಟರ್‌ಗಳು ರಹಸ್ಯವಾಗಿ ನಡೆಸುವ ಕಾನೂನುಬಾಹಿರ ಚಟುವಟಿಕೆಗಳ ಮೇಲೆ ಪೊಲೀಸರು ಹದ್ದಿನ ಕಣ್ಣಿಟ್ಟಿದ್ದು, ಇಂದು ಮತ್ತೋರ್ವ ರೌಡಿಶೀಟರ್‌ನನ್ನು 6 ತಿಂಗಳು ನಗರದಿಂದ ಗಡಿಪಾರು ಮಾಡಲಾಗಿದೆ.

ಗೂಂಡಾ ಕಾಯ್ದೆಗೂ ರೆಡಿ

> ಮೈಸೂರಿನಲ್ಲಿ ರೌಡಿಸಂ, ಭೂಮಾಫಿಯಾ, ರೋಲ್‌ಕಾಲ್ ಮಾಡುವವರ ಮೇಲೆ ನಿಗಾ ಇಡಲಾಗಿದೆ. ಕೆಲವು ಪ್ರದೇಶದಲ್ಲಿ ಮನೆ ಅಥವಾ ನಿವೇಶನ ಖರೀದಿಸಿದವರು, ಕಟ್ಟಡ ನಿರ್ಮಾಣ ಮಾಡುವವರಿಂದ ತೆರಿಗೆ ಮಾದರಿಯಲ್ಲಿ ಹಣ ವಸೂಲಿ ಮಾಡುತ್ತಾರೆಂದು ಕೇಳಿ ಬಂದಿದೆ. ಈ ರೀತಿಯ ಚಟುವಟಿಕೆಗಳಲ್ಲಿ ತೊಡಗಿದವರನ್ನು ಇದೇ ರೀತಿ ಗಡಿಪಾರು ಮಾಡುವುದು ಇಲ್ಲವೇ ಗೂಂಡಾ ಕಾಯ್ದೆಯಡಿ ಜೈಲಿಗಟ್ಟಲು ನಿರ್ಧರಿಸಿದ್ದೇವೆ.
> –ಬಿ.ರಮೇಶ್, ನಗರ ಪೊಲೀಸ್ ಆಯುಕ್ತರು

ಬನ್ನಿಮಂಟಪದ ಮನು ಅಲಿ ಯಾಸ್ ಆರ್‌ಎಕ್ಸ್ ಮನು ಗಡಿಪಾರು ಬೆನ್ನಲ್ಲೇ ಗೌಸಿಯಾನಗರದ ಅಕ್ಮಲ್ ಪಾಷ ಅಲಿಯಾಸ್ ಪೋಕ್ಲೈನ್ ಎಂಬಾ ತನನ್ನು ಮೈಸೂರು ನಗರ ವಿಶೇಷ ಕಾರ್ಯ ನಿರ್ವಾಹಕ ದಂಡಾಧಿಕಾರಿಗಳೂ ಆದ ಕಾನೂನು–ಸುವ್ಯವಸ್ಥೆ ವಿಭಾಗದ ಡಿಸಿಪಿ ಪ್ರದೀಪ್ ಗುಂಟಿ, ಗಡಿಪಾರು ಮಾಡಿ ಇಂದು ಆದೇಶಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ನಗರ ಪೊಲೀಸ್ ಆಯುಕ್ತ ಬಿ.ರಮೇಶ್, ಗೌಸಿಯಾನಗರ ಕೇರಳ ಮಸೀದಿ ರಸ್ತೆ, 2ನೇ ಕ್ರಾಸ್ ನಿವಾಸಿ ಅಕ್ಮಲ್ ಪಾಷ ಅಲಿಯಾಸ್ ಪೋಕ್ಲೈನ್ (34) ವಿರುದ್ಧ ಉದಯಗಿರಿ ▶ 2ನೇ ಪುಟಕ್ಕೆ


ಎಲ್‌ಪಿಜಿ ಸಂಪರ್ಕ, ಸಿಲಿಂಡರ್ ರೀಫಿಲ್ಲಿಂಗ್‌ಗೆ ಬಡ್ಡಿರಹಿತ ಸಾಲ

ನವದೆಹಲಿ, ಡಿ.16– ಪ್ರಧಾನಮಂತ್ರಿ ಉಜ್ವಲ ಯೋಜನೆಯ (ಪಿಎಂಯುವೈ) ಫಲಾನುಭವಿಗಳಿಗೆ ಎಲ್‌ಪಿಜಿ ಸಂಪರ್ಕ ಮತ್ತು ಸಿಲಿಂಡರ್ ರೀಫಿಲ್ಲಿಂಗ್‌ಗೆ ಬಡ್ಡಿರಹಿತ ಸಾಲ ನೀಡುವ ಯೋಜನೆಯನ್ನು ಕೇಂದ್ರ ಸರ್ಕಾರ ಜಾರಿಗೆ ತಂದಿದೆ.

ಈ ಪಿಎಂಯುವೈ ಯೋಜನೆಯನ್ನು ಜಾರಿಗೊಳಿಸುತ್ತಿದ್ದು, ಈ ಯೋಜನೆಯ ಸವಲತ್ತು ಪಡೆಯಲು ಫಲಾನುಭವಿ, ಬಿಪಿಎಲ್ ಕುಟುಂಬದ ಮಹಿಳೆಯಾಗಿರಬೇಕು.

ಬೆಳೆ ಕಾಯುತ್ತಿದ್ದ ರೈತ ಹಾರಿಸಿದ ಗುಂಡು ತಗುಲಿ 'ಬಲರಾಮ'ನಿಗೆ ಗಾಯ

● ತಕ್ಷಣ ಚಿಕಿತ್ಸೆ ನಂತರ ಚೇತರಿಕೆ ● ಹುಣಸೂರು ವನ್ಯಜೀವಿ ವಿಭಾಗದ ಭೀಮನಕಟ್ಟೆ ಬಳಿ ಘಟನೆ ● ಗುಂಡು ಹಾರಿಸಿದ ರೈತನ ಬಂಧನ



ಮೈಸೂರು/ಹನಗೋಡು, ಡಿ.16(ಎಂಟಿವೈ, ದೀಪು)– ನಾಡಹಬ್ಬ ದಸರಾ ಮಹೋತ್ಸವದಲ್ಲಿ 13 ಬಾರಿ ಚಿನ್ನದ ಅಂಬಾರಿ ಹೊತ್ತು ದಾಖಲೆ ನಿರ್ಮಿಸಿದ್ದ ಬಲರಾಮನ ಮೇಲೆ ರೈತ ಗುಂಡು ಹಾರಿಸಿದ್ದು, ಸಕಾಲದಲ್ಲಿ ಆನೆಗೆ ಪಶುವೈದ್ಯರು ಚಿಕಿತ್ಸೆ ನೀಡಿದ್ದರಿಂದ ಪ್ರಾಣಾಪಾಯದಿಂದ ಪಾರಾಗಿದ್ದಾನೆ. ಬಲರಾಮನಿಗೆ ಒಂಟಿ ನಳಿಕೆ ನಾಡ ಬಂದೂಕಿನಿಂದ ಗುಂಡು ಹಾರಿಸಿದ ರೈತ ಎಂ.ಎ. ಸುರೇಶ್‌ನನ್ನು ಅರಣ್ಯಾಧಿಕಾರಿಗಳು ಬಂಧಿಸಿ, ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು, ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಳಪಡಿಸಲಾಗಿದೆ. ತನ್ನ ಜಮೀನಿಗೆ ನುಗ್ಗಿ ಕಾಡಾನೆ ಬೆಳೆ ನಾಶಪಡಿಸುತ್ತಿದೆ ಎಂದು ಭಾವಿಸಿ ತಾನು ಬಲರಾಮನ ಮೇಲೆ ಗುಂಡು ಹಾರಿಸಿದ್ದಾಗಿ ಸುರೇಶ್ ಹೇಳಿಕೆ ನೀಡಿದ್ದಾನೆ ಎಂದು ಅರಣ್ಯ ಇಲಾಖೆ ಮೂಲಗಳು ತಿಳಿಸಿವೆ. ಹುಣಸೂರು ವನ್ಯಜೀವಿ ವಿಭಾಗದ ಭೀಮನಕಟ್ಟೆ ಸಾಕಾನೆ ಶಿಬಿರದಿಂದ ಕೇವಲ 200 ಮೀ. ಅಂತರದಲ್ಲಿರುವ ಪಿರಿಯಾಪಟ್ಟಣ ತಾಲೂಕು ಅಳಲೂರು ಗ್ರಾಮದ ಸರ್ವೆ ನಂ.27ರಲ್ಲಿ ಈ ಘಟನೆ ನಡೆದಿದೆ.

ವಿವರ: ಗುರುವಾರ ರಾತ್ರಿ 9.30ರಲ್ಲಿ ಭೀಮನಕಟ್ಟೆ ಆನೆ ಶಿಬಿರದಿಂದ ಬಲರಾಮನ ಮೇಯಲು ಕಾಡಿಗೆ ಬಿಡಲಾಗಿತ್ತು. ಆದರೆ, ಸುಮಾರು 30 ನಿಮಿಷದಲ್ಲೇ ಗುಂಡು ಹಾರಿದ ಹಾಗೂ ಆನೆ ಘೀಳಿಟ್ಟ ಶಬ್ದ ಕೇಳಿಸಿದ ಹಿನ್ನೆಲೆಯಲ್ಲಿ ಸಾಕಾನೆ ▶ 2ನೇ ಪುಟಕ್ಕೆ



ಪಾಂಡವಪುರದಲ್ಲಿ ಬಿಜೆಪಿ ಜನಸಂಕಲ್ಪ ಯಾತ್ರೆ ಸಮಾವೇಶ

ರಾಜ್ಯದಲ್ಲೂ ಬಿಜೆಪಿ ಗುಜರಾತ್ ಮಾದರಿ ದಾಖಲೆ

● ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಘೋಷಣೆ ● ಕಾಂಗ್ರೆಸ್ ರಾಜ್ಯದಲ್ಲಿ ಅಧಿಕಾರಕ್ಕೇರುವ ಹಗಲು ಕನಸು ● ಮಂಡ್ಯ ಜಿಲ್ಲೆಯಿಂದಲೇ ಬಿಜೆಪಿ ಅಧಿಕಾರ ಹಿಡಿಯುವ ಹವಾ ಸೃಷ್ಟಿಸಲು ಕರೆ ● ಕಾಂಗ್ರೆಸ್ ಜಾತಿ ವಿಷ ಬೀಜ ಬಿತ್ತಿ ಅಧಿಕಾರ ಹಿಡಿಯುವ ಹುನ್ನಾರ: ಬಿಎಸ್‌ವೈ ● ಕಾಂಗ್ರೆಸ್ ಟಿಪ್ಪು ನೆಚ್ಚಿಕೊಂಡರೆ ಟಿಪ್ಪು ಡ್ರಾಪೇ ಗತಿ!: ಅಶೋಕ್

ಪಾಂಡವಪುರ, ಡಿ. 16– ಕಾಂಗ್ರೆಸ್ ಪಕ್ಷ ಮುಂದಿನ ಚುನಾವಣೆಯಲ್ಲಿ ಅಧಿಕಾರಕ್ಕೆ ಬರುವ ಹಗಲು ಕನಸು ಕಾಣುತ್ತಿದೆ. ಆದರೆ, ರಾಜ್ಯದಲ್ಲಿ 2023ರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಅಧಿಕಾರಕ್ಕೇರುವ ಮೂಲಕ ಗುಜರಾತ್ ಮಾದರಿಯಲ್ಲಿ ದಾಖಲೆ ನಿರ್ಮಿಸಲಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವಿಶ್ವಾಸ ವ್ಯಕ್ತಪಡಿಸಿದರು.

ಪಟ್ಟಣದ ಪಾಂಡವ ಕ್ರೀಡಾಂಗಣದಲ್ಲಿ ಬಿಜೆಪಿ ವತಿಯಿಂದ ನಡೆದ ಜನಸಂಕಲ್ಪ ಯಾತ್ರೆ ಸಮಾವೇಶ ಉದ್ಘಾಟಿಸಿ ಅವರು ಮಾತನಾಡಿದರು. ಹಳೇ ಮೈಸೂರು ಪ್ರಾಂತ್ಯದಲ್ಲಿ ಬಿಜೆಪಿ ಪರ್ವ ಆರಂಭಗೊಂಡಿದೆ. ಮಂಡ್ಯ ಜಿಲ್ಲೆ ಸೇರಿದಂತೆ ಹಳೇ ಮೈಸೂರು ಭಾಗದಲ್ಲಿ ಬಿಜೆಪಿ ಪ್ರಬಲವಾಗಿ ಬೆಳೆದಿದ್ದು, ಮೇಲುಕೋಟೆ ವಿಧಾನಸಭಾ ಕ್ಷೇತ್ರ ಸೇರಿ ಮಂಡ್ಯ ಜಿಲ್ಲೆಯ 7 ಕ್ಷೇತ್ರಗಳ ಪೈಕಿ ಐದು ಕ್ಷೇತ್ರಗಳಲ್ಲಿ ಬಿಜೆಪಿ ಅಭ್ಯರ್ಥಿಗಳ ಗೆಲುವು



ಖಚಿತ. 2023ಕ್ಕೆ ರಾಜ್ಯದಲ್ಲಿ ಬಿಜೆಪಿಯನ್ನು ಅಧಿಕಾರಕ್ಕೆ ತರುವ ಬದಲಾವಣೆ ಬಿರುಗಾಳಿ ಮಂಡ್ಯ ಜಿಲ್ಲೆಯಿಂದ ಆರಂಭವಾಗಲಿ ಎಂದು ಕರೆ ನೀಡಿದರು.

ರಾಜ್ಯದಲ್ಲಿ ಆಡಳಿತ ನಡೆಸುತ್ತಿರುವ ಡಬಲ್ ಎಂಜಿನ್ ಸರ್ಕಾರ ಜನಪರ, ರೈತಪರ, ಮಹಿಳೆಯರ, ಯುವಕರ ಪರವಾಗಿ ಯಶಸ್ವಿ ಆಡಳಿತ ನಡೆಸುವ ಮೂಲಕ ದುಡಿಯುವ ವರ್ಗಕ್ಕೆ ಶಕ್ತಿ ತುಂಬುವ ಕೆಲಸ ಮಾಡುತ್ತಿದೆ. ರಾಜ್ಯದ 45 ಸಾವಿರ ನೇಕಾರರ ಖಾತೆಗೆ ತಲಾ 5 ಸಾವಿರ ರೂ. ಜಮೆ ಮಾಡುವ ಕಾರ್ಯಕ್ರಮಕ್ಕೆ ಈಗಷ್ಟೆ ಚಾಲನೆ ನೀಡಿ ಬಂದಿದ್ದೇನೆ. ಯುವಕರು, ಮಹಿಳಾ ಸಬಲೀಕರಣಕ್ಕೆ 5 ಲಕ್ಷದವರೆಗೆ ಸಾಲ ಸೌಲಭ್ಯ ನೀಡುತ್ತಿದ್ದೇವೆ. ಕಿಸಾನ್ ಸಮ್ಮಾನ್ ಯೋಜನೆಯಿಂದ ರೈತರ ಖಾತೆಗೆ 10 ಸಾವಿರ ಹಣ ನೀಡಲಾಗುತ್ತಿದೆ ಎಂದರು. ಮಂಡ್ಯ ಜಿಲ್ಲೆಯಲ್ಲಿ ▶ 8ನೇ ಪುಟಕ್ಕೆ

ಇಂದು,ನಾಳೆ ಬಲಮುರಿ ಗಣಪತಿ ದೇವಸ್ಥಾನದ ವಾರ್ಷಿಕೋತ್ಸವ



ಮೈಸೂರು, ಡಿ.16– ಮೈಸೂರಿನ ರೈಲ್ವೆ ನಿಲ್ದಾಣದಲ್ಲಿರುವ ಶ್ರೀ ಬಲಮುರಿ ಗಣಪತಿ ದೇವಸ್ಥಾನದ 33ನೇ ವಾರ್ಷಿಕೋತ್ಸವವು ಡಿ.17ರ ಶನಿವಾರ ಮತ್ತು 18ರ ಭಾನುವಾರ ಅದ್ಧೂರಿಯಾಗಿ ನೆರವೇರಲಿದೆ. ವಾರ್ಷಿಕೋತ್ಸವದ ಪ್ರಯುಕ್ತ ಶ್ರೀ ಲಕ್ಷ್ಮಿ ಗಣಪತಿ ಮತ್ತು ಶ್ರೀ ಮಹಾಲಕ್ಷ್ಮಿ ಹೋಮ ಏರ್ಪಡಿಸಲಾಗಿದೆ ಎಂದು ಪ್ರಧಾನ ಅರ್ಚಕ ಜಿ.ಎಸ್.ನಾಗೇಶ್ ದೀಕ್ಷಿತ್, ಅರ್ಚಕರಾದ ಎನ್.ನಾಗೇಂದ್ರಪ್ರಸಾದ್ ತಿಳಿಸಿದ್ದಾರೆ. ಡಿ.17ರ ಸಂಜೆ ವಿವಿಧ ಪೂಜೆಗಳು ನೆರವೇರಲಿದ್ದು, ಡಿ.18ರ ಭಾನುವಾರ ಬೆಳಗ್ಗೆ 9ಕ್ಕೆ ಶ್ರೀ ಸ್ವಾಮಿರವರಿಗೆ ಅವಭೃತಸ್ನಾನ, ಶ್ರೀ ಶುಭಕೃತುನಾಮ ಸಂವತ್ಸರೇ ದಕ್ಷಿಣಾಯನೇ, ಹಿಮದೃತು, ಮಾರ್ಗಶಿರ ಕೃಷ್ಣ ಪಕ್ಷೆ ನವಮಿ, ಹಸ್ತ ನಕ್ಷತ್ರದಲ್ಲಿ ಶ್ರೀ ಲಕ್ಷ್ಮಿ ಗಣಪತಿ ಹೋಮ, ದಶಮಿ, ಚಿತ್ತ ನಕ್ಷತ್ರದಲ್ಲಿ ಶ್ರೀ ಮಹಾಲಕ್ಷ್ಮಿ ಹೋಮ, 11ಕ್ಕೆ ಮಹಾಪೂರ್ಣಾಹುತಿ ಮಧ್ಯಾಹ್ನ 12ಕ್ಕೆ ಮಹಾಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ ನೆರವೇರಲಿದೆ ಮಾಹಿತಿಗಾಗಿ ಜಿ.ಎಸ್. ನಾಗೇಶ್ ದೀಕ್ಷಿತ್, ಮೊ.9731871060, ನಾಗೇಂದ್ರಪ್ರಸಾದ್, ಮೊ.9845836983 ಸಂಪರ್ಕಿಸಬಹುದು.

ಜೆಡಿಎಸ್ ರಾಜ್ಯ ಕಾರ್ಯದರ್ಶಿ ಚಂದ್ರುಗೌಡ



ಮೈಸೂರು, ಡಿ.16–ಕರ್ನಾಟಕ ಪ್ರದೇಶ ಜನತಾ ದಳ (ಜಾತ್ಯಾತೀತ) ಪಕ್ಷದ ರಾಜ್ಯ ಕಾರ್ಯದರ್ಶಿಯನ್ನಾಗಿ ಮೈಸೂರು ರಾಜೇಂದ್ರನಗರದ ಕೆ.ಚಂದ್ರುಗೌಡ ಅವರನ್ನು ಪಕ್ಷದ ರಾಜ್ಯಾಧ್ಯಕ್ಷ ಸಿ.ಎಂ.ಇಬ್ರಾಹಿಂ ನೇಮಕ ಮಾಡಿದ್ದಾರೆ.

ಒಂದನೇ ಪುಟದಿಂದ

6 ತಿಂಗಳು ರಾಮನಗರಕ್ಕೆ ಗಡಿಪಾರು

ಪೊಲೀಸ್ ಠಾಣೆಯಲ್ಲಿ ರೌಡಿಶೀಟ್ ತೆರೆಯಲಾಗಿದ್ದು, ಆತನ ವಿರುದ್ಧ ಉದಯಗಿರಿ, ದೇವರಾಜ, ಲಷ್ಕರ್ ಪೊಲೀಸ್ ಠಾಣೆಗಳಲ್ಲಿ ಒಟ್ಟು 9 ಪ್ರಕರಣ ದಾಖಲಾಗಿದೆ. ಇದರಲ್ಲಿ ಒಂದು ಪ್ರಕರಣದಲ್ಲಿ ಶಿಕ್ಷೆಯಾಗಿದ್ದು, ಕೆಲವು ತನಿಖೆ ಹಂತದಲ್ಲಿವೆ ಎಂದರು. ಈತನ ಬಗ್ಗೆ ತೀವ್ರ ನಿಗಾ ಇಟ್ಟಿದ್ದಾಗಿಯೂ ಪೊಲೀಸರ ಕಣ್ಣುತಪ್ಪಿಸಿ ಸಮಾ ಜದ ಸ್ವಾಸ್ಥ್ಯ ಹಾಳು ಮಾಡುವಂತಹ ಕೃತ್ಯಕ್ಕೆ ಮುಂದಾಗಿದ್ದ. ವಿನಾಕಾರಣ ಕಾನೂನು ಉಲ್ಲಂಘಿಸಿ ಕೊಲೆ ಯತ್ನ, ಕೊಲೆ ಬೆದರಿಕೆ, ಹಲ್ಲೆ, ರಾಬರಿ, ಅವಾಚ್ಯ ಶಬ್ದಗಳಿಂದ ನಿಂದನೆ ಇನ್ನಿತರ ಅಪರಾಧಿಕ ಕೃತ್ಯಗಳನ್ನು ನಡೆಸಿ ಜೈಲು ಸೇರಿದ್ದ. ನ್ಯಾಯಾಲಯದಲ್ಲಿ ಷರತ್ತುಬದ್ಧ ಜಾಮೀನು ಪಡೆದು ಕಾರಾಗೃಹದಿಂದ ಬಿಡುಗಡೆಯಾದ ನಂತರವೂ ತನ್ನ ಸಹಚರರನ್ನು ಒಗ್ಗೂಡಿಸಿ, ಕಾನೂನು ಬಾಹಿರ ಚಟುವಟಿಕೆಗಳಲ್ಲಿ ತೊಡಗಲು ಪ್ರಯತ್ನ ನಡೆಸಿದ್ದ. ಸಾಕ್ಷಿದಾರರಿಗೆ ತನ್ನ ವಿರುದ್ಧ ಸಾಕ್ಷಿ ಹೇಳದಂತೆ ಬೆದರಿಸಿ ಸಾರ್ವಜನಿಕರಲ್ಲಿ ಭಯ ಹುಟ್ಟಿಸಿದ್ದ. ಹಾಗಾಗಿ ಈತ ಕಾನೂನು ಮತ್ತು ಸುವ್ಯವಸ್ಥೆಗೆ ಧಕ್ಕೆಯುಂಟು ಮಾಡುವುದರ ಜೊತೆಗೆ ಗೂಂಡಾವರ್ತನೆಯೊಂದಿಗೆ ಸಾರ್ವಜನಿಕರ ಜೀವ ಮತ್ತು ಆಸ್ತಿಗೆ ಹಾನಿ ಮಾಡುವ ಸಂಭವವಿದೆ ಎಂದು ತಿಳಿದುಬಂದಿದ್ದರಿಂದ ಮೈಸೂರು ನಗರದಿಂದ ರಾಮನಗರ ಜಿಲ್ಲೆಗೆ 6 ತಿಂಗಳ ಕಾಲ ಗಡಿಪಾರು ಮಾಡಲಾಗಿದೆ ಎಂದು ತಿಳಿಸಿದರು.

ಡೆವಲಪರ್‌ಗಳಿಗೆ ಅನುಕೂಲಕಾರಿ ನಿರ್ಧಾರ

ವರ್ಷದ ಹಿಂದೆಯೇ ಪ್ರಾರಂಭಿಕ ಹಣ ಪಾವತಿಸಿ ಅರ್ಜಿ ಸಲ್ಲಿಸಿದ್ದ ಹಲವಾರು ಸಂಘ ಸಂಸ್ಥೆಗಳು ನಿರೀಕ್ಷಿಸಿದ್ದವಾದರೂ ಈ ವಿಷಯ ವನ್ನು ಚರ್ಚೆಗೆ ಕೈಗೆತ್ತಿಕೊಳ್ಳಲಿಲ್ಲ ಮುಡಾದ ಮಹತ್ವದ ಯೋಜನೆಯಾದ ಬಹುಮಹಡಿ ವಸತಿ ಸಮುಚ್ಚಯ ನಿರ್ಮಿಸಿ ಕೈಗೆಟಕುವ ದರದಲ್ಲಿ ಮನೆಗಳನ್ನು ಹಂಚಿಕೆ ಮಾಡುವ ಬಗ್ಗೆ ಸರ್ಕಾರದ ಅನುಮೋದನೆ ಪಡೆಯುವ ಕುರಿತು ಚರ್ಚೆಯೇ ನಡೆದಿಲ್ಲ. ಕಬಿನಿ ಕುಡಿಯುವ ನೀರು ಯೋಜನೆಗೆ 2ನೇ ಹಂತದಲ್ಲಿ ಅನುದಾನ ನೀಡುವ ಬಗ್ಗೆಯೂ ಪ್ರಸ್ತಾಪವಾಗಿಲ್ಲ. ಬಹು ನಿರೀಕ್ಷಿತ ಪೆರಿಫೆರಲ್ ರಸ್ತೆ ನಿರ್ಮಾಣ ಯೋಜನೆಗೆ ಡಿಪಿಆರ್ ಸಿದ್ಧಪಡಿಸಲು ಹಣ ಮಂಜೂರಾತಿಗೆ ಅನುಮತಿ ಕುರಿತು ಈ ಸಭೆಯಲ್ಲಿ ಪ್ರಸ್ತಾಪವಾಗಿಲ್ಲ. 2023ನೇ ಸಾಲಿನ ಬಜೆಟ್ ತಯಾರಿ ಬಗ್ಗೆಯೂ ಕೂಡ ಸಭೆಯಲ್ಲಿ ಚರ್ಚಿಸಿಲ್ಲ.


ಬೆಳಗ್ಗೆ 11.15ಕ್ಕೆ ಪ್ರಾರಂಭವಾದ ಸಭೆ ಸಂಜೆ 4.30ಕ್ಕೆ ಮುಕ್ತಾಯವಾಯಿತಾದರೂ ಈ ಸಭೆಯು ಖಾಸಗಿ ಬಡಾವಣೆಗಳ ನಕ್ಷೆ ಅನುಮೋದನೆ, ಭೂ ಪರಿವರ್ತನೆ, ನಿವೇಶನ ಬಿಡುಗಡೆಗೆ ಅನುಮತಿ ನೀಡುವ ವಿಷಯಗಳಿಗೆ ಮಾತ್ರ ಸೀಮಿತವಾಗಿತ್ತು. ಆರು ತಿಂಗಳ ನಂತರ ಮುಡಾ ಸಭೆ ನಡೆಯುತ್ತಿದ್ದರಿಂದ ಈ ಕಚೇರಿ ಸುತ್ತಮುತ್ತ ಡೆವಲಪರ್‌ಗಳು, ರಿಯಲ್ ಎಸ್ಟೇಟ್ ಉದ್ಯಮಿಗಳು ಹಾಗೂ ಖಾಸಗಿ ಬಡಾವಣೆಗಳಿಗೆ ಸಂಬಂಧಿಸಿದವರು ನೂರಾರು ಸಂಖ್ಯೆಯಲ್ಲಿ ಜಮಾಯಿಸಿದ್ದು ಕಂಡುಬಂತು.

ಗುಂಡು ತಗುಲಿ 'ಬಲರಾಮ'ನಿಗೆ ಗಾಯ

ಶಿಬಿರದ ಸಿಬ್ಬಂದಿ ಶಬ್ದ ಬಂದ ಕಡೆ ತೆರಳಿದಾಗ ಶಿಬಿರಕ್ಕೆ ಹೊಂದಿಕೊಂಡಂತಿರುವ ಜಮೀನಿನಲ್ಲಿ ಬಲರಾಮ ಗಾಯಗೊಂಡು ಬಿದ್ದಿರುವ ದೃಶ್ಯ ಕಂಡು ಬಂದಿದೆ. ಸುತ್ತಮುತ್ತಲೂ ಪರಿಶೀಲಿಸಿದಾಗ ಅನತಿ ದೂರದಲ್ಲಿ ಮರದ ಮೇಲೆ ಕಟ್ಟಿದ್ದ ಅಟ್ಟಿಗೆಯ ಮೇಲೆ ರೈತ ಸುರೇಶ್ ಬಂದೂಕು ಸಮೇತ ಇರುವುದೂ ಕೂಡ ಕಂಡು ಬಂದಿದೆ. ತಕ್ಷಣವೇ ಕಾರ್ಯಪ್ರವೃತ್ತರಾದ ಅರಣ್ಯ ಇಲಾಖೆ ಸಿಬ್ಬಂದಿ ಸುರೇಶ್‌ನನ್ನು ವಶಕ್ಕೆ ಪಡೆದಿದ್ದಾರೆ. ಅಲ್ಲದೇ ಪಶು ವೈದ್ಯ ಡಾ.ರಮೇಶ್ ಅವರನ್ನು ಕರೆಸಿ, ಬಲರಾಮನಿಗೆ ಚಿಕಿತ್ಸೆ ಕೊಡಿಸಿದ್ದಾರೆ. ನಾಡ ಬಂದೂಕಿನಿಂದ ಗುಂಡು ಹಾರಿಸಿದ ಪರಿಣಾಮ ಬಲರಾಮನ ಬಲ ಮುಂಗಾಲಿನ ಮೇಲೆ 35 ಚರ್‍ರೆಗಳು ಹೊಕ್ಕಿದ್ದವು. ಪಶು ವೈದ್ಯಾಧಿಕಾರಿಯು ಸ್ಥಳದಲ್ಲೇ ಬಲರಾಮನ ಮೈಗೆ ಹೊಕ್ಕಿದ್ದ ಚರ್‍ರೆ ಹಾಗೂ ಸೈಕಲ್ ಬಾಲ್‌ನಂತಹ ಗುಂಡುಗಳನ್ನು ಹೊರ ತೆಗೆದು ಡ್ರೆಸ್ಸಿಂಗ್ ಮಾಡಿದ್ದಲ್ಲದೇ ಚಿಕಿತ್ಸೆ ನೀಡಿದ್ದಾರೆ. ಕೆಲ ನಿಮಿಷಗಳಲ್ಲೇ ಚೇತರಿಸಿಕೊಂಡ ಬಲರಾಮನನ್ನು ಮಾವುತರು ಹಾಗೂ ಕಾವಾಡಿಗಳು ಶಿಬಿರಕ್ಕೆ ಕರೆತಂದಿದ್ದಾರೆ. ಬಲರಾಮ ಪ್ರಾಣಾಪಾಯದಿಂದ ಪಾರಾಗಿದ್ದು, ಶಿಬಿರದಲ್ಲಿ ಚಿಕಿತ್ಸೆ ಮುಂದುವರೆದಿದೆ ಎಂದು ಅರಣ್ಯಾಧಿಕಾರಿಗಳು ತಿಳಿಸಿದ್ದಾರೆ. ಕಾಡಿಗೆ ಹೊಂದಿಕೊಂಡಂತಿರುವ ತನ್ನ ಜಮೀನಿನಲ್ಲಿ ರೈತ ಸುರೇಶ, ಭತ್ತ ಮತ್ತು ಜೋಳ ಬೆಳೆದಿದ್ದಾನೆ. ರಾತ್ರಿ ವೇಳೆ ಕಾಡುಪ್ರಾಣಿಗಳು ಜಮೀನಿಗೆ ನುಗ್ಗಿ ಬೆಳೆ ನಾಶಪಡಿಸುವುದನ್ನು ತಡೆಯುವ ಸಲುವಾಗಿ ಜಮೀನಿನ ಮರದ ಮೇಲೆ ಅಟ್ಟಿಗೆ ಕಟ್ಟಿಕೊಂಡು ರಾತ್ರಿ ವೇಳೆ ನಾಡ ಬಂದೂಕು ಸಮೇತ ಕಾವಲು ಕಾಯುತ್ತಿದ್ದ. ಬಲರಾಮ ಜಮೀನಿಗೆ ನುಗ್ಗಿದಾಗ ಕಾಡಾನೆ ಬಂದಿರಬಹುದು ಎಂದು ಭಾವಿಸಿ ಅದರ ಮೇಲೆ ಗುಂಡು ಹಾರಿಸಿದ್ದಾನೆ. ಗುಂಡಿನ ಶಬ್ದ ಕೇಳಿ ತಕ್ಷಣವೇ ಸಿಬ್ಬಂದಿ ಸ್ಥಳಕ್ಕೆ ದೌಡಾಯಿಸಿದ್ದರಿಂದ ಅಟ್ಟಿಗೆ ಮೇಲೆ ಇದ್ದ ಆತ ಸಿಕ್ಕಿಬಿದ್ದಿದ್ದಾನೆ. ಆನೆಯನ್ನು ಓಡಿಸಲು ಗಾಳಿಯಲ್ಲಿ ಗುಂಡು ಹಾರಿಸಬಹುದಿತ್ತಾದರೂ, ಈ ರೈತ ಆನೆಯ ಮೇಲೆಯೇ ಗುಂಡು ಹಾರಿಸಿದ್ದಾನೆ. ನಾಡ ಬಂದೂಕಿನಲ್ಲಿ ಗುಂಡು ಹಾರಿಸಿದರೆ ಆನೆ ಪ್ರಾಣಕ್ಕೆ ಅಪಾಯವಾಗುವ ಸಾಧ್ಯತೆ ಕಡಿಮೆ. ಆದರೆ ಬಂದೂಕಿನಿಂದ ಹೊರ ಬರುವ ಚರ್‍ರೆಗಳು ಆನೆಯನ್ನು ಗಾಯಗೊಳಿಸುತ್ತವೆ ಎಂದು ಹೇಳಲಾಗಿದೆ.

2.70.ಮೀ. ಎತ್ತರ 3.70 ಮೀ. ಉದ್ದ 4,980 ಕೆ.ಜಿ. ತೂಕವಿರುವ ಬಲರಾಮನನ್ನು 1987ರಲ್ಲಿ ಕೊಡಗು ಜಿಲ್ಲೆಯ ಕಟ್ಟೆಪುರ ಅರಣ್ಯ ಪ್ರದೇಶದಲ್ಲಿ ಸೆರೆ ಹಿಡಿಯಲಾಗಿತ್ತು. ಸೌಮ್ಯ ಸ್ವಭಾವದ ಬಲಶಾಲಿ ಬಲರಾಮ 22 ವರ್ಷ ನಾಡ ಹಬ್ಬ ದಸರಾದಲ್ಲಿ ಭಾಗವಹಿಸಿದ್ದ ಅನುಭವ ಹೊಂದಿದ್ದಾನೆ. ದಸರೆಯಲ್ಲಿ ಅತೀ ಹೆಚ್ಚು ಬಾರಿ ಅಂಬಾರಿ ಹೊತ್ತಿರುವ ದ್ರೋಣನ ನಂತರದ ಸ್ಥಾನವನ್ನು ಪಡೆದಿದ್ದಾನೆ. ದ್ರೋಣ ಕಾಡಿನಲ್ಲಿ ವಿದ್ಯುತ್ ತಂತಿ ತಗುಲಿ ಸಾವನ್ನಪ್ಪಿದ ನಂತರ ಅಂಬಾರಿ ಹೊರುವ ಹೊಣೆಯನ್ನು ಅರ್ಜುನನಿಗೆ ನೀಡಲಾಗಿತ್ತು. ಒಂದು ವರ್ಷ ಅಂಬಾರಿ ಹೊತ್ತಿದ್ದ ಅರ್ಜುನ, ಎರಡನೇ ವರ್ಷ ದಸರೆಗೆ ಆಗಮಿಸಿದ್ದಾಗ ಮಾವುತನನ್ನು ಆಕಸ್ಮಿಕವಾಗಿ ತುಳಿದು ಕೊಂದ ಕಾರಣದಿಂದ ಅಂಬಾರಿ ಹೊರುವ ಹೊಣೆಗಾರಿಕೆಯನ್ನು ಬಲರಾಮನಿಗೆ ವಹಿಸಲಾಯಿತು. 1999ರಿಂದ 2011ರವರೆಗೂ ಸತತ 13 ಬಾರಿ ಯಶಸ್ವಿಯಾಗಿ ಅಂಬಾರಿ ಹೊತ್ತು ಸಾಗಿದ ಬಲರಾಮನಿಗೆ ವಯಸ್ಸಿನ ಕಾರಣದಿಂದ ಅಂಬಾರಿ ಹೊರುವ ಹೊಣೆಗಾರಿಕೆಯಿಂದ ಬಿಡಿಸಲಾಯಿತು. ಆನಂತರ 2018ರವರೆಗೆ ದಸರೆಯಲ್ಲಿ ನಿಶಾನೆ ಆನೆಯಾಗಿ ಜಂಬೂ ಸವಾರಿಯನ್ನು ಬಲರಾಮ ಮುನ್ನಡೆಸುತ್ತಿದ್ದ. 2018ರ ನಂತರ ದಸರೆಗೆ ಬಲರಾಮನನ್ನು ಕರೆತರುತ್ತಿಲ್ಲ. ಒಟ್ಟಾರೆ 22 ವರ್ಷ ಕಾಲ ಜಂಬೂ ಸವಾರಿಯಲ್ಲಿ ಭಾಗವಹಿಸಿದ ದಾಖಲೆಯನ್ನು ಹೊಂದಿರುವ ಬಲರಾಮ ಬಲಗಣ್ಣಿನ ದೃಷ್ಟಿ ಕಳೆದುಕೊಂಡಿದ್ದರೂ, 750 ಕೆ.ಜಿ. ತೂಕದ ಚಿನ್ನದ ಅಂಬಾರಿ ಸೇರಿದಂತೆ 1100 ಕೆ.ಜಿ. ಭಾರವನ್ನು ಹೊತ್ತು ಸುಮಾರು 2 ಗಂಟೆಗಳ ಕಾಲ ನಿಂತು ನಂತರ ಅರಮನೆಯಿಂದ ಬನ್ನಿಮಂಟಪದವರೆಗೂ ಅದನ್ನು ಹೊತ್ತು ಸಾಗುವ ಸಾಮರ್ಥ್ಯ ಹೊಂದಿದ್ದ.


ನಿಧನ



ಡಾ. ಎಸ್. ಶ್ರೀನಿವಾಸಮೂರ್ತಿ

ಮೈಸೂರು, ಡಿ. 16– ಮೈಸೂರಿನ ಕುವೆಂಪುನಗರ ನಿವಾಸಿ ಹಾಗೂ ಮಾಜಿ ಶಾಸಕ ದಿ.ವಿ.ವಾಸುದೇವ ಅವರ ಭಾವ (ತಂಗಿಯ ಗಂಡ) ಡಾ.ಎಸ್.ಶ್ರೀನಿವಾಸಮೂರ್ತಿ ಡಿ.14ರಂದು ನಿಧನರಾದರು. ಮೃತರು ಪತ್ನಿ ಕಮಲಾಕ್ಷಿ, ಪುತ್ರಿ ಸ್ಮಿತಾ, ಪುತ್ರ ರಾಘವೇಂದ್ರ, ಮೊಮ್ಮಕ್ಕಳು ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ನಾಳೆ (ಡಿ. 17) ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಶ್ರೀಮತಿ ರುಕ್ಮಿಣಮ್ಮ



ಮೈಸೂರು, ಡಿ.16– ಮೈಸೂರು ಚಾಮರಾಜ ಮೊಹಲ್ಲಾ ಸೋನಾರ್ ಸ್ಟ್ರೀಟ್, ಡಿ.ಸುಬ್ಬಯ್ಯ ರಸ್ತೆಯ ನಿವಾಸಿ ಲೇಟ್ ವೈ ಮುನಿಯಪ್ಪ ಅವರ ಧರ್ಮಪತ್ನಿ ರುಕ್ಮಿಣಮ್ಮ(82) ಶುಕ್ರವಾರ ನಿಧನರಾದರು. ಮೃತರು ಓರ್ವ ಪುತ್ರ, ಮೂವರು ಪುತ್ರಿಯರು ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಇವರ ಕೊನೆಯ ಪುತ್ರಿ ಅಮೇರಿಕಾದಿಂದ ಬರಬೇಕಾಗಿರುವ ಹಿನ್ನೆಲೆಯಲ್ಲಿ ಭಾನುವಾರ 11 ಗಂಟೆಗೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬ ಮೂಲಗಳು ತಿಳಿಸಿವೆ.

ಪ್ರವಾಸೋದ್ಯಮ ಬೆಳವಣಿಗೆ ದೃಷ್ಟಿಯಿಂದ 'ಮೈಸೂರು ಮಾಗಿ ಉತ್ಸವ'

ಡಿಸೆಂಬರ್ ಬದಲು ಜನವರಿ ಮೊದಲ ವಾರ ಆಯೋಜಿಸುವುದು ಸೂಕ್ತ

ಮೈಸೂರು ಜಿಲ್ಲಾಡಳಿತಕ್ಕೆ ಹೋಟೆಲ್ ಮಾಲೀಕರ ಸಂಘ ಸಲಹೆ



ಮೈಸೂರು, ಡಿ.16(ಆರ್‌ಕೆಬಿ)– 'ಮೈಸೂರು ಮಾಗಿ ಉತ್ಸವ'ವನ್ನು ಡಿಸೆಂಬರ್ ಬದಲು ಜನವರಿಯಲ್ಲಿ ಆಯೋಜಿಸುವಂತೆ ಮೈಸೂರು ಹೋಟೆಲ್ ಮಾಲೀಕರ ಸಂಘ ಮತ್ತು ಹೋಟೆಲ್ ಮಾಲೀಕರ ಸಂಘ ಚಾರಿಟಬಲ್ ಟ್ರಸ್ಟ್ ಜಿಲ್ಲಾಡಳಿತವನ್ನು ಒತ್ತಾಯಿಸಿವೆ.

ಮೈಸೂರು ಪತ್ರಕರ್ತರ ಭವನದಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ, ಹಲವು ಬಹುರಾಷ್ಟ್ರೀಯ ಕಂಪನಿಗಳು ಮತ್ತು ಶಾಲೆಗಳು ಡಿಸೆಂಬರ್‌ನಲ್ಲಿ ಕ್ರಿಸ್‌ಮಸ್ ಮತ್ತು ಹೊಸ ವರ್ಷಕ್ಕೆ ರಜೆ ಘೋಷಿಸುವುದರಿಂದ ಪ್ರವಾಸಿಗರು ಹೆಚ್ಚಿನ ಸಂಖ್ಯೆಯಲ್ಲಿ ಮೈಸೂರಿಗೆ ಆಗಮಿಸುತ್ತಾರೆ. ಆಗ ಹೆಚ್ಚಿನ ವಾಹನ ಮತ್ತು ಜನದಟ್ಟಣೆಯಿಂದ ಮೈಸೂರಿನಲ್ಲಿ ಟ್ರಾಫಿಕ್ ಜಾಮ್ ಆಗಲಿದೆ. ಈ ವೇಳೆ ಆಗುವಂತಹ ಕಿರಿಕಿರಿಯಿಂದ ಅನೇಕ ಪ್ರವಾಸಿಗರು ಮಾಗಿ ಉತ್ಸವದಲ್ಲಿ ಭಾಗವಹಿಸಲು ಸಾಧ್ಯವಾಗುವುದಿಲ್ಲ. ಹಾಗಾಗಿ ಜನವರಿಯಲ್ಲಿ ಸಂಕ್ರಾಂತಿ ಆಸುಪಾಸಿನಲ್ಲಿ ಮಾಗಿ ಉತ್ಸವ ಆಯೋಜಿಸುವುದು ಸೂಕ್ತ ಎಂದು ಸಲಹೆ ನೀಡಿದರು. ಮಾಗಿ ಉತ್ಸವ (ಚಳಿಗಾಲದ ಉತ್ಸವ) ನಡೆಸುವುದರಿಂದ ಹೆಚ್ಚುವರಿ ಪ್ರವಾಸಿಗರ ಹರಿವು ಟ್ರಾಫಿಕ್ ಜಾಮ್‌ಗೆ ಕಾರಣವಾಗುತ್ತದೆ. ಹೋಟೆಲ್, ಲಾಡ್ಜ್‌ಗಳಲ್ಲಿಯೂ ಕೊಠಡಿಗಳ ಕೊರತೆ ಉಂಟಾಗಿ ಪ್ರವಾಸಿಗರು ತೊಂದರೆಗೆ ಸಿಲುಕುತ್ತಾರೆ. ಅನೇಕ ಪ್ರವಾಸಿಗರ ಅಗತ್ಯಗಳನ್ನು ಪೂರೈಸಲು ಸಾಧ್ಯವಾಗದೆ ಪ್ರವಾಸಿಗರು ನಿರಾಸೆಯಿಂದ ಹಿಂದಿರುಗುತ್ತಾರೆ. ಹಾಗಾಗಿ ಸಂಕ್ರಾಂತಿ ಹಬ್ಬದ ಆಸುಪಾಸಿನಲ್ಲಿ ಅಂದರೆ ಜನವರಿ ಮೊದಲ ಅಥವಾ ಎರಡನೇ ವಾರದಲ್ಲಿ ಮಾಗಿ ಉತ್ಸವ ಆಯೋಜಿಸಿದರೆ ಪ್ರವಾಸಿಗರು ಹೆಚ್ಚಿನ ಸಂಖ್ಯೆಯಲ್ಲಿ ಉತ್ಸವದಲ್ಲಿ ಭಾಗವಹಿಸಲು ಅವಕಾಶ ಆಗುವುದರ ಜೊತೆಗೆ, ಅವರಿಗೆ ಬೇಕಾದ ವಸತಿ ಕಲ್ಪಿಸಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ಜನವರಿಯಲ್ಲಿ ಮಾಗಿ ಉತ್ಸವ ನಡೆಸುವುದರಿಂದ ಈಗಾಗಲೇ ಕೋವಿಡ್‌ನಿಂದ ಸಂಕಷ್ಟಕ್ಕೀಡಾಗಿದ್ದ ಹೋಟೆಲ್ ಉದ್ಯಮಕ್ಕೂ ಚೇತರಿಕೆ ಸಾಧ್ಯವಾಗುತ್ತದೆ. ಅಲ್ಲದೆ ಪ್ರವಾಸಿಗರೂ ಯಾವುದೇ ಸಮಸ್ಯೆ ಇಲ್ಲದಂತೆ ಮಾಗಿ ಉತ್ಸವದಲ್ಲಿ ಪಾಲ್ಗೊಳ್ಳಲು ಸಹಾಯಕವಾಗುತ್ತದೆ. ಈ ಬಗ್ಗೆ ಜಿಲ್ಲಾಧಿಕಾರಿಗಳ ಗಮನಕ್ಕೂ ತರಲಾಗಿದೆ ಎಂದು ಹೇಳಿದರು.

ಮಾಗಿ ಉತ್ಸವ ಆಚರಣೆಗೂ ಮುನ್ನ ಅಧಿಕಾರಿಗಳು ಹಿಂದಿನ ವರ್ಷಗಳಂತೆ ಪ್ರವಾಸೋದ್ಯಮ ಪಾಲುದಾರರನ್ನು (ಹೋಟೆಲ್, ಟ್ರಾವೆಲ್ಸ್, ಗೈಡ್ಸ್) ಸಭೆ ಕರೆದು ಚರ್ಚಿಸುತ್ತಿಲ್ಲ ಎಂದು ನಾರಾಯಣ ಗೌಡ ದೂರಿದರು. ಈಗಲಾದರೂ ಪ್ರವಾಸೋದ್ಯಮ ಪಾಲುದಾರರನ್ನು ಕರೆದು ಅಗತ್ಯ ಸಲಹೆಗಳನ್ನು ಪಡೆದು ಮಾಗಿ ಉತ್ಸವ ಆಚರಿಸುವಂತೆ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಗಿದೆ ಎಂದು ತಿಳಿಸಿದರು.

ಬಂಡೀಪುರ ಸಂಚಾರ ನಿಷೇಧ: ಬಂಡೀಪುರ ಹುಲಿ ರಕ್ಷಿತಾರಣ್ಯ ಪ್ರದೇಶದಲ್ಲಿ ರಾತ್ರಿ ಸಂಚಾರ ನಿಷೇಧವನ್ನು ರಾತ್ರಿ 9ರ ಬದಲು ಸಂಜೆ 6 ಗಂಟೆಯಿಂದ ಬೆಳಗ್ಗೆ 6 ಗಂಟೆಯವರೆಗೆ ಜಾರಿಗೊಳಿಸಬೇಕು. ಇದರಿಂದ ವೇಗವಾಗಿ ಸಂಚರಿಸುವ ವಾಹನಗಳಿಂದಾಗುವ ಅಪಘಾತದಿಂದ ಅಮೂಲ್ಯ ವನ್ಯ ಪ್ರಾಣಿಗಳ ಜೀವಹರಣ ನಿಯಂತ್ರಿಸಬಹುದು ಎಂದು ಸಲಹೆ ನೀಡಿದರು.

ಪತ್ರಿಕಾಗೋಷ್ಠಿಯಲ್ಲಿ ಸಂಘದ ಗೌರವ. ಕಾರ್ಯದರ್ಶಿ ಎ.ಆರ್.ರವೀಂದ್ರ ಭಟ್, ಸಹಕಾರ ಸಂಘದ ಅಧ್ಯಕ್ಷ ಸುಬ್ರಹ್ಮಣ್ಯ ತಂತ್ರಿ, ಸಂಘದ ಪದಾಧಿಕಾರಿಗಳಾದ ಮಹೇಶ್ ಕಾಮತ್, ಕೆ.ಭಾಸ್ಕರ್ ಶೆಟ್ಟಿ ಉಪಸ್ಥಿತರಿದ್ದರು.

ರಾಜ್ಯದಲ್ಲಿ ಸ್ಥಳೀಯ ಚುನಾವಣೆ ಮತ್ತಷ್ಟು ತಡ

ಒಬಿಸಿಗೆ ರಾಜಕೀಯ ಪ್ರಾತಿನಿಧ್ಯ ಅಂತಿಮಗೊಳಿಸಲು ಮಾ. 31ರ ಗಡುವು

ನವದೆಹಲಿ: ಕರ್ನಾಟಕದ ಸ್ಥಳೀಯ ಸಂಸ್ಥೆ ಗಳಲ್ಲಿ ಇತರ ಹಿಂದುಳಿದ ವರ್ಗಗಳಿಗೆ (ಒಬಿಸಿ) ರಾಜಕೀಯ ಪ್ರಾತಿನಿಧ್ಯ ವನ್ನು ಅಂತಿಮಗೊಳಿಸುವ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ಕರ್ನಾಟಕ ಸರ್ಕಾರಕ್ಕೆ ಮಾರ್ಚ್ 31ರವರೆಗೆ ಸುಪ್ರೀಂ ಕೋರ್ಟ್ ಕಾಲಾವಕಾಶ ನೀಡಿದೆ.

ಈ ಬೆಳವಣಿಗೆಯಿಂದಾಗಿ ಬಿಬಿಎಂಪಿ ಸೇರಿದಂತೆ ಸ್ಥಳೀಯ ಸಂಸ್ಥೆಗಳ ಚುನಾವಣೆ ಇನ್ನಷ್ಟು ವಿಳಂಬವಾಗುವ ಸಾಧ್ಯತೆ ಇದೆ. ಬಿಬಿಎಂಪಿ ವಾರ್ಡ್‌ಗಳಲ್ಲಿ ಇತರ ಹಿಂದುಳಿದ ವರ್ಗಗಳಿಗೆ (ಒಬಿಸಿ) ಶೇ 33 ರಷ್ಟು ಸೀಟುಗಳನ್ನು ಮೀಸಲಿಡುವ ವಿವಾದಕ್ಕೆ ಸಂಬಂಧಿಸಿದಂತೆ ಕರ್ನಾಟಕ ಸರ್ಕಾರ ಹಾಗೂ ಇತರ ಪ್ರತಿವಾದಿಗಳಿಗೆ ಸುಪ್ರೀಂ ಕೋರ್ಟ್ ಕಳೆದ ಶುಕ್ರವಾರ ನೋಟಿಸ್ ಜಾರಿ ಮಾಡಿತ್ತು. ನ್ಯಾಯಮೂರ್ತಿಗಳಾದ ಎಸ್. ಅಬ್ದುಲ್ ನಜೀರ್ ಹಾಗೂ ಹಿಮಾ ಕೊಹ್ಲಿ ಅವರನ್ನು ಒಳಗೊಂಡ ಪೀಠವು ಗುರುವಾರ ಪ್ರಕರಣದ ವಿಚಾರಣೆ ನಡೆಸಿತು. ಈ ವೇಳೆ, ಕರ್ನಾಟಕ ಸರ್ಕಾರದ ಪರವಾಗಿ ವಾದ ಮಂಡಿಸಿದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, ಮೀಸಲಾತಿ ನಿಗದಿಪಡಿಸಲು ಪ್ರಾಯೋಗಿಕ ದತ್ತಾಂಶ ಸಂಗ್ರಹ ಸೇರಿದಂತೆ ಎಲ್ಲ ಪ್ರಕ್ರಿಯೆಗಳನ್ನು ನಡೆಸಲು ಆಯೋಗ ನೇಮಿಸಲಾಗಿದೆ ಎಂದರು. ಇದರಿಂದಾಗಿ ಚುನಾವಣಾ ಪ್ರಕ್ರಿಯೆ ವಿಳಂಬವಾಗುತ್ತಿದೆ ಎಂದು ಕರ್ನಾಟಕ ರಾಜ್ಯ ಚುನಾವಣಾ ಆಯೋಗದ ವಕೀಲರು ಗಮನ ಸೆಳೆದರು.

ವಿಳಂಬದ ಬಗ್ಗೆ ಚುನಾವಣಾ ಆಯೋಗ ಚಿಂತಿಸಬಾರದು ಎಂದು ಮೆಹ್ತಾ ಹೇಳಿದರು. ಕರ್ನಾಟಕ ಹೈಕೋರ್ಟ್‌ನ ಆದೇಶದ ನಂತರ, ಒಬಿಸಿಗಳಿಗೆ ಮೀಸಲಾತಿ ನೀಡಲು ಸುಪ್ರೀಂಕೋರ್ಟ್ ನಿಗದಿಪಡಿಸಿದ ಟ್ರಿಪಲ್ ಟೆಸ್ಟ್ (ಮೂರು ಹಂತದ ಪರಿಶೀಲನೆ) ಮಾನದಂಡ ಅನುಸರಿಸಲು ಹೊಸ ಕಸರತ್ತು ನಡೆಸಲಾಗುತ್ತಿದೆ ಎಂದೂ ಹೇಳಿದರು.

ಬಿಬಿಎಂಪಿಯ 243 ವಾರ್ಡ್‌ಗಳಲ್ಲಿ ಶೇ 33ರಷ್ಟು ಒಬಿಸಿ ಕೋಟಾ ನಿಗದಿಪಡಿಸಲು ರಾಜ್ಯ ಸರ್ಕಾರ ಆಗಸ್ಟ್ 16ರಂದು ಹೊರಡಿಸಿದ್ದ ಅಧಿಸೂಚನೆಯನ್ನು ಕರ್ನಾಟಕ ಹೈಕೋರ್ಟ್ ಅಕ್ಟೋಬರ್‌ನಲ್ಲಿ ರದ್ದುಗೊಳಿಸಿತ್ತು. ಈ ಮೀಸಲು ನಿಗದಿ ನಿರ್ಧಾರವನ್ನು ಕೇವಲ ಕಾಲ್ಪನಿಕ ದತ್ತಾಂಶಗಳನ್ನು ಆಧರಿಸಿ ತೆಗೆದುಕೊಳ್ಳಲಾಗಿದೆ. ಯಾವುದೇ ವೈಜ್ಞಾನಿಕ ಪ್ರಕ್ರಿಯೆಗಳನ್ನು ನಡೆಸಿಲ್ಲ ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿತ್ತು.

ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಎಂ.ಕೆ.ಭಕ್ತವತ್ಸಲ ನೇತೃತ್ವದ ಸಮಿತಿಯ ಶಿಫಾರಸಿನ ಆಧಾರದ ಮೇಲೆ ಸರ್ಕಾರ ಈ ನಿರ್ಧಾರ ಕೈಗೊಂಡಿದೆ. ಆದರೆ, ಇದು ಸುಪ್ರೀಂ ಕೋರ್ಟ್ ನಿಗದಿಪಡಿಸಿರುವ ಮೂರು ಹಂತದ ಪರಿಶೀಲನೆಗೆ ವಿರುದ್ಧವಾಗಿದೆ ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿತ್ತು. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ (ಬಿಬಿಎಂಪಿ) ಅವಧಿ 2020ರ ಸೆಪ್ಟೆಂಬರ್ 10ರಂದು ಕೊನೆಗೊಂಡಿದೆ.

ಆರು ವಾರಗಳಲ್ಲಿ ಬಿಬಿಎಂಪಿ ಚುನಾವಣೆ ನಡೆಸುವಂತೆ ರಾಜ್ಯ ಚುನಾವಣಾ ಆಯೋಗಕ್ಕೆ ಸೂಚಿಸಿ, 2020ರ ಡಿಸೆಂಬರ್ 4ರಂದು ರಾಜ್ಯ ಹೈಕೋರ್ಟ್ ಹೊರಡಿಸಿದ್ದ ಆದೇಶವನ್ನು ಸುಪ್ರೀಂ ಕೋರ್ಟ್ 2020ರ ಡಿಸೆಂಬರ್ 18ರಂದು ಅಮಾನತಿನಲ್ಲಿ ಇರಿಸಿತ್ತು.

ಕರ್ನಾಟಕ ಮುನಿಸಿಪಲ್ ಕಾರ್ಪೊರೇಷನ್ (ತಿದ್ದುಪಡಿ) ಕಾಯ್ದೆ 2020ರ ಅನ್ವಯ ರಚಿಸಲಾಗುವ 243 ವಾರ್ಡ್‌ಗಳ ಬದಲಿಗೆ, ಮೊದಲಿದ್ದ 198 ವಾರ್ಡ್‌ಗಳಿಗೆ ಚುನಾವಣೆ ನಡೆಸುವಂತೆ ಹೈಕೋರ್ಟ್ ನೀಡಿದ್ದ ಆದೇಶದ ಸಿಂಧುತ್ವ ಪ್ರಶ್ನಿಸಿ ಕರ್ನಾಟಕ ಸರ್ಕಾರ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿತ್ತು. ತ್ವರಿತಗತಿಯಲ್ಲಿ ಬೆಳೆಯುತ್ತಿರುವ ಬೆಂಗಳೂರು ನಗರದ ಸ್ಥಳೀಯ ಸಂಸ್ಥೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಇತರ ಹಿಂದುಳಿದ ವರ್ಗಗಳಿಗೆ ಸೂಕ್ತ ಪ್ರಾತಿನಿಧ್ಯ ನೀಡುವ ಸಂಬಂಧ, ವಾರ್ಡ್‌ಗಳ ಸಂಖ್ಯೆಯನ್ನು 198ರಿಂದ 243ಕ್ಕೆ ಹೆಚ್ಚಿಸಲೆಂದೇ ನೂತನ ಕಾನೂನನ್ನು ಅಂಗೀಕರಿಸಲಾಗಿದೆ ಎಂದು ಮೇಲ್ಮನವಿಯಲ್ಲಿ ಹೇಳಿತ್ತು.


ಮೇ 7ಕ್ಕೆ ನೀಟ್, ಮೇ 21ರಿಂದ 31ರವರೆಗೆ ಸಿಇಯುಟಿ ಪರೀಕ್ಷೆ

ನವದೆಹಲಿ: ವೈದ್ಯಕೀಯ ಪ್ರವೇಶ ಪರೀಕ್ಷೆ NEET-UG ನ್ನು ಮೇ 7, 2023 ರಂದು ನಡೆಸಲಾಗುವುದು ಎಂದು ರಾಷ್ಟ್ರೀಯ ಪರೀಕ್ಷಾ ಸಂಸ್ಥೆ(NTA) ಶುಕ್ರವಾರ ತಿಳಿಸಿದೆ.

ಸಾಮಾನ್ಯ ವಿಶ್ವವಿದ್ಯಾಲಯದ ಪ್ರವೇಶ ಪರೀಕ್ಷೆಯ (CUET) ಎರಡನೇ ಆವೃತ್ತಿಯನ್ನು ಮೇ 21 ರಿಂದ 31, 2023 ರವರೆಗೆ ನಡೆಸಲಾಗುವುದು ಎಂದು ಅದು ಪ್ರಕಟಿಸಿದೆ. ಪರೀಕ್ಷೆಗಳ ವೇಳಾಪಟ್ಟಿಯನ್ನು ಈ ವರ್ಷ ಮುಂಚಿತವಾಗಿ ಘೋಷಿಸಲಾಗಿದೆ ಎಂದು ಹಿರಿಯ ಎನ್‌ಟಿಎ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಗಣರಾಜ್ಯೋತ್ಸವದಂದು ಹೊರತುಪಡಿಸಿ ಜನವರಿ 24 ರಿಂದ 31 ರವರೆಗೆ ಎಂಜಿನಿಯರಿಂಗ್ ಪ್ರವೇಶ ಪರೀಕ್ಷೆ JEE-Main ನಡೆಸಲಾಗುವುದು ಎಂದು ಸಂಸ್ಥೆ ನಿನ್ನೆ ತಿಳಿಸಿತ್ತು. ಪರೀಕ್ಷೆಯ ಎರಡನೇ ಅವಧಿಯು ಏಪ್ರಿಲ್‌ನಲ್ಲಿ ನಡೆಯಲಿದೆ ಮತ್ತು ಪರೀಕ್ಷೆಗೆ ಅರ್ಜಿಗಳನ್ನು ಡಿಸೆಂಬರ್ 15 ರಿಂದ ಜನವರಿ 12 ರವರೆಗೆ ಸ್ವೀಕರಿಸಲಾಗುತ್ತದೆ ಎಂದು ತಿಳಿಸಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಋಷಿ ಮನೀಷಿಗಳು, ಲೇಖನ ದಾ. ಶ್ರೀ ರಾಮ್ ಭಟ್, ಪ್ರಸ್ತುತಿ–ದಿವಾಕರ ಹೆಗಡೆ, 6.40 ಹಾಡು ಹೇಳಿದ ಕಥೆ, ಲೇಖನ ಶ್ರೀನಿವಾಸ್ ಪ್ರಸಾದ್, 7.15 ಪ್ರಾಯೋಜಿತ ಕಾರ್ಯಕ್ರಮ ತ್ಯಾಜ್ಯ ನಿಭಾಯಿಸುವ ರೀತಿ–ಮನೆ ಬಾಗಿಲಿಗೆ ಸಮಗ್ರ ಮಾಹಿತಿ, 7.25 ಭಾವಗೀತೆ–ಶ್ರೀನಿವಾಸ ಉಡುಪ, 10.00 ಕೆ.ವಿ. ನಾರಾಯಣಸ್ವಾಮಿ – ಹಾಡುಗಾರಿಕೆ

ಮಧ್ಯಾಹ್ನ: 12.30 ದೇವರನಾಮ, 12.45 ಜನಪದ ಸಂಗೀತ–ನಿಂಗಮ್ಮ ಮತ್ತು ತಂಡ, 1.20 ಭಾವಗೀತೆ–ಹೆಚ್. ಭುವನೇಶ್ವರಿ, 3.30 ಮಕ್ಕಳ ಮಂಟಪ–ಮುಖಾಮುಖಿ, ಚಿತ್ರಕಲೆಯ ಕಲಿಕೆ ಕುರಿತು ಮಕ್ಕಳ ಪ್ರಶ್ನೆಗೆ ಉತ್ತರಿಸುತ್ತಾರೆ ಸತೀಶ್ ಎಸ್.ದಳವಾಯಿ, 4.30 ನೆನಪಿನಂಗಳ–ಹೆಸರಾಂತ ಚಿತ್ರ ಕಲಾವಿದರಾದ ಕಟ್ಟಿಂಗೇರಿ ಕೃಷ್ಣ ಹೆಬ್ಬಾರ್ ಅವರೊಂದಿಗೆ ವಿ.ಎಂ. ಶೋಲಾಪುರ್‌ಕರ್ ಅವರು ನಡೆಸಿದ್ದ ಸಂವಾದ, ಪ್ರಸ್ತುತಿ–ಎಸ್. ಲಕ್ಷ್ಮೀನಾರಾಯಣ, 6.50 ಕೃಷಿರಂಗ "ತೋರಣ ಹೂರಣ", ಪ್ರಸ್ತುತಿ–ಎಸ್. ಸುಬ್ರಹ್ಮಣ್ಯ, 9.15 ಭಾರತೀಯರ ಕಾಲಗಣನೆ, ಮಾತನಾಡುವವರು–ಶ್ರೀ ಕೃಷ್ಣ ಭಟ್, 9.30 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ, ಪಿ.ವಿ. ದಯಾಕರ್–ನಾಗಸ್ವರ ವಾದನ, ವಿ.ಎನ್. ಬಾಲಚಂದ್ರ – ಡೋಲು, 10.30 ಸವಿನೆನಪು

ಇಂದಿನ ಪಂಚಾಂಗ

17.12.2022 ಶನಿವಾರ, ಮಳೆ ನಕ್ಷತ್ರ: ಮೂಲ, 16.12.2022ರಿಂದ 29.12.2022
ಶ್ರೀ ಶುಭಕೃತ ನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಮಾರ್ಗಶಿರ ಮಾಸ, ಕೃಷ್ಣ ಪಕ್ಷ,
ತಿಥಿ: ನವಮಿ, ನಕ್ಷತ್ರ : ಹಸ್ತ, ರಾಹುಕಾಲ: ಬೆಳಗ್ಗೆ 9 ರಿಂದ 10.30ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಡಯಾಬಿಟಿಸ್ ಮತ್ತು ಸಂಧಿವಾತ ಕಾಯಿಲೆಗಳಿಗೆ ಉಚಿತ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಆಲನಹಳ್ಳಿ, ಬೆಳಗ್ಗೆ 9ರಿಂದ.

■ **ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ :** ವೆಬ್‌ಸೈಟ್ ಡೆವಲಪ್‌ಮೆಂಟ್ ಅಂಡ್ ಲೈವ್ ಹೋಸ್ಟಿಂಗ್ ಕಾರ್ಯಾಗಾರ, ಉಪಸ್ಥಿತರು: ಡಾ. ಡಿ.ಎನ್. ವಾಸುಕಿ, ಡಾ. ರೋಹಿಣಿ ನಾಗಪದ್ಮ, ಪುನೀತ್‌ಗೌಡ, ಶೌಕತ್ ಅಹಮದ್ ಕೊತವಾಲ್, ಅಬ್ದುಲ್ ರಹೀಮ್ ಸುತಾರ್, ಸ್ಥಳ: ಡೈಮಂಡ್ ಜ್ಯೂಬಿಲಿ ಸ್ಪೋರ್ಟ್ಸ್ ಕಾಂಪ್ಲೆಕ್ಸ್, ಎನ್‌ಐಇ, ಬೆಳಗ್ಗೆ 9 ರಿಂದ.

■ **ಅನಂತಗೀತಾ ವಿದ್ಯಾಲಯ :** ಚಿಣ್ಣರ ಮೇಳ, ಗೌರವ ಅತಿಥಿಗಳು : ಮೈಸೂರು ಗ್ರಾಹಕರ ಪರಿಷತ್ ಸ್ಥಾಪಕ ಡಾ. ಭಾಮಿ ವಿ. ಶೆಣೈ, ಸ್ಥಳ: ಶಾಲೆ ಆವರಣ, ವಿಜಯನಗರ 2ನೇ ಹಂತ, ಬೆಳಗ್ಗೆ 9.30ರಿಂದ.

■ **ಶ್ರೀ ಬಲಮುರಿ ಗಣಪತಿ ದೇವಸ್ಥಾನ :** 33ನೇ ವಾರ್ಷಿಕೋತ್ಸವದ ಪ್ರಯುಕ್ತ ಶ್ರೀ ಲಕ್ಷ್ಮಿ ಗಣಪತಿ ಹೋಮ ಮತ್ತು ಶ್ರೀ ಮಹಾಲಕ್ಷ್ಮಿ ಹೋಮ, ಸ್ಥಳ: ದೇವಸ್ಥಾನ, ರೈಲ್ವೆ ನಿಲ್ದಾಣ.

■ **ಆಲಂಬಾಡಿ ಕುರುಬ ಜುಂಜೇಗೌಡ ಪ್ರತಿಷ್ಠಾನ, ಮೈಸೂರು, ಕರ್ನಾಟಕ ಪ್ರದೇಶ ಕುರುಬರ ಸಂಘ, ಬೆಂಗಳೂರು, ಅಖಿಲ ಭಾರತೀಯ ಪಶುಪಾಲಕ ಕ್ಷತ್ರೀಯರು ಟ್ರಸ್ಟ್, ಬೆಂಗಳೂರು :** ಪಶುಪಾಲಕರ ಸಾಂಸ್ಕೃತಿಕ ಕಮ್ಮಟ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭ, ಸ್ಥಳ: ಶ್ರೀ ಕಾಗಿನೆಲೆ ಕನಕ ಗುರುಪೀಠ ಶಾಖಾ ಮಠ, ಸಿದ್ಧಾರ್ಥನಗರ, ಬೆಳಗ್ಗೆ 11 ಗಂಟೆಗೆ.

■ **ಮೈಸೂರಿನ ಜೆಎಸ್‌ಎಸ್ ಮಹಿಳಾ ಕಾಲೇಜು (ಸ್ವಾಯತ್ತ):** ಸಾಂಸ್ಕೃತಿಕ, ಸಾಹಿತ್ಯಕ ಮತ್ತು ಕ್ರೀಡಾ ವೇದಿಕೆಗಳ ಉದ್ಘಾಟನೆ, ಸ್ಥಳ: ನವಜ್ಯೋತಿ ಸಭಾಂಗಣ, ಕಾಲೇಜು ಆವರಣ, ಸರಸ್ವತಿಪುರಂ, ಬೆಳಗ್ಗೆ 11 ಗಂಟೆಗೆ.

■ **ಮೈಸೂರು ಹನುಮಂತೋತ್ಸವ ಸಮಿತಿ :** ಹನುಮ ಜಯಂತಿ ಪ್ರಯುಕ್ತ ಮೈಸೂರು ಹನುಮ ಹಬ್ಬ, 4ನೇ ವರ್ಷದ ಶ್ರೀ ಆಂಜನೇಯಸ್ವಾಮಿಯ ಭವ್ಯ ಮೆರವಣಿಗೆ. ಸ್ಥಳ: ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನ ಮುಂಭಾಗ, ಬೆಳಗ್ಗೆ 11.10ಕ್ಕೆ.

■ **ಶಬರಿಮಲೆ ಶ್ರೀ ಅಯ್ಯಪ್ಪಸ್ವಾಮಿ ಪೂಜಾ ಸಮಿತಿ :** 63ನೇ ಅಯ್ಯಪ್ಪನ್ ವಿಳಕ್ಕು ಕಾರ್ಯಕ್ರಮ, ಮಂಡಲ ಪೂಜಾ ಅಂಗವಾಗಿ ಅನ್ನಸಂತರ್ಪಣೆ, ಸ್ಥಳ: ದೇವಸ್ಥಾನದ ಆವರಣ, ಚಾಮುಂಡಿಬೆಟ್ಟದ ಪಾದ, ಮಧ್ಯಾಹ್ನ 12.30 ರಿಂದ.

■ **ಶ್ರೀ ಗುರು ಪುಟ್ಟರಾಜ ಸಂಗೀತ ಸಭಾ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು :** ಪದ್ಮಭೂಷಣ ಡಾ.ಪಂ. ಪುಟ್ಟರಾಜ ಗವಾಯಿಗಳವರ 12ನೇ ಪುಣ್ಯಸ್ಮರಣೆ ಅಂಗವಾಗಿ ಭೈರವದಿಂದ ಭೈರವಿ ಹಾಗೂ ಪುಟ್ಟಶ್ರೀ ಸಮ್ಮಾನ–2022 ಸಂಗೀತೋತ್ಸವ, ಉದ್ಘಾಟನೆ : ಮೇಯರ್ ಶಿವಕುಮಾರ್, ಅಧ್ಯಕ್ಷತೆ : ಪಾಲಿಕೆ ಸದಸ್ಯ ಮಾ.ವಿ. ರಾಮಪ್ರಸಾದ್, ಪುಟ್ಟಶ್ರೀ ಸಮ್ಮಾನ ಪ್ರದಾನ : ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ಪುಟ್ಟಶ್ರೀ ಸಮ್ಮಾನ ಪುರಸ್ಕೃತರು : ಬಿದರ್ ಕು. ರೋಷನ್ ಕೊಲರಕರ್, ಮುಖ್ಯ ಅತಿಥಿಗಳು : ಶಿಲ್ಪಕಲಾ ಅಕಾಡೆಮಿ ಅಧ್ಯಕ್ಷ ವೀರಣ್ಣ ಅರ್ಕಸಾಲಿ, ಸಮಾಜ ಸೇವಕ ಟಿ.ಕೆ. ಕರಿಬಸಪ್ಪ, ಸ್ಥಳ: ಗಾನ ಭಾರತೀ (ರಮಾ ಗೋವಿಂದ ಕಲಾ ವೇದಿಕೆ), ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಬೆಳಗ್ಗೆ 9 ರಿಂದ.

■ **ಶ್ರೀ ನಟರಾಜ ಪ್ರತಿಷ್ಠಾನ, ಶ್ರೀ ನಟರಾಜ ಶಿಕ್ಷಣ ಸಂಸ್ಥೆಗಳು :** ಶರಣ ಜ್ಯೋತಿ ಪ್ರಸಾರಾಂಗ ಉದ್ಘಾಟನೆ, ಡಾ. ಎಸ್. ಶಿವರಾಜಪ್ಪ ಅವರ ಗಾಂಧಿ ರಸಪ್ರಶ್ನೆಗಳು ಮತ್ತು ಭಜನ್ಸ್ ಗ್ರಂಥ ಲೋಕಾರ್ಪಣೆ ಸಮಾರಂಭ, ಸಾನ್ನಿಧ್ಯ : ಶ್ರೀ ನಟರಾಜ ಪ್ರತಿಷ್ಠಾನ ಅಧ್ಯಕ್ಷ ಶ್ರೀ ಚಿದಾನಂದ ಸ್ವಾಮೀಜಿ, ಪ್ರಸಾರಾಂಗದ ಉದ್ಘಾಟನೆ: ಶಾಸಕ ಅಡಗೂರು ಎಚ್. ವಿಶ್ವನಾಥ್, ಲಾಂಛನ ಬಿಡುಗಡೆ : ಶಾಸಕ ಸಿ.ಎನ್. ಮಂಜೇಗೌಡ, ಗ್ರಂಥ ಲೋಕಾರ್ಪಣೆ : ಡಾ. ವೂಡೇ ಪಿ. ಕೃಷ್ಣ, ಗ್ರಂಥ ಕುರಿತು ಮಾತನಾಡುವವರು : ಚಿತ್ರಕಲಾವಿದ ಎಲ್. ಶಿವಲಿಂಗಪ್ಪ, ಅಧ್ಯಕ್ಷತೆ : ಶ್ರೀ ನಟರಾಜ ಪ್ರತಿಷ್ಠಾನ ವಿಶೇಷಾಧಿಕಾರಿ ಪ್ರೊ. ಎಸ್. ಶಿವರಾಜಪ್ಪ, ಪ್ರಾಸ್ತಾವಿಕ ನುಡಿ : ಕನ್ನಡ ಸಾಹಿತ್ಯ ಕಲಾಕೂಟ ಅಧ್ಯಕ್ಷ ಎಂ. ಚಂದ್ರಶೇಖರ್, ಸ್ಥಳ: ಶ್ರೀ ನಟರಾಜ ಸಭಾಂಗಣ, ಬೆಳಗ್ಗೆ 10ಕ್ಕೆ.

■ **ಜವಳಿ ಮಂತ್ರಾಲಯ, ನವದೆಹಲಿ, ಕೈಮಗ್ಗ ಮತ್ತು ಜವಳಿ ಇಲಾಖೆ, ಕರ್ನಾಟಕ :** ವಿಶೇಷ ಕೈಮಗ್ಗ ಮೇಳ, ಕೈಮಗ್ಗ ಉತ್ಪನ್ನಗಳ ಬೃಹತ್ ಪ್ರದರ್ಶನ ಮತ್ತು ಮಾರಾಟ, ಸ್ಥಳ: ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್, ಹೆಬ್ಬಾಳು ಕೈಗಾರಿಕಾ ಪ್ರದೇಶ, ಬೆಳಗ್ಗೆ 10 ಗಂಟೆಯಿಂದ.

■ **ಪ್ರಕೃತಿ ಆಯುರ್ವೇದ ಪ್ರತಿಷ್ಠಾನ :** ಹೃದ್ರೋಗ ವೈದ್ಯರಿಂದ ಆರೋಗ್ಯ ತಪಾಸಣೆ ಶಿಬಿರ, ಸ್ಥಳ: ಶ್ರೀರಂಗ ಆಯುರ್ವೇದ ಚಿಕಿತ್ಸಾ ಮಂದಿರ, ದಟ್ಟಗಳ್ಳಿ 3ನೇ ಹಂತ, ಬೆಳಗ್ಗೆ 10.30 ರಿಂದ.

■ **ರೈಲ್ವೆ ಪಿಂಚಣಿದಾರರ ಹಿತರಕ್ಷಣಾ ಸಂಘ :** ನಿವೃತ್ತಿ ವೇತನದಾರರ ದಿನಾಚರಣೆ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಪಾರ್ಥಸಾರಥಿ, ಸ್ಥಳ: ಎಸ್‌ಸಿ, ಎಸ್‌ಟಿ ಕಚೇರಿ, ಶೇಷಾದ್ರಿ ಅಯ್ಯರ್ ರಸ್ತೆ, ಬೆಳಗ್ಗೆ 11ಕ್ಕೆ.

■ **ಗೃಹಶೋಭೆ :** ಗೃಹಬಳಕೆ ವಸ್ತುಗಳ ಪ್ರದರ್ಶನ ಮತ್ತು ಮಾರಾಟ, ಸ್ಥಳ: ಮಹಾರಾಜ ಕಾಲೇಜು ಮೈದಾನ, ಬೆಳಗ್ಗೆ 11 ರಿಂದ.

■ **ಜಾಗತಿಕ ಲಿಂಗಾಯತ ಮಹಾಸಭಾ, ಮೈಸೂರು ಜಿಲ್ಲಾ ಘಟಕ :** ಮಹಾಸಭಾದ ರಾಷ್ಟ್ರೀಯ ಕಾರ್ಯಕಾರಿಣಿ ಸಭೆ, ಉಪಸ್ಥಿತರು: ನಿವೃತ್ತ ಅಧಿಕಾರಿ ಎಸ್.ಎಂ.ಜಾಮದಾರ್, ಸ್ಥಳ: ಶ್ರೀ ನಟರಾಜ ಸಭಾ ಭವನ, ಶ್ರೀ ಹೊಸಮಠ, ಬೆಳಗ್ಗೆ 11ಕ್ಕೆ.

■ **ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ, ಮೈಸೂರು ಜಿಲ್ಲಾ ಸಹಕಾರ ಒಕ್ಕೂಟ:** ಸ್ಪರ್ಧಾ ವಿಜೇತರಿಗೆ ಬಹುಮಾನ ವಿತರಣಾ ಸಮಾರಂಭ, ಬಹುಮಾನ ವಿತರಣೆ : ಸಹಕಾರ ಸಂಘಗಳ ಜಂಟಿ ನಿಬಂಧಕ ಡಾ.ಜಿ.ಉಮೇಶ್, ಅಧ್ಯಕ್ಷತೆ: ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಮುಖ್ಯ ಅತಿಥಿಗಳು: ಡಾ.ಎಂ.ಬಿ. ಮಂಜೇಗೌಡ, ವೈ. ಭೈರಪ್ಪ, ನಾಗಮಲ್ಲೇಶ್, ಎಂ. ಚಂದ್ರಶೇಖರ್, ಹೆಚ್.ಎಸ್. ಪ್ರಶಾಂತ್ ತಾತಾಚಾರ್, ಜಿ.ಆರ್. ವಿಜಯಕುಮಾರ್, ರಾಮಚಂದ್ರ ರಾಜೇ ಅರಸ್, ಚಂದ್ರಶೇಖರ್, ಸ್ಥಳ: ಮೈಸೂರು ಜಿಲ್ಲಾ ಸಹಕಾರ ಯೂನಿಯನ್ ಸಭಾಂಗಣ, ಚಾಮರಾಜ ಜೋಡಿ ರಸ್ತೆ, ಮಧ್ಯಾಹ್ನ 1ಕ್ಕೆ.

■ **ರೋಟರಿ ಜಯಪ್ರಕಾಶ ನಗರ :** ಕನ್ನಡ ರಾಜ್ಯೋತ್ಸವ ಕಾರ್ಯಕ್ರಮ, ಸ್ಥಳ: ಪುಟ್ಟರಾಜ ಗವಾಯಿ ಕ್ರೀಡಾಂಗಣ, ಜೆ.ಪಿ.ನಗರ, ಸಂಜೆ 4 ಗಂಟೆಗೆ.

■ **ಮಹರ್ಷಿ ಶಿಕ್ಷಣ ಸಂಸ್ಥೆ :** ವಾರ್ಷಿಕೋತ್ಸವ ಸಮಾರಂಭ, ಅಧ್ಯಕ್ಷತೆ : ಟ್ರಸ್ಟಿ ಡಾ. ಭವಾನಿ ಶಂಕರ್, ಮುಖ್ಯ ಅತಿಥಿಗಳು : ಸಾರ್ವಜನಿಕ ಶಿಕ್ಷಣ ಇಲಾಖೆ ಸಹಾಯಕ ನಿರ್ದೇಶಕ ರಾಮಚಂದ್ರರಾಜೇ ಅರಸ್, ಭೂ ಕೈಲಾಸ–ನೃತ್ಯರೂಪಕ, ಸ್ಥಳ: ಶಾಲೆ ಆವರಣ, ಸಂಜೆ 4.30ಕ್ಕೆ.

■ **ದಯಾನಂದ ಆರ್ಯ ವಿದ್ಯಾ ಪಬ್ಲಿಕ್ ಸ್ಕೂಲ್:** ಚಿಣ್ಣರ ಕಲರವ ಕಾರ್ಯಕ್ರಮ, ಮುಖ್ಯ ಅತಿಥಿಗಳು: ಜಿಪಂ ಕಾರ್ಯ ನಿರ್ವಾಹಕ ಅಧಿಕಾರಿ ಬಿ.ಆರ್. ಪೂರ್ಣಿಮಾ, ಸ್ಥಳ: ಕಲಾಮಂದಿರ, ಸಂಜೆ 4.30ಕ್ಕೆ.

■ **ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ :** ಎಂಪವರ್ ಟಾಕ್‌ನ ಮೊದಲನೇ ವಾರ್ಷಿಕೋತ್ಸವ ಸಮಾರಂಭ, ಉಪಸ್ಥಿತರು : ಅಕಾಡೆಮಿ ಫಾರ್ ಕ್ರಿಯೇಟಿವ್ ಟೀಚಿಂಗ್ ಮುಖ್ಯಸ್ಥ ಡಾ. ಗುರುರಾಜ ಕರ್ಜಗಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಆಯುಕ್ತ ಕೆ.ಎ. ದಯಾನಂದ, ಶಿಕ್ಷಕಿ ಕೆ.ಎಚ್. ವಸಂತಲಕ್ಷ್ಮಿ, ರಂಗಭೂಮಿ ಕಲಾವಿದ ಎಂ. ಪೃಥ್ವಿರಾಜ್, ಸ್ಥಳ: ನಾಲೆಡ್ಜ್ ಪಾರ್ಕ್ ಸಭಾಂಗಣ, ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ, ಸಂಜೆ 5 ರಿಂದ.

■ **ನಾದವಿದ್ಯಾಲಯ ಅಕಾಡೆಮಿ ಆಫ್ ಮ್ಯೂಸಿಕ್ ಅಂಡ್ ಡ್ಯಾನ್ಸ್, ಹೆಬ್ಬಾಳು :** ಡಾ. ಶೀರ್ಷಿಕಾ ಅವರ ಭರತನಾಟ್ಯ ರಂಗ ಪ್ರವೇಶ, ಮುಖ್ಯ ಅತಿಥಿಗಳು : ಚಲನಚಿತ್ರ ನಟ ಮಂಡ್ಯ ರಮೇಶ್, ಡಾ. ಜಯಕುಮಾರ್ ಶ್ರೀನಿವಾಸನ್ ಅಮ್ಮನಗುಡಿ, ಡಾ. ಅವಿನಾಶ್ ಪುರುಷೋತ್ತಮ್, ಡಾ. ದಯಾನಂದ ಆರ್.ಡಿ., ಸ್ಥಳ: ರಮಾ ಗೋವಿಂದ ರಂಗ ಮಂದಿರ, ರಾಮಕೃಷ್ಣನಗರ, ಸಂಜೆ 5.30ಕ್ಕೆ.

■ **ಡಾ. ರಾಜ್‌ಕುಮಾರ್ ಮ್ಯೂಸಿಕಲ್ ಗ್ರೂಪ್ :** ಕನ್ನಡ ರಾಜ್ಯೋತ್ಸವದ ಅಂಗವಾಗಿ ಅಣ್ಣಾವ್ರ ಹಾಡುಗಳು ಶೀರ್ಷಿಕೆಯಲ್ಲಿ ಡಾ.ರಾಜ್‌ಕುಮಾರ್ ಹಾಡಿರುವ ಚಲನಚಿತ್ರ ಗೀತೆಗಳ ಸಂಗೀತ ಕಾರ್ಯಕ್ರಮ, ಮುಖ್ಯ ಅತಿಥಿಗಳು : ನಿರ್ಮಾಪಕ ಎಸ್.ಎ. ಶ್ರೀನಿವಾಸ್, ಡಾ. ರಾಜ್‌ಕುಮಾರ್ ಅಭಿಮಾನಿಗಳ ಸಂಘದ ಸಂಸ್ಥಾಪಕ ಅಧ್ಯಕ್ಷ ರಾಮೇಗೌಡ, ಸ್ಥಳ: ನಾದಬ್ರಹ್ಮ ಸಂಗೀತ ಸಭಾ, ಜೆಎಲ್‌ಬಿ ರಸ್ತೆ, ಸಂಜೆ 5 ರಿಂದ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ವಿಪ್ರಾನಂದ ಅವರಿಂದ ಉಪನಿಷತ್ತುಗಳ ಸಾರ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಶ್ರೀ ಮಹಾಜನ ಸಭಾ :** ಪ್ರವಚನ ಪ್ರವೀಣ ವಿದ್ವಾನ್ ಮುಡುಂಬೈ ರಾಮಾನುಜ ಶರ್ಮ ಅವರಿಂದ ತಿರುಪ್ಪಾವೈ ಕಾಲಕ್ಷೇಪ, ಸ್ಥಳ: ಶ್ರೀಕೃಷ್ಣಮೂರ್ತಿಪುರಂ ಶ್ರೀರಾಮಮಂದಿರ, ಕಾಂತರಾಜ ಅರಸು ರಸ್ತೆ, ಸಂಜೆ 6.15 ರಿಂದ.

■ **ಹೆಬ್ಬಾರ್ ಶ್ರೀವೈಷ್ಣವ ಉಪಸಭಾ, ಕೆ.ಆರ್. ವನಂ:** ಡಾ.ಎನ್.ಕೆ.ರಾಮಶೇಷನ್ ಅವರಿಂದ ತಿರುಪ್ಪಾವೈ ಪ್ರವಚನ, ಸ್ಥಳ: ಡಾ. ಕಮಲರಾಮನ್‌ರವರ ಮಂದಿರ, ಡಾ. ಬಿ.ಆರ್.ಅಂಬೇಡ್ಕರ್ ರಸ್ತೆ ಸಂಜೆ 6.15 ರಿಂದ.

■ **ಶ್ರೀ ವೇಣುಗೋಪಾಲಸ್ವಾಮಿ ದೇವಸ್ಥಾನ :** ವಿದುಷಿ ಬಿ.ಕೆ. ಸೀತಾಲಕ್ಷ್ಮೀ ಅವರಿಂದ ತಿರುಪ್ಪಾವೈ ಪ್ರವಚನ ಕಾರ್ಯಕ್ರಮ, ಸ್ಥಳ: ಶ್ರೀ ವೇಣುಗೋಪಾಲಸ್ವಾಮಿ ದೇವಸ್ಥಾನ, ತ್ಯಾಗರಾಜ ರಸ್ತೆ, ಸಂಜೆ 6.30ಕ್ಕೆ.

■ **ಪಾಳ್ಯಂ ಶ್ರೀ ಶಾಸ್ತಾ ಪೀಠಂ, ಅಭಯದಾಯಕ ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನಂ :** ಧನುರ್ಮಾಸದ ವಿಶೇಷ ಪೂಜಾ ಲಕ್ಷಾರ್ಚನಾ ಮತ್ತು ವಾರ್ಷಿಕ ಕುಂಭಾಭಿಷೇಕ ಪೂಜಾ ಮಹೋತ್ಸವ, ಮಹಾಭಿಷೇಕ, ಅಲಂಕಾರ ಸೇವೆ, ನಾಮಾರ್ಚನೆ, ಮಹಾನಿವೇದನೆ, ಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ, ಸ್ಥಳ: ದೇವಸ್ಥಾನ, ರಾಘವೇಂದ್ರನಗರ.

■ **ಇನ್ನೋವೇಟಿವ್ ಮೈಸೂರು, ಕನ್ನಡ ಸಾಹಿತ್ಯ ಕಲಾಕೂಟ :** ಯಕ್ಷ ಸಂಭ್ರಮ, ಸಂಜೆ 6.30 ರಿಂದ ಶ್ರೀ ಇಡಗುಂಜಿ ಮಹಾಗಣಪತಿ ಯಕ್ಷಗಾನ ಮಂಡಳಿ ಕೆರೆಮನೆ ಅವರಿಂದ ದಕ್ಷಯಜ್ಞ ಯಕ್ಷಗಾನ ಪ್ರದರ್ಶನ, ಸ್ಥಳ: ಕಿರು ರಂಗ ಮಂದಿರ, ಕಲಾಮಂದಿರದ ಆವರಣ.

■ **ಕರ್ನಾಟಕ ಸೇನಾ ಪಡೆ :** ಕನ್ನಡ ರಾಜ್ಯೋತ್ಸವ ಹಾಗೂ ಪುನೀತ್ ರಾಜ್‌ಕುಮಾರ್ ಪುಣ್ಯಸ್ಮರಣೆ ಮತ್ತು ಗೀತ ಗಾಯನಗಳ ನಮನ ಕಾರ್ಯಕ್ರಮ, ಸ್ಥಳ: ಪುನೀತ್ ರಾಜ್‌ಕುಮಾರ್ ವೇದಿಕೆ, ವಿವೇಕಾನಂದ ವೃತ್ತ, ವಿವೇಕಾನಂದನಗರ, ಸಂಜೆ 7.30ಕ್ಕೆ.

ಗೋಪಾಲಪುರದಲ್ಲಿಂದು, ಮೈಸೂರು ತಾಲೂಕು

■ **ಮೈಸೂರು ವಿಶ್ವವಿದ್ಯಾನಿಲಯ, ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು:** ಎನ್‌ಎಸ್‌ಎಸ್ ವಾರ್ಷಿಕ ವಿಶೇಷ ಶಿಬಿರ, ಬೆಳಗ್ಗೆ 6.30ಕ್ಕೆ ಗ್ರಾಪಂ ಸದಸ್ಯ ಕೃಷ್ಣಮೂರ್ತಿ ಅವರಿಂದ ಧ್ವಜಾರೋಹಣ, ಸಂಜೆ 4.30ಕ್ಕೆ ಡಾ. ಗೋವಿಂದರಾಜು ಅವರಿಂದ ಉಪನ್ಯಾಸ, ಅಧ್ಯಕ್ಷತೆ:ಸಹಾಯಕ ಪ್ರಾಧ್ಯಾಪಕ ಡಾ.ಜಿ.ಎಸ್. ದೇವರಾಜೇಗೌಡ.

ಶ್ರೀ ಸುತ್ತೂರು ಕ್ಷೇತ್ರ, ನಂಜನಗೂಡು ತಾಲೂಕು

■ **ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ :** ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಕರ್ತೃಗದ್ದುಗೆ, ಶ್ರೀ ವೀರಭದ್ರೇಶ್ವರ, ಶ್ರೀ ಸೋಮೇಶ್ವರ, ಶ್ರೀ ಮಹದೇಶ್ವರ, ಶ್ರೀ ನಾರಾಯಣಸ್ವಾಮಿ ದೇವಸ್ಥಾನಗಳಲ್ಲಿ ಧನುರ್ಮಾಸ ವಿಶೇಷ ಪೂಜೆ.

ನಾನು ಸ್ವಾಭಿಮಾನಿ ಚಕ್ರವರ್ತಿ; ವಿಶ್ವನಾಥ್ ಓರ್ವ ಕೃತಜ್ಞತೆ ಹೀನ ವ್ಯಕ್ತಿ

● ಸಂಸದ ಶ್ರೀನಿವಾಸ ಪ್ರಸಾದ್ ವಾಗ್ದಾಳಿ ● ನಾನೆಂದೂ ಹಣ, ಅಧಿಕಾರಕ್ಕೆ ಪಕ್ಷಾಂತರ ಮಾಡಿಲ್ಲ ● ಅರಸು ಬೆನ್ನಿಗೆ ವಿಶ್ವನಾಥ್, ಮಲ್ಲಿಕಾರ್ಜುನ ಖರ್ಗೆ ಚೂರಿ ಹಾಕಿದರು



ಮೈಸೂರು,ಡಿ.16(ಎಂಟಿವೈ)- ನಾನು ಅಲೆಮಾರಿ ರಾಜನಲ್ಲ, ಸ್ವಾಭಿಮಾನದ ಚಕ್ರವರ್ತಿ. ಎ.ಹೆಚ್.ವಿಶ್ವನಾಥ್‌ಗೆ ಸಾಕಷ್ಟು ಸಹಾಯ ಮಾಡಿದ್ದೇನೆ. ಆತ ಕೃತಜ್ಞತೆ ಹೀನ ವ್ಯಕ್ತಿ. ಆತನಂತಹ ಮೂರ್ಖತನದ ವ್ಯಕ್ತಿ ಬೇರೊಬ್ಬರು ಸಿಗುವುದಿಲ್ಲ ಎಂದು ಚಾಮರಾಜನಗರದ ಸಂಸದ ವಿ.ಶ್ರೀನಿವಾಸ್‌ಪ್ರಸಾದ್ ವಾಗ್ದಾಳಿ ನಡೆಸಿದರು.

ಮೈಸೂರಿನ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಾನು ಇತ್ತೀಚೆಗೆ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಚುನಾವಣೆಗೆ ಸ್ಪರ್ಧಿಸಲು ಕ್ಷೇತ್ರ ಹುಡುಕುತ್ತಿರುವ ವಿಷಯಕ್ಕೆ ಸಂಬಂಧಿಸಿದಂತೆ ಮಾತ್ರ ಅಲೆಮಾರಿ ನಾಯಕ ಎಂದಿದ್ದೆ. ಅದೇ ರೀತಿ ಬಿಜೆಪಿಯಿಂದ ಎಂಎಲ್ಸಿ ಆಗಿರುವ ಎ.ಹೆಚ್.ವಿಶ್ವನಾಥ್ ಪಕ್ಷ ನಿಷ್ಠೆ ಪ್ರದರ್ಶಿಸದೆ ಕಾಂಗ್ರೆಸ್ ನಾಯಕರ ಮನೆಗೆ ಹೋಗಿದಕ್ಕೆ ಅಲೆಮಾರಿ ನಾಯಕ ಎಂದಿದ್ದೆ. ಆದರೆ, ಅದಕ್ಕೆ ಪ್ರತಿಯಾಗಿ ವಿಶ್ವನಾಥ್ ನನ್ನನ್ನು ಅಲೆಮಾರಿಗಳ ರಾಜ ಎಂದಿದ್ದಾರೆ. ನಾನು ಅಲೆಮಾರಿಗಳ ರಾಜನಲ್ಲ, ಸ್ವಾಭಿಮಾನಿ ಚಕ್ರವರ್ತಿ. ಇದನ್ನು ವಿಶ್ವನಾಥ್ ಅರ್ಥ ಮಾಡಿಕೊಳ್ಳಬೇಕು. ಇನ್ನು ಒಂದೂವರೆ ವರ್ಷ ಕಳೆದರೆ, ನನ್ನ ರಾಜಕೀಯ ಜೀವನ 50 ವರ್ಷ ಪೂರೈಸುತ್ತಿದೆ. ಈ ಸುದೀರ್ಘ ರಾಜಕೀಯ ಜೀವನದಲ್ಲಿ ಒಂದು ಸಣ್ಣ ಕಪ್ಪುಚುಕ್ಕೆ ಹಾಗೂ ಭ್ರಷ್ಟಾಚಾರದ ಆರೋಪಕ್ಕೆ ತುತ್ತಾಗದೆ ಗೌರವಯುತವಾಗಿ ಜೀವನ ನಡೆಸಿದ್ದೇನೆ ಎಂದರು.

ವಿಶ್ವನಾಥ್ ಓರ್ವ ನಕಲಿ ಶಾಮ್, ಭಾಷಣ ನಿಪುಣ. ಬೆನ್ನಿಗೆ ಚೂರಿ ಹಾಕುವ ವ್ಯಕ್ತಿ. ಆತ ವಿಧಾನಪರಿಷತ್‌ಗೆ ಚುನಾಯಿತ ಪ್ರತಿನಿಧಿಯಲ್ಲ. ನಾಮನಿರ್ದೇಶನಗೊಂಡವರು. ಈತನಂತೆ ನಾನು ಅಧಿಕಾರಕ್ಕಾಗಿ ಪಕ್ಷಾಂತರ ಮಾಡಿಲ್ಲ. ಜನ ನನ್ನನ್ನು ರಾಜಕೀಯ ಮುತ್ಸದ್ಧಿ ಎಂದು ಕರೆಯುತ್ತಾರೆ. ನೇರ-ನಡೆ-ನುಡಿಯ ಜೀವನ ನನ್ನದು. ಯಾರಿಗೂ ಹೊರೆಯಾಗಿಲ್ಲ. ಪಕ್ಷಗಳಿಗೆ ಆಸ್ತಿಯಾಗಿರುವೆ. ಪ್ರೀತಿ, ವಿಶ್ವಾಸಗಳಿಸಿದ್ದೇನೆ ಎಂದು ತಿಳಿಸಿದರು.

ಕಾಂಗ್ರೆಸ್ ಬಿಟ್ಟಿದ್ದು ಹಣಕ್ಕಾಗಿ

ವಿಶ್ವನಾಥ್ ಕಾಂಗ್ರೆಸ್ ಬಿಟ್ಟಿದ್ದು ಹಣಕ್ಕಾಗಿ. ಸಿಎಂ ಆಗಿದ್ದ ಸಿದ್ದರಾಮಯ್ಯ ಬಳಿ ವಿಶ್ವನಾಥ್ ಹಣ, ಅಧಿಕಾರ ಕೇಳುತ್ತಿದ್ದರು. ಕೋಟಿಗಟ್ಟಲೆ ಹಣ ಕೇಳಿದಾಗ ಸಿದ್ದರಾಮಯ್ಯ ವಿಶ್ವನಾಥ್‌ರನ್ನು ದೂರವಿಟ್ಟರು. ಈ ಕಾರಣಕ್ಕೆ ಅವರು ಕಾಂಗ್ರೆಸ್ ತೊರೆದರು. ಜೆಡಿಎಸ್‌ನಲ್ಲಿದ್ದಾಗ ಕೆ.ಆರ್.ನಗರದ ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ಬೆಂಬಲಿಗನಿಗೆ ಟಿಕೆಟ್ ಕೊಡಿಸಲಾಗದೇ ಅಸಹಾಯಕರಾಗಿದ್ದರು. ಹೀಗಾಗಿ ಬಿಜೆಪಿಗೆ ಬರುತ್ತೇನೆಂದು ನನ್ನ ಮನೆಗೆ ಬಂದು ವಿಶ್ವನಾಥ್ ದುಂಬಾಲು ಬಿದ್ದಿದ್ದ. ಯಡಿಯೂರಪ್ಪ ನೀವು ಕುಳಿತು ಮಾತನಾಡಿಕೊಳ್ಳಿ ಎಂದು ಹೇಳಿದ್ದೆ. ನನ್ನ ಸಮ್ಮುಖದಲ್ಲಿ ವಿಶ್ವನಾಥ್‌ಗೆ ಯಾರು ಕೂಡ ಹಣ ಕೊಟ್ಟಿಲ್ಲ ಎಂದು ಸ್ಪಷ್ಟಪಡಿಸಿದರು.

ಬೆನ್ನಿಗೆ ಚೂರಿ ಹಾಕಿದ ವೀರ: ರಾಜಕೀಯವಾಗಿ ಬೆಳೆಸಿದ ಡಿ.ದೇವರಾಜ ಅರಸು ಅವರಿಗೆ ವಿಶ್ವನಾಥ್, ಮಲ್ಲಿಕಾರ್ಜುನ ಖರ್ಗೆ ಬೆನ್ನಿಗೆ ಚೂರಿ ಹಾಕಿದರು. ರಾತ್ರೋರಾತ್ರಿ ಡಿ.ದೇವರಾಜ ಅರಸ್ ಅವರಿಗೆ ಕೈಕೊಟ್ಟು ಕಾಂಗ್ರೆಸ್ ಸೇರಿಕೊಂಡರು ಎಂದು ದೂರಿದರು.

ಕಚ್ಚುವ, ಬೊಗಳುವ ವ್ಯಕ್ತಿ: ನಮ್ಮ ಗಾದೆ ಮಾತಿನಂತೆ ಬೊಗಳುವ ನಾಯಿ ಕಚ್ಚುವುದಿಲ್ಲ, ಕಚ್ಚುವ ನಾಯಿ ಬೊಗಳುವುದಿಲ್ಲ ಎನ್ನುತ್ತಾರೆ. ಆದರೆ ವಿಶ್ವನಾಥ್ ಬೊಗಳುತ್ತಾನೆ, ಜತೆಗೆ ಕಚ್ಚುತ್ತಾನೆ. ಈತನ ಹಾಗೆ ನಾನು ಯಾರಿಗೂ ಬಾಯಿಗೆ ಬಂದಂತೆ ಮಾತನಾಡಿಕೊಂಡು ತಿರುಗಾಡಿಲ್ಲ. ಚುನಾವಣೆಯಲ್ಲಿ ಸೋತಾಗ ಎದುರಾಳಿ ಅಭ್ಯರ್ಥಿಗಳ ವಿರುದ್ಧ ಮಾತನಾಡಿ ಕೊಂಡೇ ಬಂದಿರುವ ವ್ಯಕ್ತಿ ಈತ. ಮಂಚನಹಳ್ಳಿ ಮಹದೇವು, ಸಾ.ರಾ.ಮಹೇಶ್, ಪ್ರತಾಪಸಿಂಹ, ಹೆಚ್.ಪಿ.ಮಂಜುನಾಥ್ ವಿರುದ್ಧ ಸೋತು, ಅವರ ವಿರುದ್ಧ ಹೇಳಿಕೆ ನೀಡಿದ ಈತನ ಸ್ವಭಾವ ಏನೆಂದು ಜನರಿಗೆ ತಿಳಿದಿದೆ ಎಂದು ಕಿಡಿಕಾರಿದರು.

ಮಂತ್ರಿ ಸ್ಥಾನ ಕೊಡಿಸಿದ್ದೆ: ಈ ಹಿಂದೆ ನಾನು ಕಾಂಗ್ರೆಸ್‌ನಲ್ಲಿದ್ದಾಗ ವಿಶ್ವನಾಥ್‌ಗೆ ಕೆ.ಆರ್.ನಗರದಲ್ಲಿ ಸ್ಪರ್ಧಿಸಲು ಟಿಕೆಟ್ ನೀಡಲು ನಿರಾಕರಿಸಿದ್ದರು. ಅಂದು ಪಕ್ಷದ ಅಧ್ಯಕ್ಷರಾಗಿದ್ದ ಕೆ.ಹೆಚ್.ಪಾಟೀಲ್ 'ಪುಂಡ ವಿಶ್ವನಾಥನಿಗೆ ಟಿಕೆಟ್ ಕೊಡಲ್ಲ' ಎಂದಿದ್ದರು. ನಾನು ಅವರ ಮನವೊಲಿಸಿ ಟಿಕೆಟ್ ಕೊಡಿಸಿದ್ದೆ. ಅದು ಮರೆತು ಹೋಯಿತೇ? ವೀರಪ್ಪ ಮೊಯ್ಲಿಗೆ ಹೇಳಿ ನಿನಗೆ ಸಚಿವ ಸ್ಥಾನ ಕೊಡಿಸಿದ್ದು ಯಾರು ಎಂದು ಪ್ರಶ್ನಿಸಿದರು. ನಿನಗೆ ಮಂತ್ರಿ ಮಾಡಿಸಿದೆ. ದೆಹಲಿಯಲ್ಲಿ 4 ವರ್ಷ ಸಾಕಿದೆ. ನನ್ನನ್ನು ತಿರುಪತಿ ತಿಮ್ಮಪ್ಪ ಎಂದು ಕರೆದಿದ್ದು ಈಗ ಮರೆತುಹೋಯಿತೇ ಎಂದು ಕಾಲೆಳೆದರು.

42 ಮಂದಿಗೆ ಟಿಕೆಟ್ ಕೊಡಿಸಿದ್ದೆ: ನಾನು ಯುವ ಕಾಂಗ್ರೆಸ್ ಅಧ್ಯಕ್ಷನಾಗಿದ್ದಾಗ ಹೆಚ್.ಎಂ.ರೇವಣ್ಣ, ರಮಾನಾಥ ರೈ, ವಿಶ್ವನಾಥ್, ಡಿ.ಕೆ.ಶಿವಕುಮಾರ್ ಸೇರಿದಂತೆ 42 ಜನರಿಗೆ ಟಿಕೆಟ್ ಕೊಡಿಸಿದೆ. ಅದಕ್ಕಾಗಿ ಅವರು ಈಗಲೂ ನನ್ನನ್ನು ಗೌರವಿಸುತ್ತಾರೆ. ಆದರೆ, ವಿಶ್ವನಾಥ ಒಬ್ಬನ್ನೇ ಕೃತಜ್ಞಾಹೀನ. ರಾಜಕೀಯವಾಗಿ ಆಶ್ರಯ ಕೊಟ್ಟವರನ್ನೇ ಮರೆತು ಮಾತನಾಡುತ್ತಾನೆ ಎಂದು ಕಿಡಿಕಾರಿದರು.

ಸಂಸತ್‌ನಲ್ಲಿ ಒಂದು ಪ್ರಶ್ನೆಯೂ ಕೇಳಿಲ್ಲ: ಸಂಸದನಾಗಿದ್ದಾಗ ವಿಶ್ವನಾಥ ಸಂಸತ್‌ನಲ್ಲಿ ಒಂದೇ ಒಂದು ಪ್ರಶ್ನೆಯನ್ನೂ ಕೇಳಲಿಲ್ಲ. ದೆಹಲಿಯ ಮನೆಯಲ್ಲಿ ವಿಸ್ಕಿ ಕುಡಿದುಕೊಂಡು ಕಾಲ ಕಳೆದರು. ಈತ ಬೆಳಗ್ಗೆ 11 ಗಂಟೆಗೆ ಬಂದು ಸಹಿ ಮಾಡಿ ವಾಪಸ್ಸಾಗುತ್ತಿದ್ದ ಎಂದು ಲೇವಡಿ ಮಾಡಿದರು.

ನಾನು ಬಿಜೆಪಿಗೆ ಕರೆ ತರಲಿಲ್ಲ: ನನ್ನನ್ನು ಕೇಳಿ ವಿಶ್ವನಾಥ್ ಬಿಜೆಪಿಗೆ ಬರಲಿಲ್ಲ. ನಾನು ಆತನನ್ನು ಬಿಜೆಪಿಗೆ ಕರೆತರಲಿಲ್ಲ. ಅವನಾಗಿಯೇ ಬಂದರು. ಆತ ನನ್ನ ಬಳಿ ಬಂದು ಜೆಡಿಎಸ್‌ನಲ್ಲಿ ಅಪಮಾನಿಸುತ್ತಿದ್ದಾರೆ, ನಾನು ಬಿಜೆಪಿಗೆ ಸೇರುತ್ತೇನೆ ಎಂದರು. ಆಗ ನಾನು ಯಡಿಯೂರಪ್ಪ ಅವರೊಂದಿಗೆ ಮುಖಾಮುಖಿ ಕುಳಿತು ಚರ್ಚಿಸುವಂತೆ ಸಲಹೆ ನೀಡಿದ್ದೆ. ಅತೃಪ್ತ ಶಾಸಕರನ್ನು ಕರೆದುಕೊಂಡು ಮುಂಬೈಗೆ ಹೋಗಿ ಕುಡಿದು, ಮೋಜು ಮಾಡಿದರು ಎಂದರು.

ಮಗನ ರಾಜಕೀಯ ಭವಿಷ್ಯಕ್ಕಾಗಿ: ನಾನು ಎಂದಿಗೂ ಟಿಕೆಟ್ ಕೊಡಿ, ಮಂತ್ರಿ ಮಾಡಿ ಎಂದು ಕೇಳಿದವನಲ್ಲ. ಸ್ವಾರ್ಥ ಕ್ಕಾಗಿ ಪಕ್ಷ ಬದಲಿಸಿಲ್ಲ. ಬೂಸಾ ಚಳುವಳಿಯಲ್ಲಿದ್ದ ನಾನು ಅನಿರೀಕ್ಷಿತವಾಗಿ ರಾಜಕೀಯಕ್ಕೆ ಬಂದಿದ್ದೇನೆ. ಬದಲಾದ ಪರಿಸ್ಥಿತಿಯಲ್ಲಿ, ಆಯಾ ಪಕ್ಷಗಳ ದೊಡ್ಡಮಟ್ಟದ ನಾಯಕರ ಕೋರಿಕೆ ಹಾಗೂ ಒತ್ತಾಯದ ಮೇರೆಗೆ ವಿವಿಧ ಪಕ್ಷಕ್ಕೆ ಹೋಗಿದ್ದೇನೆಯೇ ಹೊರತು, ಟಿಕೆಟ್ ನೀಡಿ ಎಂದು ದುಂಬಾಲು ಬಿದ್ದು ಪಕ್ಷಕ್ಕೆ ಸೇರ್ಪಡೆಯಾಗಿಲ್ಲ. ಬಿಜೆಪಿ ಎಂಎಲ್ಸಿಯಾಗಿರುವ ವಿಶ್ವನಾಥ್ ಇದೀಗ ಮಗನ ರಾಜಕೀಯ ಭವಿಷ್ಯಕ್ಕಾಗಿ ಕಾಂಗ್ರೆಸ್ ಬಾಗಿಲು ತಟ್ಟುತ್ತಿದ್ದಾನೆ. ಆತ ದೂರಿರುವಂತೆ, ಕುಟುಂಬ ರಾಜಕಾರಣದ ಅಗತ್ಯ ನನಗಿಲ್ಲ ಎಂದು ಗುಡುಗಿದರು.

ಗೂಳಿಗಳು ಅಟ್ಟಾಡಿಸುತ್ತಿವೆ: ವಿಶ್ವನಾಥ್ ವೇಷ ಬದಲಿಸಿಕೊಂಡು ಶಿಕಾರಿಗೆ ಹೋಗುತ್ತಿದ್ದಾನೆ. ಹುಲಿ ಬೇಟೆಯಾಡಲು ಹಸುವಿನ ವೇಷ ಹಾಕಿಕೊಂಡು ಹೋಗಿದ್ದಾನೆ. ಆದರೆ ಅವನನ್ನು ಎಲ್ಲ ಕಡೆಯಿಂದಲೂ ಗೂಳಿಗಳು ಅಟ್ಟಿಸಿಕೊಂಡು ಬರುತ್ತಿವೆ. ಆದರೆ ನಾನು ಮಲಗಿರುವ ಹುಲಿಯನ್ನು ಎಬ್ಬಿಸಿ ಬೇಟೆಯಾಡುತ್ತೇನೆ ನಿನ್ನ ತರಹ ಹಸುವೇಷ ಹಾಕಿಕೊಂಡು ಹುಲಿ ಬೇಟೆಗೆ ಹೋಗೋದಿಲ್ಲ ಎಂದು ಹರಿಹಾಯ್ದರು.

ಸಿದ್ದರಾಮಯ್ಯ ವಿರುದ್ಧ ಮುನಿಸಿಗೆ ಕಾರಣ: ನಾನು ಕಾಂಗ್ರೆಸ್ ಸರ್ಕಾರದಲ್ಲಿ ಕಂದಾಯ ಸಚಿವನಾಗಿ ಉತ್ತಮವಾಗಿ ಕೆಲಸ ಮಾಡುತ್ತಿದ್ದೆ. ನನ್ನ ಆರೋಗ್ಯ ಸರಿಯಿಲ್ಲದಿದ್ದರೂ ಪಕ್ಷಕ್ಕಾಗಿ ಎಲ್ಲೆಡೆ ಪ್ರವಾಸ ಮಾಡುತ್ತಿದ್ದೆ. ಆದರೆ ಅಂದು ಸಿಎಂ ಆಗಿದ್ದ ಸಿದ್ದರಾಮಯ್ಯ ನನ್ನ ಗಮನಕ್ಕೆ ತರದೇ ಸಂಪುಟದಿಂದ ನನ್ನ ತೆಗೆದು ಹಾಕಿದರು. ನಿಮ್ಮ ಆರೋಗ್ಯ ಸರಿಯಿಲ್ಲದ ಕಾರಣ ಖಾತೆ ಬದಲಿಸುವ ಅಥವಾ ಸಂಪುಟದಿಂದ ನಿರ್ಗಮಿಸಿ, ವಿಶ್ರಾಂತಿ ಪಡೆಯುವಂತೆ ಹೇಳಿ, ತೆಗೆದು ಹಾಕದೇ ಇರುವುದಕ್ಕೆ ನನಗೆ ಕೋಪ. ಸ್ವಾಭಿಮಾನಕ್ಕೆ ಧಕ್ಕೆಯಾದ ಕಾರಣ ನಾನು ಕಾಂಗ್ರೆಸ್ ತೊರೆಯಬೇಕಾಯಿತು. ಅಂದು ಸೋನಿಯಾಗಾಂಧಿ ಅವರೇ ಕರೆ ಮಾಡಿ ಪಕ್ಷ ತೊರೆಯದಂತೆ ಮನವಿ ಮಾಡಿದರು. ಆದರೆ, ನನ್ನ ನಿರ್ಧಾರ ಅಚಲವಾಗಿತ್ತು. ಸ್ವಾಭಿಮಾನಿ ಸಮಾವೇಶ ಮಾಡಿ, ಬೆಂಬಲಿಗರ ಒತ್ತಾಯದ ಮೇರೆಗೆ ಬಿಜೆಪಿ ಸೇರಿದೆ. ಉಪಚುನಾವಣೆಯಲ್ಲಿ ನನ್ನ ವಿರುದ್ಧ ಸ್ಪರ್ಧಿಸಲು ಕಾಂಗ್ರೆಸ್‌ಗೆ ಅಭ್ಯರ್ಥಿಗಳೇ ಇರಲಿಲ್ಲ. ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರನ್ನು ಒಪ್ಪಿಸಿ ಜೆಡಿಎಸ್‌ನಲ್ಲಿದ್ದ ಕಳಲೆ ಕೇಶವಮೂರ್ತಿಯನ್ನು ಕಾಂಗ್ರೆಸ್‌ಗೆ ಕರೆತಂದು ಟಿಕೆಟ್ ನೀಡಿ, ಅಕ್ರಮ ನಡೆಸಿ ನನ್ನನ್ನು ಸೋಲಿಸಿದರು. ಗೆದ್ದು ನಿವೃತ್ತಿಯಾಗುವಂತೆ ಅಭಿಮಾನಿಗಳು ಹೇಳಿದ ಕಾರಣ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಿದೆ ಎಂದರು.

15 ಕೋಟಿ ರೂ. ಪಡೆದು ಚುನಾವಣೆಗೆ ನಿಂತರು: ವಿಶ್ವನಾಥ್ 15 ಕೋಟಿ ಹಣ ಪಡೆದು ಹುಣಸೂರಲ್ಲಿ ಉಪಚುನಾವಣೆಗೆ ನಿಂತರು. ಆದರೆ, 5 ಕೋಟಿ ರೂ. ಖರ್ಚು ಮಾಡಿ 10 ಕೋಟಿ ಹಾಗೇ ಜೇಬಿಗಿಳಿಸಿಕೊಂಡರು. ಇಂತಹ ವ್ಯಕ್ತಿ ನನ್ನನ್ನು ಟೀಕಿಸುವ ನೈತಿಕತೆ ಇಲ್ಲ ಎಂದರು.

ಆಮಿಷಗಳಿಗೆ ಬಲಿಯಾಗಿ ಆನ್‌ಲೈನ್‌ನಲ್ಲಿ ಸಾವಿರಾರು ರೂ. ಕಳೆದುಕೊಂಡ ಮೂವರು

ಮೈಸೂರು, ಡಿ.16-ಬೈಕ್ ಮಾರಾಟ ಮಾಡುವುದಾಗಿ ಓಎಲ್‌ಎಕ್ಸ್‌ನಲ್ಲಿ ಜಾಹೀರಾತು ನೀಡಿ ಆನ್‌ಲೈನ್ ಮೂಲಕ ವ್ಯಕ್ತಿಯೋರ್ವರಿಗೆ 26,999 ರೂ. ವಂಚಿಸಿರುವ ಬಗ್ಗೆ ವರದಿಯಾಗಿದೆ. ಮೈಸೂರಿನ ವೀಣೆಶೇಷಣ್ಣ ರಸ್ತೆ ನಿವಾಸಿ ಕೆ.ಬಿ.ಸಲೀಂ ಮಲ್ಲಿಕ್(30) ವಂಚನೆಗೊಳಗಾದವರಾಗಿದ್ದು, ಇವರು ಓಎಲ್‌ಎಕ್ಸ್‌ನಲ್ಲಿ ಬೈಕ್ ಮಾರಾಟ ಮಾಡುವ ಬಗ್ಗೆ ಜಾಹೀರಾತನ್ನು ನೋಡಿ, ಅದರಲ್ಲಿದ್ದ 9432519517 ಮತ್ತು 9395238768 ಸಂಖ್ಯೆಗಳಿಗೆ ಕರೆ ಮಾಡಿ, ಬೈಕ್ ಖರೀದಿಸಲು ಇಚ್ಛಿಸುವುದಾಗಿ ತಿಳಿಸಿದಾಗ ಮಾತನಾಡಿದ ವ್ಯಕ್ತಿಯು ತಾನು ಆರ್ಮಿಯಲ್ಲಿ ಕೆಲಸ ಮಾಡುತ್ತಿರುವುದಾಗಿ ತಿಳಿಸಿದನಲ್ಲದೇ, ಸಲೀಂ ಮಲ್ಲಿಕ್ ಅವರ ಆಧಾರ್ ಕಾರ್ಡ್, ಫೋಟೋವನ್ನು ವಾಟ್ಸಾಪ್ ಮಾಡಿಸಿಕೊಂಡಿದ್ದಲ್ಲದೇ, 26,999 ರೂ. ವರ್ಗಾವಣೆ ಮಾಡಿಸಿಕೊಂಡು ವಂಚನೆ ಎಸಗಿದ್ದಾನೆ.

ಮತ್ತೊಂದು ಪ್ರಕರಣದಲ್ಲಿ ವಿವಿ ಮೊಹಲ್ಲಾದಲ್ಲಿರುವ ಗಂಗೋತ್ರಿ ಅಪಾರ್ಟ್‌ಮೆಂಟ್ ನಿವಾಸಿ ಬಿ.ಮೋಹನ್ ರಾಜ್(68) ಎಂಬುವರು ಸಾಮಾಜಿಕ ಜಾಲ ತಾಣದಲ್ಲಿ ಮಾರ್ಕೆಟಿಂಗ್ ಕಂಪನಿಯಲ್ಲಿ ಹಣ ಹೂಡಿಕೆ ಮಾಡಿದರೆ ಡಬ್ಬಲ್ ಆಗುತ್ತದೆ ಎಂಬ ಜಾಹೀರಾತನ್ನು ನೋಡಿ, ಅದರಲ್ಲಿದ್ದ ಲಿಂಕ್ ಅನ್ನು ಒತ್ತಿದ ನಂತರ ಅಪರಿಚಿತ ವ್ಯಕ್ತಿ ಹೇಳಿದ ಹಾಗೆ ಒಂದು ನಕಲಿ ಪ್ರೊಫೈಲ್ ಕ್ರಿಯೇಟ್ ಮಾಡಿ ಮೊದಲಿಗೆ ಅಲ್ಪಸ್ವಲ್ಪ ಹಣ ಹೂಡಿಕೆ ಮಾಡಿದ್ದಾರೆ. ಅದು ಡಬ್ಬಲ್ ಆಗಿದೆ. ನಂತರ ಅವರು 30,700 ರೂ. ಹೂಡಿಕೆ ಮಾಡಿದ್ದು, ನಂತರ ಅವರಿಗೆ ಯಾವುದೇ ರೀತಿಯ ಹಣ ವಾಪಸ್ ಬಂದಿಲ್ಲ.

ಇನ್ನೊಂದು ಪ್ರಕರಣದಲ್ಲಿ ಜೆಎಸ್‌ಎಸ್ ಲೇಔಟ್ ನಿವಾಸಿ ಬಿ.ಮಹದೇವಸ್ವಾಮಿ(41) ಎಂಬುವರು ಹೊಸ ಮೊಬೈಲ್ ಖರೀದಿಸಿದ್ದು, ಅದರಲ್ಲಿ ಯೋನೋ ಆಪ್ ಡೌನ್‌ಲೋಡ್ ಮಾಡಿಕೊಂಡ ವೇಳೆ ಪಾನ್ ಕಾರ್ಡ್ ಅಪ್‌ಡೇಟ್ ಮಾಡುವಂತೆ ಸಂದೇಶ ಬಂದಿದ್ದು, ಸದರಿ ಲಿಂಕ್ ಮೇಲೆ ಕ್ಲಿಕ್ ಮಾಡಿ ಓಟಿಪಿ ನಮೂದಿಸುತ್ತಿದ್ದಂತೆಯೇ ಅವರ ಖಾತೆಯಿಂದ 19 ಸಾವಿರ ರೂ. ಕಡಿತಗೊಂಡಿದೆ. ಈ ಮೂರೂ ಪ್ರಕರಣಗಳು ಮೈಸೂರು ನಗರ ಸೆನ್ ಠಾಣೆಯಲ್ಲಿ ದಾಖಲಾಗಿವೆ.

ಮೈಸೂರು ಗ್ರಾಮಾಂತರ ಬಸ್ ನಿಲ್ದಾಣ ಸುತ್ತಮುತ್ತ ಸುಲಿಗೆಕೋರರ ಹಾವಳಿ

ಮೈಸೂರು, ಡಿ.16-ಮೈಸೂರಿನ ಬಿ.ಎನ್.ರಸ್ತೆಯಲ್ಲಿ ಆಟೋದಲ್ಲಿ ಬರುವ ಖದೀಮರ ಗುಂಪು ಪಾದಚಾರಿಗಳನ್ನು ದೋಚುವ ಪ್ರಕರಣಗಳು ಪದೇ ಪದೆ ನಡೆಯುತ್ತಿದ್ದು, ಡಿ.14ರಂದು ಕೊಡಗು ಮೂಲದ ತರಕಾರಿ ವ್ಯಾಪಾರಿ ಮೇಲೆ ಹಲ್ಲೆ ನಡೆಸಿ, ಹಣ ಸುಲಿಗೆ ಮಾಡಲಾಗಿದೆ. ಮೂಲತಃ ವಿರಾಜಪೇಟೆ ತಾಲೂಕು ಅತ್ತೂರು ಗ್ರಾಮದ ನಿವಾಸಿಯಾಗಿದ್ದು, ಕಳೆದ ನಾಲ್ಕೈದು ತಿಂಗಳಿಂದ ಮೈಸೂರಿನ ಶ್ರೀರಾಂಪುರದ ಅಕ್ಷಯ ಸೂಪರ್ ಮಾರ್ಕೆಟ್ ಬಳಿ ತರಕಾರಿ ಅಂಗಡಿ ನಡೆಸುತ್ತಿರುವ ನಿಖಿಲ್ ಕುಮಾರ್(25) ಸುಲಿಗೆಗೊಳಗಾದವರಾಗಿದ್ದು, ಇವರು ಡಿ.14ರಂದು ಸಂಜೆ 7.30ರ ಸುಮಾರಿನಲ್ಲಿ ಬ... ಖರೀದಿಸುವ ಸಲುವಾಗಿ ಬಿ.ಎನ್.ರಸ್ತೆಯ ಸೆಂಟ್ರಲ್ ಮಾಲ್ ಬಳಿ ನಡೆದುಕೊಂಡು ಹೋಗುತ್ತಿದ್ದಾಗ ಆಟೋದಲ್ಲಿ ಬಂದ ನಾಲ್ವರು ಖದೀಮರು ಇವರ ಮೇಲೆ ಹಲ್ಲೆ ನಡೆಸಿ 6,700 ರೂ. ನಗದು ಹಾಗೂ ಮೊಬೈಲ್ ಕಿತ್ತುಕೊಂಡು ಪರಾರಿಯಾಗಿದ್ದಾರೆ. ಈ ಸಂಬಂಧ ಲಷ್ಕರ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಇತ್ತೀಚೆಗಷ್ಟೇ ಸದರಿ ರಸ್ತೆಯಲ್ಲಿ ಕೇರಳ ಮೂಲದ ವ್ಯಕ್ತಿಯೋರ್ವರನ್ನು, ಇದೇ ರೀತಿ ಆಟೋದಲ್ಲಿ ಬಂದ ನಾಲ್ವರು ಖದೀಮರು ಸುಲಿಗೆ ಮಾಡಿದ್ದರು. ಊರಿಗೆ ತೆರಳಲು ಗ್ರಾಮಾಂತರ ಬಸ್ ನಿಲ್ದಾಣಕ್ಕೆ ನಡೆದುಕೊಂಡು ಹೋಗುತ್ತಿರುವ ಪ್ರಯಾಣಿಕರನ್ನು ಗುರಿಯಾಗಿಸಿಕೊಂಡು ತಂಡವೊಂದು ಬಿ.ಎನ್.ರಸ್ತೆಯಲ್ಲಿ ಪದೇ ಪದೆ ಸುಲಿಗೆ ಮಾಡುತ್ತಿರುವ ಬಗ್ಗೆ ವರದಿಯಾಗುತ್ತಿರುವುದು ಆತಂಕವನ್ನುಂಟು ಮಾಡಿದೆ. ಅಪರಾಧ ಹತ್ತಿಕ್ಕಲು ಲಷ್ಕರ್ ಪೊಲೀಸರು ವಿನೂತನ ವಿಧಾನಗಳನ್ನು ಅನುಸರಿಸಿದರೂ ಯಾವುದೂ ಫಲ ನೀಡಿಲ್ಲ!

ಬಸ್ ಕಾಯುತ್ತಿದ್ದ ಪ್ರಯಾಣಿಕರಿಂದ ಪಿಕ್ ಪಾಕೆಟ್

ಖದೀಮನ ಹಿಡಿದು ಪೊಲೀಸರಿಗೆ ಒಪ್ಪಿಸಿದ ಜನ, ಮತ್ತೊಬ್ಬ ಪರಾರಿ

ಮೈಸೂರು, ಡಿ.16-ಮೈಸೂರಿನ ರಾಮಸ್ವಾಮಿ ವೃತ್ತದ ಬಳಿ ಬಸ್ ನಿಲ್ದಾಣದಲ್ಲಿ ಪ್ರಯಾಣಿಕರೊಬ್ಬರಿಂದ ಪಿಕ್ ಪಾಕೆಟ್ ಮಾಡಿದ ಖದೀಮನನ್ನು ಸಾರ್ವಜನಿಕರೇ ಹಿಡಿದು ಪೊಲೀಸರಿಗೆ ಒಪ್ಪಿಸಿದ ಘಟನೆ ಡಿ.14ರಂದು ಬೆಳಗ್ಗೆ ನಡೆದಿದೆ.

ವಿವರ: ಹುಣಸೂರು ತಾಲೂಕು ಹುಂಡಿಮಾಳ ಗ್ರಾಮದ ಎಸ್.ಜಾನ್ಸನ್(40), ಹೂಟಗಳ್ಳಿಯಲ್ಲಿರುವ ಚರ್ಚ್‌ನಲ್ಲಿ ನಡೆಯುತ್ತಿದ್ದ ಸಭೆಯಲ್ಲಿ ಭಾಗವಹಿಸಲು ತೆರಳುವ ಸಲುವಾಗಿ ರಾಮಸ್ವಾಮಿ ಸರ್ಕಲ್ ಬಳಿ ಸಿಟಿ ಬಸ್‌ಗಾಗಿ ಕಾದು ನಿಂತಿದ್ದಾಗ ಇಬ್ಬರು ಅಪರಿಚಿತರು ಅವರ ಪ್ಯಾಂಟ್‌ನ ಹಿಂಬದಿಯ ಪಾಕೆಟ್‌ನಲ್ಲಿದ್ದ 20 ಸಾವಿರ ರೂ.ಗಳನ್ನು ಪಿಕ್ ಪಾಕೆಟ್ ಮಾಡಿದ್ದಾರೆ. ಇದನ್ನು ಗಮನಿಸಿದ ಸಾರ್ವಜನಿಕರು ಹಾಗೂ ಜಾನ್ಸನ್, ಖದೀಮರನ್ನು ಹಿಡಿಯಲು ಪ್ರಯತ್ನಿಸಿದಾಗ ಓರ್ವ ತಪ್ಪಿಸಿಕೊಂಡು ಹೋಗಿದ್ದು, ಮತ್ತೋರ್ವನನ್ನು ಸಾರ್ವಜನಿಕರು ಹಿಡಿದಿದ್ದಾರೆ. ಈತನನ್ನು ವಿಚಾರಣೆಗೊಳಪಡಿಸಿದಾಗ ತನ್ನ ಹೆಸರು ಶಹಬಾಜ್ ಎಂದು ತಿಳಿಸಿದ್ದಾನೆ. ನಂತರ ಆತನನ್ನು ಲಕ್ಷ್ಮೀಪುರಂ ಠಾಣೆ ಪೊಲೀಸರಿಗೆ ಒಪ್ಪಿಸಲಾಗಿದೆ. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ಮತ್ತೋರ್ವ ಖದೀಮನಿಗಾಗಿ ಹುಡುಕಾಟ ನಡೆಸಿದ್ದಾರೆ.

ರಿಂಗ್ ರಸ್ತೆಯಲ್ಲಿ ಅಪಘಾತ: ವಿದ್ಯಾರ್ಥಿನಿ ಸಾವು

ಮೈಸೂರು, ಡಿ.16-ರಿಂಗ್ ರಸ್ತೆಯ ಬದಿಯಲ್ಲಿರುವ ಕಾಂಕ್ರೀಟ್ ಮೋರಿ ಕಟ್ಟೆಗೆ ಸ್ಕೂಟರ್ ಡಿಕ್ಕಿ ಹೊಡೆದು ವಿದ್ಯಾರ್ಥಿನಿ ಸಾವನ್ನಪ್ಪಿರುವ ಘಟನೆ ಬೆಮೆಲ್ ಕ್ವಾರ್ಟರ್ಸ್ ಎದುರು ಸಂಭವಿಸಿದೆ. ಮೈಸೂರಿನ ಹಿನಕಲ್ ನಿವಾಸಿ ಸುಹಾನಿ ಸಿಂಗ್(17) ಅಪಘಾತದಲ್ಲಿ ಮೃತಪಟ್ಟ ವಿದ್ಯಾರ್ಥಿನಿಯಾಗಿದ್ದು, ಈಕೆ ಡಿ.14ರಂದು ಬೆಳಗ್ಗೆ ತನ್ನ ಸಹೋದರಿ ಸಭಾಂಗಿ ಸಿಂಗ್ ಅವರನ್ನು ಕೆಆರ್‌ಎಸ್ ರಸ್ತೆಯಲ್ಲಿರುವ ಜಿಎಸ್‌ಎಸ್‌ಎಸ್ ಕಾಲೇಜಿಗೆ ಬಿಟ್ಟು ಸ್ಕೂಟರ್‌ನಲ್ಲಿ (ಕೆಎ 05 ಕೆಜೆ 9326) ಹಿನಕಲ್‌ಗೆ ಹಿಂತಿರುಗುತ್ತಿದ್ದಾಗ ಬೆಮೆಲ್ ಕ್ವಾರ್ಟರ್ಸ್ ಎದುರು ರಿಂಗ್ ರಸ್ತೆ ಮತ್ತು ಸರ್ವೀಸ್ ರಸ್ತೆ ನಡುವಿನ ಕಾಂಕ್ರೀಟ್ ಮೋರಿ ಕಟ್ಟೆಗೆ ಸ್ಕೂಟರ್ ಡಿಕ್ಕಿ ಹೊಡೆದಿದೆ. ಸುಹಾನಿ ಸಿಂಗ್ ಅವರು ಅತೀ ವೇಗವಾಗಿ ಸ್ಕೂಟರ್ ಚಾಲನೆ ಮಾಡುತ್ತಿದ್ದರಿಂದ ಡಿಕ್ಕಿ ಹೊಡೆದ ರಭಸಕ್ಕೆ ಕೆಳಗೆ ಬಿದ್ದ ಸ್ಕೂಟರ್ ಸಮೇತ ಅವರು ಸುಮಾರು 20 ಅಡಿಗಳಷ್ಟು ಉಜ್ಜಿಕೊಂಡು ಹೋಗಿದ್ದು ಅಲ್ಲಿದ್ದ ದೀಪದ ಕಂಬಕ್ಕೆ ಅವರ ತಲೆ ಅಪ್ಪಳಿಸಿದೆ. ತೀವ್ರವಾಗಿ ಗಾಯಗೊಂಡ ಅವರನ್ನು ಖಾಸಗಿ ಆಸ್ಪತ್ರೆಗೆ ಕರೆದೊಯ್ದಾಗ ಮಾರ್ಗ ಮಧ್ಯೆಯೇ ಸುಹಾನಿ ಸಿಂಗ್ ಮೃತಪಟ್ಟಿದ್ದಾರೆ ಎಂದು ವೈದ್ಯರು ಘೋಷಿಸಿದ್ದಾರೆ. ಈ ಸಂಬಂಧ ವಿವಿ ಪುರಂ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬಹುರೂಪಿ ರಾಷ್ಟ್ರೀಯ ರಂಗೋತ್ಸವ ಯಶಸ್ವಿಯಾಯ್ತು; 'ಭಾರತೀಯತೆ' ಎಲ್ಲೆಡೆ ಮಾರ್ದನಿಸಿದೆ: ಅಡ್ಡಂಡ ಕಾರ್ಯಪ್ಪ

● ಈ ಬಾರಿ 3.5 ಲಕ್ಷ ಆದಾಯ ● ಸರ್ಕಾರ ನೀಡಿದ್ದು 25 ಲಕ್ಷ; ಖರ್ಚಾಗಿದ್ದು 40 ಲಕ್ಷ!!

ಮೈಸೂರು, ಡಿ.16(ಎಂಟಿವೈ)- ಈ ಸಾಲಿನ ಬಹುರೂಪಿ ರಾಷ್ಟ್ರೀಯ ರಂಗೋತ್ಸವ ಮಳೆ ನಡುವೆಯೂ ಯಶಸ್ವಿಯಾಗಿದ್ದು, ಬಹುರೂಪಿಯ 'ಭಾರತೀಯತೆ' ಪರಿಕಲ್ಪನೆ ಎಲ್ಲೆಡೆ ಮಾರ್ದನಿಸಿದೆ ಎಂದು ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ಹೇಳಿದರು.



ಮೈಸೂರಿನ ರಂಗಾಯಣದ ಆವರಣದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೊರೊನಾ ಹಿನ್ನೆಲೆಯಲ್ಲಿ ಮುಂದೂಡಲಾಗಿದ್ದ 2021ನೇ ಸಾಲಿನ ಬಹುರೂಪಿ ರಂಗೋತ್ಸವವನ್ನು ಈ ವರ್ಷದ ಮಾರ್ಚ್‌ನಲ್ಲಿ ಆಯೋಜಿಸಲಾಗಿತ್ತು. ಆದ್ದರಿಂದ ವರ್ಷಾಂತ್ಯದಲ್ಲಿ 2022ನೇ ಸಾಲಿನ ಬಹುರೂಪಿ ಉತ್ಸವ ನಡೆಯಿತು. ಟಿಪ್ಪು 'ನಿಜಕನಸುಗಳು' ನಾಟಕ ಪ್ರದರ್ಶನ ಹಾಗೂ ಸಮಯದ ಅಭಾವದ ನಡುವೆಯೂ ರಂಗಾಯಣದ ಕಲಾವಿದರು, ಭಾರತೀಯ ರಂಗ ವಿದ್ಯಾಲಯದ ವಿದ್ಯಾರ್ಥಿಗಳು ಸಮರೋಪಾದಿಯಲ್ಲಿ ಕೆಲಸ ಮಾಡಿ ಬಹುರೂಪಿ ರಂಗೋತ್ಸವವನ್ನು ಯಶಸ್ವಿಗೊಳಿಸಿದ್ದಾರೆ ಎಂದರು.

'ಭಾರತೀಯತೆ' ಶೀರ್ಷಿಕೆಯಡಿ ನಡೆದ ವಿವಿಧ ಭಾಷೆಯ ನಾಟಕ, ಚಲನಚಿತ್ರೋತ್ಸವ, ಜನಪದೋತ್ಸವ, ಕರಕುಶಲ ವಸ್ತುಪ್ರದರ್ಶನ, ಪುಸ್ತಕ ಪ್ರದರ್ಶನ, ವಿಚಾರ ಸಂಕಿರಣ, ಭಾಷಣ ಸ್ಪರ್ಧೆ ಸೇರಿದಂತೆ ಎಲ್ಲಾ ಚಟುವಟಿಕೆಗಳು ಯಶಸ್ವಿಯಾಗಿವೆ. ನಾಟಕೋತ್ಸವ ಉದ್ಘಾಟನೆಯಾಗುವವರೆಗೂ ಮಳೆ ಮುನ್ಸೂಚನೆ ಇರಲಿಲ್ಲ. ಇದ್ದಿದ್ದರೆ ಮಳಿಗೆಗಳಿಗೆ ಬೇರೆ ವ್ಯವಸ್ಥೆ ಮಾಡಲಾಗುತ್ತಿತ್ತು. ಆದರೂ ಟಾರ್ಪಾಲ್ ವ್ಯವಸ್ಥೆ ಮಾಡಲಾಯಿತು.

3.5 ಲಕ್ಷ ಆದಾಯ: 8 ದಿನಗಳ ರಂಗೋತ್ಸವದಲ್ಲಿ ದೇಶದ ವಿವಿಧೆಡೆಯಿಂದ ಆಗಮಿಸಿದ್ದ ಸಾವಿರಕ್ಕೂ ಹೆಚ್ಚಿನ ಕಲಾವಿದರು ತಮ್ಮ ಕಲಾ ಶ್ರೀಮಂತಿಕೆ ಪ್ರದರ್ಶಿಸಿದರು. ಸಾವಿರಾರು ಪ್ರೇಕ್ಷಕರು ಬಹುರೂಪಿ ಸಂಭ್ರಮದಲ್ಲಿ ಭಾಗಿಯಾದರು.

ಈ ಬಾರಿಯ ಬಹುರೂಪಿ ರಂಗೋತ್ಸವದಲ್ಲಿ ರಂಗಾಯಣಕ್ಕೆ 3.5 ಲಕ್ಷ ರೂ. ಆದಾಯ ಬಂದಿದೆ. ಬಹುರೂಪಿಯ ನಾಟಕಗಳನ್ನು 4 ಸಾವಿರ ಜನ ನೋಡಿದ್ದಾರೆ. ಉತ್ಸವದಲ್ಲಿ ಸಾಂಸ್ಕೃತಿಕ ನಗರಿಯ ಜನ, ರಂಗಪ್ರಿಯರು ಬಹುಭಾಷಾ ನಾಟಕಗಳಿಗೆ ಮಾರುಹೋಗಿದ್ದಾರೆ. ಕಲಾಮಂದಿರದಲ್ಲಿ ನಡೆದ ತೆಲುಗಿನ ಮಾಯಾಬಜಾರ್, ಬೆಂಗಳೂರಿನ ಬೆನಕ ತಂಡದ ವಿದ್ಯಾ ಸುಂದರಿ ಬೆಂಗಳೂರು ನಾಗರತ್ನಮ್ಮ ನಾಟಕ ಹೌಸ್‌ಫುಲ್ ಆಗಿದ್ದವು. ಭೂಮಿಗೀತ ಹಾಗೂ ಸಂಪತ್ ರಂಗಮಂದಿರದಲ್ಲಿ ನಡೆದ ಬಹುತೇಕ ಎಲ್ಲ ನಾಟಕಗಳ ಟಿಕೆಟ್ ಮಾರಾಟವಾಗಿದ್ದವು ಎಂದರು.

ಈ ವರ್ಷ 12 ಕನ್ನಡ, ಒಂದು ತುಳು ನಾಟಕವು ಸೇರಿ ಒಟ್ಟು 20 ನಾಟಕಗಳು ಪ್ರದರ್ಶನಗೊಂಡವು. ಕಳೆದ ಬಾರಿಯ ಉತ್ಸವದಲ್ಲಿ 36 ನಾಟಕಗಳ ಪ್ರದರ್ಶನವಿತ್ತು. ಟಿಕೆಟ್ ಮಾರಾಟದಲ್ಲಿ 7 ಲಕ್ಷರೂ. ಸಂಗ್ರಹವಾಗಿತ್ತು ಎಂದರು.

ಸರ್ಕಾರ ನೀಡಿದ್ದು 25 ಲಕ್ಷ ರೂ., ಖರ್ಚಾಗಿದ್ದು 40 ಲಕ್ಷ ರೂ.: ಈ ಬಾರಿ ಬಹುರೂಪಿಗೆ ರಾಜ್ಯ ಸರ್ಕಾರ ಕೇವಲ 25 ಲಕ್ಷ ರೂ. ಅನುದಾನ ನೀಡಿತ್ತು. ಆದರೆ, ಉತ್ಸವಕ್ಕೆ 40 ಲಕ್ಷ ರೂ. ಖರ್ಚಾಗಿದೆ. ರಂಗಾಯಣದ ಬೇರೆ ಹಣವನ್ನು ಉತ್ಸವಕ್ಕೆ ಬಳಸಿಕೊಳ್ಳಲಾಗಿದೆ. ಕಳೆದ ಮೂರು ವರ್ಷದಿಂದ ಬಹುರೂಪಿಯನ್ನು ರಾಜ್ಯದ ಉತ್ಸವ ಎಂದು ಸರ್ಕಾರ ಪರಿಗಣಿಸಿದೆ. ಮೂರು ವರ್ಷದಿಂದ ಹೆಚ್ಚಿನ ಜವಾಬ್ದಾರಿ ವಹಿಸಿ ಬಹುರೂಪಿ ನಡೆಸಿದ್ದೇವೆ. ನನ್ನ ಅವಧಿಯಲ್ಲಿ ಮೊದಲ ವರ್ಷ ಬಹುರೂಪಿಗೆ 1 ಕೋಟಿ ರೂ., ಎರಡನೇ ವರ್ಷ 50 ಲಕ್ಷ ರೂ. ಅನುದಾನ ಸಿಕ್ಕಿತ್ತು ಎಂದರು.

ಪ್ರತ್ಯೇಕ ಸಚಿವಾಲಯ ಬೇಕು: ಸರ್ಕಾರ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಹೆಚ್ಚಿನ ಅನುದಾನ ನೀಡಬೇಕು. ಸಂಸ್ಕೃತಿ ಇಲಾಖೆಯನ್ನು ಎಂದಿಗೂ ಕಡೆಗಣಿಸಬಾರದು. ಸಂಸ್ಕೃತಿ ಇಲಾಖೆಗೆ ಪ್ರತ್ಯೇಕ ಸಚಿವಾಲಯ ಮತ್ತು ಸಚಿವರನ್ನು ನೀಡಬೇಕು. ಈ ಹಿಂದೆ ಮೈಸೂರಲ್ಲಿ ಮಾತ್ರ ರಂಗಾಯಣ ಇತ್ತು. ಈಗ ಆರು ರಂಗಾಯಣ ಆಗಿದೆ. ಮೊದಲು ಒಂದು ರಂಗಾಯಣಕ್ಕೆ ನೀಡುತ್ತಿದ್ದ ಅನುದಾನವನ್ನು ಈಗ ಈ ಎಲ್ಲ ರಂಗಾಯಣಗಳಿಗೂ ಹಂಚಿಕೆ ಮಾಡಲಾಗುತ್ತಿದೆ. ಇದರಿಂದ ರಂಗಾಯಣವನ್ನು ನಿರ್ವಹಣೆ ಮಾಡುವುದು ಕಷ್ಟವಾಗುತ್ತದೆ. ಆದ್ದರಿಂದ ರಂಗಾಯಣಗಳಿಗೆ ತಲಾ ಒಂದು ಕೋಟಿ ರೂ. ಅನುದಾನ ನೀಡಬೇಕು. ರಂಗಾಯಣಗಳ ಸಂಖ್ಯೆ 10 ದಾಟಬೇಕು ಎಂದು ಮನವಿ ಮಾಡಿದರು.

ಬಿಕೋ ಎನ್ನುತ್ತಿದ್ದ ರಂಗಾಯಣ ಅಂಗಳ: 8 ದಿನಗಳ ಕಾಲ ಸಾಂಸ್ಕೃತಿಕ ಸೊಬಗಿನಿಂದ ರಂಗೇರಿದ್ದ ರಂಗಾಯಣ ಆವರಣ ಶುಕ್ರವಾರ ಭಣಗುಡುತ್ತಿತ್ತು. ವ್ಯಾಪಾರಿಗಳು ಮಳಿಗೆಗಳನ್ನು ತೆರವುಗೊಳಿಸಿದರೆ, ರಂಗಾಯಣದ ಸಿಬ್ಬಂದಿ ಲಾಭ-ನಷ್ಟಗಳ ಲೆಕ್ಕಾಚಾರದಲ್ಲಿ ನಿರತರಾಗಿದ್ದರು. ಪುಸ್ತಕ, ಆಹಾರ, ಕರಕುಶಲ ವಸ್ತುಗಳ ಮಾರಾಟಕ್ಕಾಗಿ ವ್ಯವಸ್ಥೆ ಮಾಡಿದ್ದ ಮಳಿಗೆಗಳನ್ನು ವ್ಯಾಪಾರಿಗಳು ತೆರವುಗೊಳಿಸುತ್ತಿದ್ದರು. ಕೆಲವರು ಆವರಣದಲ್ಲಿ ಬಿದ್ದಿದ್ದ ಪ್ಲಾಸ್ಟಿಕ್ ತಟ್ಟೆ, ಲೋಟ, ಕಸ-ಕಡ್ಡಿಯನ್ನು ಗುಡಿಸಿ ಸ್ವಚ್ಛಗೊಳಿಸುತ್ತಿದ್ದ ದೃಶ್ಯ ಕಂಡುಬಂತು.

ಸುದ್ದಿಗೋಷ್ಠಿಯಲ್ಲಿ ರಂಗಾಯಣ ಉಪ ನಿರ್ದೇಶಕಿ ನಿರ್ಮಲಾ ಮಠಪತಿ, ಬಹುರೂಪಿ ಸಂಚಾಲಕ ಜಗದೀಶ್ ಮನವಾರ್ತೆ ಇನ್ನಿತರರು ಇದ್ದರು.

ರಂಗಾಯಣಕ್ಕೆ ಸ್ಥಳ ನೀಡುವಂತೆ ಮನವಿ

ಅರವಿಂದನಗರದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಸೇರಿರುವ 2 ಎಕರೆ ಜಾಗ ಇದ್ದು, ಅದನ್ನು ರಂಗಾಯಣಕ್ಕೆ ನೀಡುವಂತೆ ಬಹುರೂಪಿ ಉದ್ಘಾಟನೆ ವೇಳೆ ಮುಖ್ಯಮಂತ್ರಿಗಳಿಗೆ ಮನವಿ ಮಾಡಲಾಗಿದೆ. ರಂಗಾಯಣಕ್ಕೆ ಜಾಗದ ಕೊರತೆ ಇದೆ. ಅರವಿಂದ ನಗರದಲ್ಲಿ 2 ಎಕರೆ ಖಾಲಿ ಜಾಗ ಇದೆ. ಅದನ್ನು ಗಾಂಧಿ ವಿಚಾರ ಪರಿಷತ್‌ಗೆ ನೀಡಿಲ್ಲ. ಆದರೆ, ಖಾಸಗಿ ಟ್ರಸ್ಟ್‌ನವರು ಆ ಜಾಗವನ್ನು ಕಬಳಿಸಲು ಪ್ರಯತ್ನಿಸಿದ್ದರು. ಸದ್ಯ ಅವರು ಹಾಕಿದ್ದ ಬೋರ್ಡ್‌ನ್ನು ತೆರವು ಮಾಡಲಾಗಿದ್ದು, ಆ ಜಾಗವನ್ನು ರಂಗಾಯಣಕ್ಕೆ ನೀಡುವಂತೆ ಕೋರಿದ್ದೇವೆ. ಶೀಘ್ರದಲ್ಲೇ ಆರಂಭವಾಗಲಿರುವ ಬೆಳಗಾವಿ ಅಧಿವೇಶನದ ಸಮಯದಲ್ಲೂ ಸ್ಥಳೀಯ ಶಾಸಕರಾದ ಎಸ್.ಎ.ರಾಮದಾಸ್, ಎಲ್.ನಾಗೇಂದ್ರ ಅವರ ಸಮ್ಮುಖದಲ್ಲಿ ಮತ್ತೊಮ್ಮೆ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ಮನವಿ ಮಾಡಲಾಗುತ್ತದೆ.

ಡಿ.21ರಂದು ಸಾರ್ವಜನಿಕ ಸಮಾಲೋಚನಾ ಸಭೆ

ಮೈಸೂರು,ಡಿ.16- ಹುಣಸೂರು ನಗರಸಭಾ ಕಾರ್ಯಾಲಯ ವತಿಯಿಂದ ನಗರಸಭಾ ಅಧ್ಯಕ್ಷರಾದ ಗೀತಾ ಅಧ್ಯಕ್ಷತೆಯಲ್ಲಿ ಡಿಸೆಂಬರ್ 21ರ ಮಧ್ಯಾಹ್ನ 3 ಗಂಟೆಗೆ ಕೌನ್ಸಿಲ್ ಸಭಾಂಗಣದಲ್ಲಿ 2023-24ನೇ ಸಾಲಿನ ಅಂದಾಜು ಆಯವ್ಯಯದ ಬಗ್ಗೆ ಸಾರ್ವಜನಿಕ ಸಮಾಲೋಚನಾ ಸಭೆಯನ್ನು ಹಮ್ಮಿಕೊಳ್ಳಲಾಗಿದೆ.

ಉತ್ತರಾಖಂಡ ಮುಖ್ಯಮಂತ್ರಿ ಪತ್ನಿ, ಪುತ್ರರ ಮೈಸೂರು ಪ್ರವಾಸ

ಅರಮನೆ ಅಂದಕ್ಕೆ ಮಾರುಹೋದ ತಾಯಿ-ಮಕ್ಕಳು



ಮೈಸೂರು, ಡಿ. 16(ಆರ್‌ಕೆ)- ಉತ್ತರಾಖಂಡ ರಾಜ್ಯದ ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಅವರ ಪತ್ನಿ ಶ್ರೀಮತಿ ಗೀತಾ ಧಾಮಿ, ಇಬ್ಬರು ಪುತ್ರರೊಂದಿಗೆ ನಿನ್ನೆ (ಡಿ. 15)ಯಿಂದ ಎರಡು ದಿನ ಮೈಸೂರು ಪ್ರವಾಸ ಕೈಗೊಂಡಿದ್ದರು.

ಪುತ್ರರಾದ ದಿವಾಕರ ಸಿಂಗ್ ಧಾಮಿ ಮತ್ತು ಪ್ರಭಾಕರ ಸಿಂಗ್ ಧಾಮಿ ಅವರೊಂದಿಗೆ ಗುರುವಾರ ಬೆಳಗ್ಗೆ 11.40 ಗಂಟೆಗೆ ಮೈಸೂರಿಗೆ ಆಗಮಿಸಿದ ಗೀತಾ ಧಾಮಿ, ಮಧ್ಯಾಹ್ನ 12.10ಕ್ಕೆ ಚಾಮುಂಡಿಬೆಟ್ಟಕ್ಕೆ ತೆರಳಿ ತಾಯಿ ಚಾಮುಂಡೇಶ್ವರಿ ದರ್ಶನ ಪಡೆದು ಬಂದು ಮಧ್ಯಾಹ್ನ 2 ಗಂಟೆ ವೇಳೆಗೆ ಸದರನ್ ಸ್ಟಾರ್ ಹೋಟೆಲ್‌ನಲ್ಲಿ ವಿಶ್ರಾಂತಿ ಪಡೆದರು.

ನಂತರ ಮೈಸೂರು ಅರಮನೆಗೆ ಪುತ್ರರೊಂದಿಗೆ ಭೇಟಿ ನೀಡಿದ ಗೀತಾ ಧಾಮಿ ಅವರನ್ನು ಪುಷ್ಪಗುಚ್ಛ ನೀಡುವ ಮೂಲಕ ಆತ್ಮೀಯವಾಗಿ ಬರಮಾಡಿಕೊಂಡ ಅರಮನೆ ಮಂಡಳಿ ಉಪನಿರ್ದೇಶಕ ಟಿ.ಎಸ್. ಸುಬ್ರಹ್ಮಣ್ಯ, ಮೈಸೂರು ಪೇಟ, ಗಂಧದ ಹಾರ ಹಾಕಿ ಗೌರವಿಸಿದರು. ಅರಮನೆಯ ಕಲಾಕೃತಿ, ಚಿನ್ನದ ಅಂಬಾರಿ, ಖಾಸಗಿ ದರ್ಬಾರ್, ಉದ್ಯಾನವನ ವೀಕ್ಷಿಸಿದ ಗೀತಾ ಧಾಮಿ, ಅರಮನೆಯ ಸೌಂದರ್ಯ, ವೈಭವವನ್ನು ಕೊಂಡಾಡಿದರು.

ಅಲ್ಲಿಂದ ಮಾನಂದವಾಡಿ ರಸ್ತೆಯಲ್ಲಿರುವ ರೇಷ್ಮೆ ಕಾರ್ಖಾನೆಗೆ ಭೇಟಿ ನೀಡಿದ ಬಳಿಕ ಸಂಜೆ ಕೆಆರ್‌ಎಸ್‌ಗೆ ತೆರಳಿ ಅಲ್ಲಿನ ಬೃಂದಾವನ, ಸಂಗೀತ ಕಾರಂಜಿ ವೀಕ್ಷಿಸಿದ ಬಳಿಕ ಹೋಟೆಲ್ ರಾಯಲ್ ಆರ್ಕಿಡ್‌ನಲ್ಲಿ ಅಲ್ಪ ಕಾಲ ವಿಶ್ರಾಂತಿ ಪಡೆದ ನಂತರ ರಾತ್ರಿ 10 ಗಂಟೆಗೆ ಮೈಸೂರಿಗೆ ಹಿಂದಿರುಗಿ ಸದರನ್ ಸ್ಟಾರ್ ಹೋಟೆಲ್‌ನಲ್ಲಿ ವಾಸ್ತವ್ಯ ಹೂಡಿದ್ದರು.

ಇಂದು ಬೆಳಗ್ಗೆ ಶ್ರೀರಂಗಪಟ್ಟಣದ ಶ್ರೀ ರಂಗನಾಥಸ್ವಾಮಿ ದೇವಸ್ಥಾನ, ನಿಮಿಷಾಂಬ ದೇವಸ್ಥಾನದಲ್ಲಿ ದರ್ಶನ ನಂತರ ಗೀತಾ ಧಾಮಿ, ಮಧ್ಯಾಹ್ನ 12 ಗಂಟೆಗೆ ಮೈಸೂರಿಗೆ ವಾಪಸ್ಸಾಗಿ, ಸದರನ್ ಸ್ಟಾರ್ ಹೋಟೆಲ್‌ನಲ್ಲಿ ಭೋಜನ ಸ್ವೀಕರಿಸಿದ ನಂತರ 1 ಗಂಟೆಗೆ ಬೆಂಗಳೂರಿಗೆ ಪ್ರಯಾಣ ಬೆಳೆಸಿದರು ಎಂದು ಶಿಷ್ಟಾಚಾರ ಅಧಿಕಾರಿಗಳು ತಿಳಿಸಿದ್ದಾರೆ. ಮೈಸೂರಿನ ಪ್ರವಾಸಿ ತಾಣಗಳು, ದೇವಾಲಯ ಹಾಗೂ ಅರಮನೆಯ ವೈಭವ ಸವಿದ ಗೀತಾ ಧಾಮಿ, ಅಲ್ಲಿನ ಉದ್ಯಾನವನದ ನಿರ್ವಹಣೆಯನ್ನೂ ಉತ್ತರಾಖಂಡ ಮುಖ್ಯಮಂತ್ರಿ ಪತ್ನಿ ಗೀತಾ ಧಾಮಿ ಕೊಂಡಾಡಿದರು.

ನಕ್ಕರೆ ಅದೇ ಸ್ವರ್ಗ

ಗಂಡ : ನಾನು ತಪ್ಪಿಸಿಕೊಂಡ್ರೆ ನೀನೇನು ಮಾಡ್ತೀಯಾ?
ಹೆಂಡತಿ : ಪೇಪರ್‌ನಲ್ಲಿ ಜಾಹೀರಾತು ಕೊಡ್ತೀನಿ.
ಗಂಡ : ವಾಹ್! ಏನಂತ ಕೊಡ್ತೀಯಾ?
ಹೆಂಡತಿ : ಗಂಡ ಬೇಕಾಗಿದ್ದಾನೆ ಅಂತ!

ಮೈಸೂರು ಮಿತ್ರ

ಶನಿವಾರ, 17 ಡಿಸೆಂಬರ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

ಇಚ್ಛಾಶಕ್ತಿ, ನಿರ್ಧಾರ, ಸಾಧನೆ ಯಶಸ್ವಿ ಜೀವನದ ಸೂತ್ರಗಳು.

– ಅಲ್ಡಸ್ ಹಕ್ಸ್‌ಲಿ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಮುಳ್ಳು ಇಲ್ಲದೆ ಗುಲಾಬಿ ಇಲ್ಲ, ನೋವು ಇಲ್ಲದೆ ಪ್ರೀತಿಯಲ್ಲ

ನಿಮ್ಮ ಪತ್ರಗಳು

ವಿ.ವಿ ಮೊಹಲ್ಲಾದ 5ನೇ ಮುಖ್ಯ ರಸ್ತೆಗೆ ಕುವೆಂಪು ರಸ್ತೆ ಅಥವಾ ಉದಯರವಿ ರಸ್ತೆ ಎಂದು ನಾಮಕರಣ ಮಾಡಿ

ಮಾನ್ಯರೆ,



ಮೈಸೂರಿನ ವಾಣಿ ವಿಲಾಸ ಮೊಹಲ್ಲಾದಲ್ಲಿ ರಸ್ತೆಗಳಿಗೆ ನಾಡಿನ ಸಂಸ್ಕೃತಿಯ ಪ್ರತೀಕವಾದ ವಾಲ್ಮೀಕಿ ರಸ್ತೆ, ಆದಿ ಪಂಪ ರಸ್ತೆ, ಕಾಳಿದಾಸ ರಸ್ತೆ ಎಂದು ಸುಂದರವಾದ ಹೆಸರನ್ನಿಟ್ಟಿದ್ದಾರೆ. ಅದೇ ರೀತಿ ವಿ.ವಿ.ಮೊಹಲ್ಲಾದ ಐದನೇ ಮುಖ್ಯ ರಸ್ತೆಯಲ್ಲಿ ರಾಷ್ಟ್ರಕವಿ ಕುವೆಂಪು ಅವರು ತಮ್ಮ ಜೀವಿತಾವಧಿಯ ಕೊನೆಯ ದಿನಗಳಲ್ಲಿ ವಾಸವಿದ್ದ ಉದಯರವಿ ಮನೆ ಇದೆ. ಈ ರಸ್ತೆಗೆ ಕುವೆಂಪು ರಸ್ತೆ ಅಥವಾ ಉದಯರವಿ ರಸ್ತೆ ಎಂದು ನಾಮಕರಣ ಮಾಡಿದರೆ ಅರ್ಥಪೂರ್ಣವಾಗಿರುತ್ತದೆ. ನಿಜ ಹೇಳಬೇಕೆಂದರೆ ಈ ರಸ್ತೆಯಲ್ಲಿ ನಾಮಫಲಕವೇ ಕಳೆದ ಐದು ವರ್ಷಗಳಿಂದ ಕಾಣೆಯಾಗಿದೆ. ಯಾದವಗಿರಿಯಲ್ಲಿ ಐ ಲೌವ್ ಯಾದವಗಿರಿ ಎಂಬ ಆಂಗ್ಲ ಭಾಷೆಯ ಸುಂದರ ವಿದ್ಯುತ್ ಅಲಂಕೃತ ದೊಡ್ಡ ನಾಮಫಲಕ ಹಾಕಿದ್ದಾರೆ. ಅದೇ ರೀತಿ ಐದನೇ ಮುಖ್ಯ ರಸ್ತೆಗೆ ಕುವೆಂಪು ರಸ್ತೆ ಅಥವಾ ಉದಯರವಿ ರಸ್ತೆ ಎಂಬ ನಾಮಫಲಕ ಹಾಕಬಹುದಲ್ಲವೇ? ಕನ್ನಡ ನಾಡು ನುಡಿ ಸಂಸ್ಕೃತಿಗೆ ಕಿಂಚಿತ್ತಾದರೂ ಗೌರವ ಸಲ್ಲಿಸಿದಂತಾಗುತ್ತದೆ.

– ಡಾ.ಟಿ.ರಘುನಾಥ್, ವಾಣಿ ವಿಲಾಸ ಮೊಹಲ್ಲಾ, ಮೈಸೂರು

ಸರ್ಕಾರಿ ಶಾಲೆಗಳ ಕಡೆಗೆ ಗಮನಹರಿಸಿ

ಮಾನ್ಯರೆ,

ಇತ್ತೀಚಿನ ದಿನಗಳಲ್ಲಿ ಸರ್ಕಾರಿ ಶಾಲೆಗಳೆಂದರೆ ಮೂಗು ಮುರಿಯುವ ಜನ ಬಹಳ ಉಂಟು. ಗ್ರಾಮೀಣ ಪ್ರದೇಶಗಳ ಸರ್ಕಾರಿ ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಯಲ್ಲಿ ಏರಿಕೆ ಕಂಡು ಬರುತ್ತಿದೆ. ಗ್ರಾಮೀಣ ಪ್ರದೇಶದಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳು ಕಡಿಮೆ ಇರುವ ಕಾರಣ ನಗರ ಪ್ರದೇಶಗಳಲ್ಲಿ ಪೋಷಕರು ಸರ್ಕಾರಿ ಶಾಲೆಗಳಲ್ಲಿ ತಮ್ಮ ಮಕ್ಕಳನ್ನು ಓದಿಸಲು ಆಸಕ್ತಿ ಇರದ ಕಾರಣ ವಿದ್ಯಾರ್ಥಿಗಳ ಸಂಖ್ಯೆ ಬಹಳ ಕಡಿಮೆ. ಈ ಕಾರಣಕ್ಕಾಗಿ ಸರ್ಕಾರಿ ಶಾಲೆಗಳನ್ನು ಮುಚ್ಚುವ ಚರ್ಚೆ ಆಗಾಗ ಮುನ್ನೆಲೆಗೆ ಕೇಳಿ ಬರುತ್ತಿರುವುದು.

ಆಧಾರ್ ಕಾರ್ಡ್, ಓಟರ್ ಐಡಿ ಕಾರ್ಡ್, ಪಾನ್ ಕಾರ್ಡ್, ರೇಷನ್ ಕಾರ್ಡ್, ಸರ್ಕಾರದ ನಿವೇಶನ, ಸರ್ಕಾರಿ ನೋಂದಾವಣಿ, ಹೀಗೆ ಸರ್ಕಾರದ ಮೇಲೆ ಅವಲಂಬಿತವಾಗಿರುವಾಗ ಜನಸಾಮಾನ್ಯರಲ್ಲಿ ಸರ್ಕಾರಿ ಶಾಲೆಗಳೆಂದರೆ ಕೆಲವರಲ್ಲಿ ಕೀಳರಿಮೆ.

ವಿದ್ಯಾರ್ಥಿಗಳು ತಮ್ಮ ವ್ಯಾಸಂಗ ಮುಗಿಸಿದ ಕೂಡಲೇ ಹೇಗಾದರೂ ಸರ್ಕಾರಿ ಕೆಲಸ ಪಡೆಯುವ ಹಂಬಲ. ಇನ್ನೂ ಕೆಲವರು ವಾಮ ಮಾರ್ಗದಲ್ಲಾದರೂ ಪಡೆಯುವ ಹಂಬಲ. ಇನ್ನೂ ವಧು–ವರರ ಅನ್ವೇಷಣೆಯಲ್ಲಿ ಸರ್ಕಾರಿ ನೌಕರಿ ಇರುವವರಿಗೆ ಮನ್ನಣೆ ಕೊಡುವುದು ವರ್ತಮಾನ ಸತ್ಯದ ವಿಚಾರವಾಗಿದೆ.

ತಮ್ಮ ಜೀವನದುದ್ದಕ್ಕೂ ಸರ್ಕಾರದ ಸಂಬಳ ಹಾಗೂ ನಿವೃತ್ತಿಯ ನಂತರ ಮಾಸಾಶನ, ಪಿಂಚಣಿ ಪಡೆಯುವ ಸರ್ಕಾರಿ ನೌಕರರು ಸರ್ಕಾರಿ ಶಾಲೆಗಳ ಪರವಾಗಿ ನಿಲ್ಲದೆ ಕೆಲವರು ತಮ್ಮ ಮಕ್ಕಳನ್ನು ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ವಿಧ್ಯಾಭ್ಯಾಸವನ್ನು ಕೊಡಿಸುವುದು ಉಂಟು.

ಸರ್ಕಾರಿ ಶಾಲೆಗಳಲ್ಲಿ ಓದಿ ದೇಶದ ಉನ್ನತ ಮಟ್ಟದ ಉದ್ಯೋಗದಲ್ಲಿ ಇರುವವರನ್ನು ನೋಡಿದ್ದೇವೆ. ಆಗಾಗ ಸರ್ಕಾರಿ ಶಾಲೆಗಳ ಶಿಕ್ಷಣಕ್ಕೆ ಸಂಬಂಧಿಸಿದ ಪ್ರಗತಿ ಪರಿಶೀಲನೆಗಳಲ್ಲಿ ಮಾತನಾಡುವವರು ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗಳಲ್ಲಿ ಓದಿಸುತ್ತಿದ್ದೇವಾ ಎಂದು(ಕೆಲವರು ಮಾತ್ರ) ಒಮ್ಮೆ ಆತ್ಮಾವಲೋಕನ ಮಾಡಿಕೊಳ್ಳಲಿ. ಸರ್ಕಾರ ಮತ್ತು ಜನ ಸಾಮಾನ್ಯರು ಒಂದೇ ನಾಣ್ಯದ ಎರಡು ಮುಖಗಳು ಇದ್ದಂತೆ. ಸರ್ಕಾರದ ಸವಲತ್ತುಗಳನ್ನು ಅವಲಂಬಿಸುವ ನಾವು ಮುಂದಿನ ದೇಶದ ಭವಿಷ್ಯವನ್ನು ಸೃಷ್ಟಿ ಮಾಡುವ ಕೇಂದ್ರಗಳಾದ ಸರ್ಕಾರಿ ಶಾಲೆಗಳ ಕಡೆಗಣನೆ ಸರಿಯಲ್ಲ.

–ಕಂಗಾಣಿಸೋಮು ಪಿ.ಸಿ., ಕ್ಯಾತಮಾರನಹಳ್ಳಿ, ಮೈಸೂರು

ಕಂದಾಯನಗರದ ಬವಣೆ

ಮಾನ್ಯರೆ,

ನಾನೊಬ್ಬ ಹಿರಿಯ ನಾಗರಿಕ. ಮೈಸೂರು ಕಂದಾಯನಗರ 3ನೇ ಹಂತದ ವಾಸಿ. ಚಕ್ಕುಬಂದಿ ಪೂರ್ವಕ್ಕೆ ಮಧುವನ ಬಡಾವಣೆ, ಪಶ್ಚಿಮಕ್ಕೆ ಲಿಂಗಾಂಬುಧಿ ಕೆರೆ, ಉತ್ತರಕ್ಕೆ ಪಾರ್ಕ್, ದಕ್ಷಿಣಕ್ಕೆ ಗಿರಿಯಮ್ಮ ಬಡಾವಣೆ, ವಾರ್ಡ್ ನಂ. 64, ಕಾರ್ಪೋರೇಟರ್ ಚಂಪಕ, ಈ ಬಡಾವಣೆಯಲ್ಲಿ ಚರಂಡಿ ತೆಗೆದರು. ಸರಿಯಾಗಿ ಮುಚ್ಚಲಿಲ್ಲ. ಸುಮಾರು 20 ದಿವಸಗಳಾಯಿತು. ಮಣ್ಣು ಗುಡ್ಡೆ, ಕಲ್ಲು ಚೂರು, ಮರದ ಟೊಂಗೆಗಳು ಗುಡ್ಡೆ ಮಾಡಿ ರಸ್ತೆ ಕಿರಿದು ಮಾಡಿ ಹೋಗಿದ್ದಾರೆ. ಹಿರಿಯ ನಾಗರಿಕರೇ ಹೆಚ್ಚು ವಾಸಿಸುವ ಬಡಾವಣೆ ಇದು. ಓಡಾಡಲು ಮತ್ತು ವಾಹನ ಓಡಿಸಲು ತುಂಬಾ ತೊಂದರೆಯಾಗಿದೆ. ಮಳೆ ಬಂದರೆ ಕೆಸರು ಗದ್ದೆಯಾಗುತ್ತಿದೆ. ದಯವಿಟ್ಟು ಸಂಬಂಧಪಟ್ಟ ಅಧಿಕಾರಿಗಳು ಇತ್ತ ಗಮನಹರಿಸಿ ಸರಿಪಡಿಸಬೇಕೆಂದು ಈ ಮೂಲಕ ಮನವಿ.

–ಎನ್. ವೆಂಕಟಾಚಲಪ್ಪ, ಕಂದಾಯನಗರ, ಮೈಸೂರು.

ಹೆಚ್ಚುವರಿ ಬಸ್ ಸೌಲಭ್ಯ ಕಲ್ಪಿಸುವಂತೆ ಮನವಿ



ಮಾನ್ಯರೆ,

ಮೈಸೂರಿನ ಬೋಗಾದಿ–ಬೀರಿಹುಂಡಿ ಮಾರ್ಗದಲ್ಲಿ ಬಸ್ ಸೌಲಭ್ಯವಿಲ್ಲದೆ ಬೋಗಾದಿ, ಬೀರಿಹುಂಡಿ, ಮರಟಿಕ್ಯಾತನಹಳ್ಳಿ, ಗಾಣಿಗರಹುಂಡಿ ಹಾಗೂ ದಾಸನಕೊಪ್ಪಲಿನಲ್ಲಿ ನಿತ್ಯವೂ ಶಾಲಾ ಮಕ್ಕಳು ಮತ್ತು ಕೂಲಿ ಕಾರ್ಮಿಕರು ಬಸ್‌ಗಾಗಿ ಕಾಯುವ ಸ್ಥಿತಿ ನಿರ್ಮಾಣವಾಗಿದೆ. ಇದರಿಂದ ವಿದ್ಯಾರ್ಥಿಗಳು ಸಕಾಲಕ್ಕೆ ಶಾಲಾ, ಕಾಲೇಜಿಗೆ ತೆರಳಲು ಹಾಗೂ ಕಾರ್ಮಿಕರು ಕೂಲಿ ಕೆಲಸಗಳಿಗೆ ತೆರಳಲು ತುಂಬಾ ತೊಂದರೆಯಾಗಿದೆ. ಕೂಡಲೇ ಸಂಬಂಧಪಟ್ಟ ಸಾರಿಗೆ ಅಧಿಕಾರಿಗಳು ಗಮನಹರಿಸಿ ಈ ಮಾರ್ಗದಲ್ಲಿ ಹೆಚ್ಚುವರಿ ಬಸ್ ಸೌಲಭ್ಯ ಕಲ್ಪಿಸುವಂತೆ ಮನವಿ.

– ನೊಂದ ವಿದ್ಯಾರ್ಥಿಗಳು, ಬೋಗಾದಿ.



ಗ.ನಾ.ಭಟ್ಟ
ಮೊ : 9019376365

ಸತ್ಯ ನಿತ್ಯ

ಆಚಾರವಿಲ್ಲದ ನಾಲಗೆ...!

ದೇಶದ ಪರಮ ಧ್ಯೇಯ ಏನಾಗಿರಬೇಕು ಎಂಬ ವಿಚಾರದಲ್ಲಿ ಭಾರತೀಯ ಮನಸ್ಸು, ಹಿಂದೂ ಮನಸ್ಸು ಇನ್ನೂ ಇಬ್ಬಗೆಯಾಗಿಯೇ ಇದ್ದಂತಿದೆ. ಕುಳಿತಾಗ, ನಿಂತಾಗ ಶರೀರದ ಪೂಜೆ ಮಾಡುವುದು, ಇಂದ್ರಿಯ ಸುಖವೇ ಪರಮ ಶ್ರೇಷ್ಠವೆಂದು ಭಾವಿಸುವುದು, ಕ್ಷಣಿಕ ಸುಖಗಳ ಬೆನ್ನ ಹಿಂದೆ ಓಡುವುದು, ಇಂದ್ರಿಯ ಜನ್ಯವಾದ, ಇಂದ್ರಿಯ ನಿಷ್ಠವಾದ ದೈಹಿಕ ಸುಖವೇ ಪರಮೋಚ್ಚ ಸುಖವೆಂದು ಪರಿಗಣಿಸುವುದು, ಸುಪ್ತವಾಸನಾಕಾಂಕ್ಷೆಗಳನ್ನು ಕೆರಳಿಸುವ ಆಹಾರ ಪಾನೀಯಗಳನ್ನು ಸೇವಿಸುವುದು, ಶಾಸ್ತ್ರ, ಯಂತ್ರ, ಸಂಸ್ಕೃತಿ, ವಿಜ್ಞಾನ–ತಂತ್ರಜ್ಞಾನ ಎಲ್ಲವೂ ಸೇರಿ ನಿರ್ಮಿಸಿದ ವಿವಿಧ ವಾಹನ ಸೌಕರ್ಯಗಳನ್ನು ಅನುಭವಿಸುವುದು ಇವೇ ಮೊದಲಾದವನ್ನು ಕೆಲವರು ಜೀವನದ ಪರಮ ಧ್ಯೇಯವೆಂದು ಭಾವಿಸಿದಂತಿದೆ.

ತರಹೆವಾರಿ ಪಿಠೋಪಕರಣಗಳು, ಜನರ ಆಯುಷ್ಯವನ್ನೂ, ಆರೋಗ್ಯವನ್ನೂ ಹೆಚ್ಚಿಸಿದ ವೈದ್ಯಕೀಯ ವಿಭಾಗಗಳು, ರಜತ ಪರದೆಯ ಮೇಲೆ ಸರ್ವಾಂಗಗಳನ್ನೂ ಪ್ರದರ್ಶಿಸುತ್ತಾ, ಕಾಮುಕವಾದ ಹಾವ ಭಾವಗಳನ್ನು ಮಿಂಚಿಸುತ್ತಾ ಕುಣಿಯುವ ಮೈಚೆಲುವಿನ ನಟಿಯರು, ಕಾರುಗಳು, ಬಂಗಲೆಗಳು, ಬ್ಯಾಂಕ್ ಪಾಸ್ ಬುಕ್ಕುಗಳು, ಬಗೆಬಗೆಯ ಹೊಸಹೊಸ ರೀತಿಯ ಪಕ್ವಾನ್ನಗಳು, ಕ್ಷಣಕ್ಷಣಕ್ಕೆ ಬದಲಾಗುವ ಸೊಗಸಿನ ವೇಷಭೂಷಣಗಳು, ಮನಸ್ಸನ್ನು ಕಚಗುಳಿಯಾಡಿಸಿ ಕುಣಿಸುವ ಲಘುವಾದ ಉನ್ಮತ್ತ ಹಾಡುಗಳು, ಅನಾಯಾಸವಾಗಿ ಕೊರಳಿಗೆ ಬಂದು ಬೀಳುವ ಅಟ್ಟಹಾಸದ ಪ್ರತಿಷ್ಠೆಯ ಪುಷ್ಪಹಾರಗಳು, ಸನ್ಮಾನಗಳು ಇವೆಲ್ಲವೂ ಮನುಷ್ಯನನ್ನು ಯಾವುದೋ ಒಂದು ಬಾವೋದ್ವೇಗದಲ್ಲಿ ಲೀನವಾಗಿಸುವುದರಲ್ಲಿ ಸಂದೇಹವೇ ಇಲ್ಲ. 'ಭೋಗಕ್ಕಾಗಿಯೇ ಜನ್ಮ, ಮನಸ್ಸಿನ ಉದ್ರೇಕವೇ ಸೌಖ್ಯ' ಎಂಬೀ ತರಹದ ಪಂಥವನ್ನು ಹುಟ್ಟು ಹಾಕಿದ್ದುದರಲ್ಲಿ ಇವುಗಳ ಪಾತ್ರ ಹಿರಿದಾದುದು. ಮನುಷ್ಯ ಇನ್ನೂ ಅದರಲ್ಲೇ ಮುಳುಗೇಳುತ್ತಿದ್ದಾನೆ. ಇದನ್ನೇ 'ಪ್ರವೃತ್ತಿ ಪಂಥ' ಎಂದು ಕರೆಯುವುದು. ಇದು ಪಾಶ್ಚಾತ್ಯರಲ್ಲಿ ಹೆಚ್ಚು. ಆದರೆ ಭಾರತೀಯರಲ್ಲೂ ಇದು ಕಡಿಮೆಯಿಲ್ಲ.

ಇದಕ್ಕೆ ವಿರುದ್ಧವಾದುದೇ 'ನಿವೃತ್ತಿ ಪಂಥ'. ಭಾರತೀಯರ ಮಟ್ಟಿಗೆ ಇದೊಂದು ಬಗೆಯ ವಿಲಕ್ಷಣ ಪಂಥ ಅತ್ತ ಪಾಶ್ಚಾತ್ಯರಂತೆ ಪೌರುಷಪೂರ್ವಕವಾದ ಪ್ರವೃತ್ತಿ ಪಂಥವೂ ಅಲ್ಲ; ಇತ್ತ ನಮ್ಮ ಪೂರ್ವಜರು, ಋಷಿ–ಮುನಿಗಳು ಶಾಸ್ತ್ರೀಯವಾಗಿ ನಿರೂಪಿಸಿದ ನಿವೃತ್ತಿ ಪಂಥವೂ ಅಲ್ಲ. ಅಂತಹ ಎಡಬಿಡಂಗಿತನದ ಮನೋವೃತ್ತಿ ನಮ್ಮದು. ಪಾಶ್ಚಾತ್ಯರ ಪ್ರವೃತ್ತಿಯಲ್ಲಿ ಪೌರುಷವಿದೆ; ಶ್ರದ್ಧೆಯಿದೆ; ದಕ್ಷತೆಯಿದೆ. ನಮ್ಮದು ಅರೆಮನಸ್ಸಿನದು; ವಿಚಕ್ಷಣತೆಯಿಲ್ಲದ ಒಂದು ಬಗೆಯ ಮಂದತನದ್ದು. ಅತ್ತ ಅದು ಪೂರ್ಣ ನಿವೃತ್ತಿಯೂ ಅಲ್ಲ; ಇತ್ತ ಪ್ರವೃತ್ತಿಯೂ ಅಲ್ಲ. ಅಂಥಾದ್ದು ನಮ್ಮದು. ನಮಗೆ ಭೋಗಲಾಲಸೆ ಕಡಿಮೆಯೇನೂ ಇಲ್ಲ. ಆದರೆ ಅದು ನಮಗೆ ಬೇಡವೋ ಎಂಬಂತೆ ನಡೆದುಕೊಳ್ಳುವುದರಲ್ಲಿ ನಮ್ಮವರು ಅಗ್ರಗಣ್ಯರು. ಪಾಶ್ಚಾತ್ಯರ ವೈಭವ, ವಿಲಾಸ, ಸಂಪತ್ತುಗಳನ್ನು ನೋಡಿ ನಾವು ಹೊಟ್ಟೆಕಿಚ್ಚು ಪಟ್ಟುಕೊಳ್ಳುತ್ತೇವೆ. ಅವು ನಮಗೂ ಬೇಕು ಎಂದು ಬಯಸುತ್ತೇವೆ. ಆದರೆ ಬೇಡವೋ ಎಂಬಂತೆ ವರ್ತಿಸುತ್ತೇವೆ. ನಮ್ಮದು ರೋಗಿಯ ಚಿತ್ತ ದೌರ್ಬಲ್ಯ; ತೇಜೋಹೀನತೆ, ಚಪಲತೆ. ಸುಖ ಪಡುವುದೆಂದರೆ ನಮ್ಮಲ್ಲಿ ಬಹುಮಂದಿಗೆ ನಾಚಿಕೆ. ನಮ್ಮ ಜೀವನದ ಪರಮ ಧ್ಯೇಯ ಏನಾಗಿರಬೇಕು ಅನ್ನುವುದರಲ್ಲಿ ನಮಗೆ ಸ್ಪಷ್ಟತೆಯಿಲ್ಲ; ಖಚಿತತೆಯಿಲ್ಲ. ವೈರಾಗ್ಯ, ನಿವೃತ್ತಿ, ತ್ಯಾಗ, ಮೋಕ್ಷ ಎಂದೆಲ್ಲಾ ಬಡಬಡಿಸುತ್ತೇವೆ. ದೇಹ ತುಚ್ಛ; ಭೋಗ ನೀಚ. ಇದೇ ನಮ್ಮ ವೇದಾಂತದ ತಿರುಳು ಎಂದೆಲ್ಲಾ ಉಪನ್ಯಾಸ ಮಾಡತೊಡಗುತ್ತೇವೆ. ವಸ್ತುತಃ ಇವೆಲ್ಲಾ ವೇದಾಂತದ ಆಭಾಸ. ವೇದಾಂತದಲ್ಲಿ ಪ್ರವೃತ್ತಿ–ನಿವೃತ್ತಿ ಬಗ್ಗೆ ಖಚಿತವಾದ, ನಿಖರವಾದ, ಸ್ಪಷ್ಟವಾದ ಲಕ್ಷಣ–ನಿಷ್ಕರ್ಷೆಗಳಿವೆ ಅದನ್ನು ಸರಿಯಾಗಿ ಓದಿ, ತಿಳಿದುಕೊಳ್ಳದೆ ಇದ್ದವರು ಬಹಳ ಮಂದಿ ಇದ್ದಾರೆ. ಅಂತಹವರು ಮನಸ್ಸಿಗೆ ತೋಚಿದಂತೆ, ಬಾಯಿಗೆ ಬಂದಂತೆ ಮಾತನ್ನು ಹರಿಬಿಡುತ್ತಾರೆ.

ಇಂಥಾಹದ್ದನ್ನು ಕಂಡು ಪಾಶ್ಚಾತ್ಯರು ನಮ್ಮ ಕುರಿತು ಉದ್ಗರಿಸುವುದೇ ಬೇರೆ. ಭಾರತೀಯರು ಎಲ್ಲಾ ವಿಚಾರಗಳಲ್ಲೂ ಇಬ್ಬಗೆಯ ನೀತಿಯನ್ನು ಅನುಸರಿಸುತ್ತಾರೆ; ಅವರು ಕಪಟವನ್ನು ಆಚರಿಸುತ್ತಾರೆ. ಮೋಸ ಮಾಡುತ್ತಾರೆ; ಸುಳ್ಳು ಹೇಳುತ್ತಾರೆ. ಹಿಂದೂ ಸಂಸ್ಕೃತಿ ದೊಡ್ಡದು, ಹಿರಿದು ಎಂದು ಹೆಮ್ಮೆ ಪಟ್ಟುಕೊಳ್ಳುತ್ತಾರೆ. ಆದರೆ ಅದರ ಮಗ್ಗುಲಲ್ಲೇ ಹೊರಗೊಂದು ಒಳಗೊಂದು ಎಂಬ ನೀತಿಯನ್ನು ಅನುಸರಿಸುತ್ತಾರೆ. ಇಂಡಿಯನ್ಸ್ ಅಂದರೆ ಆತ್ಮವಂಚಕರು; ತಮಗೆ ಬೇಕೆನಿಸಿದುದನ್ನು ಬೇಕು ಅಂತ ಹೇಳುವುದಿಲ್ಲ; ಅವರು ತಮ್ಮ ಭಾವನೆಗಳನ್ನು ವ್ಯಕ್ತಪಡಿಸುವುದಿಲ್ಲ. ಬಯಕೆಗಳನ್ನು ಅದುಮಿಟ್ಟುಕೊಂಡು ಅನಗತ್ಯವಾಗಿ ನರಳುತ್ತಾರೆ. ಹೆಣ್ಣೊಂದು ಅತ್ಯಾಚಾರಕ್ಕೆ ಒಳಗಾಗಿ ಮಗುವನ್ನು ಹೆತ್ತರೆ ಅವಳನ್ನು ಬಹಿಷ್ಕರಿಸುತ್ತಾರೆ. ಅವಳು ಕಲುಷಿತೆ; ಪಾಪಿ ಎಂದು ಪರಿಗಣಿಸುತ್ತಾರೆ. (ಈಗ ಸುಮಾರು ಐವತ್ತು ವರ್ಷಗಳಿಂದ ಈ ವಿಚಾರದಲ್ಲಿ ತುಂಬಾ ಬದಲಾವಣೆಯಾಗಿದೆ. ಮೊದಲಿನ ಮನಃಸ್ಥಿತಿಯಿಲ್ಲ.) ಹೆಣ್ಣು–ಗಂಡೊಂದು ಪ್ರಕೃತಿ ನಿಯಮಕ್ಕೆ ಅನುಗುಣವಾಗಿ ದೈಹಿಕವಾಗಿ ಸೇರುವ ಒಂದು ಸಾಮಾನ್ಯ ಸಂಗತಿಯನ್ನು ಆತ್ಮದೊಂದಿಗೆ ನಡೆದ ವ್ಯವಹಾರವೆಂದು ಭಾವಿಸಿ ಬೊಬ್ಬಿಡುತ್ತಾರೆ ಎಂದು ಪಾಶ್ಚಾತ್ಯರು ನಮ್ಮನ್ನು ಕಂಡು ಮೂಗು ಮುರಿಯುತ್ತಾರೆ. ಇದರಲ್ಲಿ ಸತ್ಯ ಸಂಗತಿ ಇಲ್ಲದೇ ಇಲ್ಲ. ನಾವೀಗ ಅದನ್ನು ಮರುಪರಾಮರ್ಶೆಗೆ ಒಳಪಡಿಸಬೇಕಿದೆ.

ನಮ್ಮ ದೇಶದಲ್ಲಿ ಯಾರನ್ನು ಕೇಳಿದರೂ ಅವರ ಬಾಯಿಂದ ದೇವರು, ಧರ್ಮ, ಭಕ್ತಿ, ಕರ್ಮ, ಪರಮಾತ್ಮ, ಸತ್ಯ, ಅಹಿಂಸೆ–ಇಂಥಾ ಮಾತುಗಳೇ ಘಳಿಗೆಗೆ ಹತ್ತು ಸಲ ನುಗ್ಗಿ ಬರುತ್ತವೆ. ಎಲ್ಲರೂ ಭಗವದ್ಗೀತೆಯನ್ನು ಹೇಳುವವರೇ. ಆದರೆ ನಮ್ಮ ಬಾಳನ್ನು



ನಮ್ಮ ದೇಶದಲ್ಲಿ ಯಾರನ್ನು ಕೇಳಿದರೂ ಅವರ ಬಾಯಿಂದ ದೇವರು, ಧರ್ಮ, ಭಕ್ತಿ, ಕರ್ಮ, ಪರಮಾತ್ಮ, ಸತ್ಯ, ಅಹಿಂಸೆ–ಇಂಥಾ ಮಾತುಗಳೇ ಘಳಿಗೆಗೆ ಹತ್ತು ಸಲ ನುಗ್ಗಿ ಬರುತ್ತವೆ. ಎಲ್ಲರೂ ಭಗವದ್ಗೀತೆಯನ್ನು ಹೇಳುವವರೇ. ಆದರೆ ನಮ್ಮ ಬಾಳನ್ನು ನೋಡಿದರೆ ಮಾತ್ರ ಆ ಭಾರೀ ಮಾತುಗಳ ಅರ್ಥವೇನೂ ರುಜುವಾತಿಗೆ ಬರುತ್ತಿಲ್ಲ ಎಂದು ಡಿವಿಜಿಯವರು ತಮ್ಮ 'ಬಾಳಿಗೊಂದು ನಂಬಿಕೆ' ಕೃತಿಯಲ್ಲಿ ಬಹಳ ಅರ್ಥವತ್ತಾಗಿ ಹೇಳಿದ್ದಾರೆ.

ನೋಡಿದರೆ ಮಾತ್ರ ಆ ಭಾರೀ ಮಾತುಗಳ ಅರ್ಥವೇನೂ ರುಜುವಾತಿಗೆ ಬರುತ್ತಿಲ್ಲ ಎಂದು ಡಿವಿಜಿಯವರು ತಮ್ಮ 'ಬಾಳಿಗೊಂದು ನಂಬಿಕೆ' ಕೃತಿಯಲ್ಲಿ ಬಹಳ ಅರ್ಥವತ್ತಾಗಿ ಹೇಳಿದ್ದಾರೆ. ಡಿವಿಜಿಯವರ ಮಾತನ್ನು ನಮ್ಮ ಜನತೆಯ ಮನಃಸ್ಥಿತಿಗೆ ಹೋಲಿಸಿದರೆ ಅದರ ಸತ್ಯ ಮತ್ತಷ್ಟು ಸ್ಫುಟವಾಗುತ್ತದೆ. ಇವು ನಮ್ಮ ಸಾಂಸ್ಕೃತಿಕ, ಸಾಮಾಜಿಕ, ಸ್ವಲ್ಪಮಟ್ಟಿಗೆ ಆಧ್ಯಾತ್ಮಿಕ ಮುಖಗಳ ಮನಃಸ್ಥಿತಿ.

ಇನ್ನು ರಾಜಕಾರಣಿಗಳ ವಿಚಾರಕ್ಕೆ ಬಂದರೆ ನಮ್ಮ ದೇಶವನ್ನು ಅವರಷ್ಟು ಅಧೋಗತಿಗೆ ತಳ್ಳಿದವರು ಮತ್ತೊಬ್ಬರು ಸಿಗುವುದಿಲ್ಲ. ದೇಶದ ಪ್ರಗತಿ ಕುರಿತು ಬೇರೆ ದೇಶದವರನ್ನು ನೋಡಿಯಾದರೂ ಕಲಿಯುತ್ತಾರೋ ಅದೂ ಇಲ್ಲ. ಒಬ್ಬರನ್ನೊಬ್ಬರು ಸದಾ ಬೈಯ್ಯುತ್ತಿರುವುದು, ವಿರೋಧ ಪಕ್ಷದವರನ್ನು ವೈರಿಗಳಂತೆ ಭಾವಿಸುವುದು, ಸತ್ಯವನ್ನೇ ಹೇಳಿದರೂ ಅದನ್ನು ಒಪ್ಪದಿರುವುದು, ಅಧಿಕಾರವೆಂದರೆ ಅದು ವೈಭೋಗದ ಸ್ಥಾನವೆಂದೂ, ಹಣ ಮಾಡುವುದಕ್ಕೇ ಇರುವ ಸ್ಥಾನವೆಂದೂ– ಹೀಗೆ ಒಂದೇ ಎರಡೇ ನೂರಾರು ಅಪಸವ್ಯಗಳು ಅವರ ಬಳಿ ಇವೆ. ಅಜ್ಞಾನ, ಮೌಢ್ಯ, ವಿವೇಕಶೂನ್ಯತೆ, ಸುಳ್ಳು ಢೋಂಗಿ, ದ್ರೋಹ, ಗೊಂದಲ, ಅಪಕ್ವತೆ, ವೈಚಾರಿಕ ದಾರಿದ್ರ್ಯ ಹೀಗೆ ಹೇಳುತ್ತಾ ಹೋದರೆ ಮುಗಿಯದಷ್ಟು ದೋಷಗಳು ಅವರಲ್ಲಿ ಇವೆ.

ಬಹುಪಾಲು ರಾಜಕಾರಣಿಗಳಿಗೆ ರಾಷ್ಟ್ರೀಯತೆ ಬಗ್ಗೆ, ದೇಶದ ಬಗ್ಗೆ, ಹಿಂದುತ್ವದ ಬಗ್ಗೆ ಕಿಂಚಿತ್ತೂ ಕಾಳಜಿ ಇಲ್ಲ. ತಾನು ಯಾಕೆ ಜನರಿಂದ ಆಯ್ಕೆಯಾಗಿದ್ದೇನೆ. ತನ್ನ ಕರ್ತವ್ಯವೇನು, ದೇಶಕ್ಕಾಗಿ ತಾನೇನು ಮಾಡಬೇಕು, ವೈರಿಗಳಿಂದ ದೇಶವನ್ನು ಹೇಗೆ ರಕ್ಷಿಸಬೇಕು, ಅಂತಃಶತ್ರುಗಳನ್ನು ಹೇಗೆ ಮಟ್ಟ ಹಾಕಬೇಕು, ಬಾಯ್ಬಡುಕರನ್ನು ಹೇಗೆ ನಿಯಂತ್ರಿಸಬೇಕು, ತಪ್ಪಿತಸ್ಥರನ್ನು ಹೇಗೆ ನಿರ್ದಯವಾಗಿ ಶಿಕ್ಷಿಸಬೇಕು, ಎಂಬುದರ ಯಾವ ಪ್ರಜ್ಞೆಯೂ ಅವರಿಗೆ ಇಲ್ಲ. ಕೇವಲ ಹಣಬಲ, ಭುಜಬಲಗಳ ಮೇಲೆ ಆಯ್ಕೆಯಾದವರು ನಮ್ಮ ದೇಶವನ್ನು ಆಳುತ್ತಿದ್ದಾರೆ. ದೇಶವನ್ನು ಆಳುವುದಕ್ಕೆ ಬೇಕಾಗುವ ಕನಿಷ್ಠ ಅರ್ಹತೆಯೂ ಇಲ್ಲದೆ ತಾವೇ ದೇಶದ ನಾಯಕರು ಎಂದು ಹೇಳಿಕೊಳ್ಳುವ ರಾಜಕಾರಣಿಗಳು ಇಂದು ನಮ್ಮ ದೇಶದಲ್ಲಿ ಲಕ್ಷ ಲಕ್ಷ ಸಂಖ್ಯೆಯಲ್ಲಿ ಇದ್ದಾರೆ. ದೇಶದ ಅಭ್ಯುದಯಕ್ಕೆ, ಪ್ರಗತಿಗೆ ಅಹರ್ನಿಶಿ ದುಡಿಯುವ, ನಾಯಕತ್ವಕ್ಕೆ ಅರ್ಹರೂ ಆಗಿರುವ, ನಾಯಕರೂ ಆಗಿರುವ ರಾಜಕಾರಣಿಗಳು ನಮ್ಮಲ್ಲಿ ಇದ್ದರೂ ಅವರ ಸಂಖ್ಯೆ ಮಾತ್ರ ತೀರಾ ವಿರಳ.

ಇದು ದೇಶವನ್ನು ಹಾಳುಗೆಡಹುವ ರಾಜಕಾರಣಿಗಳ ಒಂದು ಮುಖವಾದರೆ ದೇಶದ ದಿಕ್ಕು ತಪ್ಪಿಸಿ, ಅಮಾಯಕರನ್ನು ಯಾಮಾರಿಸುತ್ತಿರುವ ಇನ್ನೊಂದು ಮುಖವಿದೆ. ಅದೇ ವಿಕೃತ ಮನಸ್ಕ ವಿಕೃತ ಬುದ್ಧಿಜೀವಿಗಳದ್ದು. ಇವರ ಮುಖ ಸಾವಿರ ಸಾವಿರ. ರಕ್ತಬೀಜಾಸುರನಂತೆ ಒಂದು ಕಡೆ ಸತ್ತರೆ ಇನ್ನೊಂದು ಕಡೆ ಹುಟ್ಟಿಕೊಳ್ಳುವ ಮುಖ ಇವರದ್ದು. ಇವರಿಗೆ ಸಾವೇ ಇಲ್ಲ. ಇವರ ಕೋಲಾಹಲಕ್ಕೂ ಮಿತಿಯೇ ಇಲ್ಲ. ದೇಶವನ್ನು ಕ್ಷೋಭೆಗೊಳಿಸುವುದರಲ್ಲಿ, ಶಾಂತಿಯನ್ನು ಕದಡುವುದರಲ್ಲಿ ಇವರ ಪಾತ್ರ ಸದಾ ಮೇಲುಗೈ ಆಗಿರುತ್ತದೆ. ಸಮಾಜದ ಎಲ್ಲಾ ರಂಗದಲ್ಲೂ ಸೂಕ್ಷ್ಮಾತಿಸೂಕ್ಷ್ಮ ಆಯಕಟ್ಟಿನ ಜಾಗಗಳಲ್ಲಿ ವ್ಯಾಪಿಸಿರುವವರು ಇವರು. ತಾವು ಚಿಂತಕರು, ವಿಚಾರವಾದಿಗಳು ಎಂದು ಹೇಳಿಕೊಳ್ಳುತ್ತಾ ಹೊಸ ಹೊಸ ಅಸಂಬದ್ಧ ಪ್ರಣಾಳಿಗಳನ್ನು ಬಿತ್ತುವುದರಲ್ಲಿ ಇವರನ್ನು ಮೀರಿಸುವವರೇ ಇಲ್ಲ

ದುರಂತವೆಂದರೆ– ಇವರಿಗೆ ಯಾವುದೇ ಅರ್ಹತೆಯೂ, ಅಧ್ಯಯನವೂ, ತಪಸ್ಸೂ ಇಲ್ಲ. ನಮ್ಮ ದೇಶದ ಭವ್ಯ ಕಾವ್ಯೇತಿಹಾಸಗಳ–ಪುರಾಣಗಳ ಜ್ಞಾನವಾಗಲೀ, ನಮ್ಮ ಶಿಲ್ಪ, ಸಂಗೀತ, ನೃತ್ಯಗಳ ಬಗ್ಗೆ ಖಚಿತ ತಿಳಿವಳಿಕೆಯಾಗಲೀ, ನಮ್ಮ ಸಂಸ್ಕೃತಿಯ ಮೂಲವಾಹಿನಿಯ ಬಗೆಗಿನ ಭದ್ರಗ್ರಹಿಕೆಯಾಗಲೀ ಇವರಿಗೆ ಇಲ್ಲ. ಇವರಿಗಿರುವ ಅರ್ಹತೆಯೆಂದರೆ ಹರುಕು–ಮುರುಕು ಇಂಗ್ಲಿಷ್ ಮತ್ತು ಸಂಸ್ಕೃತ ಜ್ಞಾನ, ಅರೆಬರೆಯಾಗಿ ಜೀರ್ಣಿಸಿಕೊಂಡ ಎರವಲು ಜ್ಞಾನ, ಎರವಲು ಸಿದ್ಧಾಂತ, ವಿದೇಶೀಮೂಲದ ಭಾರತ ಸಂಸ್ಕೃತಿಯ ದ್ವೇಷದ ಮಹಾಜಾಲ –ಇವಿಷ್ಟೇ ಇವರ ಅರ್ಹತೆಗಳು. ರಾಷ್ಟ್ರದ್ರೋಹ ಚಿಂತನೆ ಇವರ ಬಲು ದೊಡ್ಡ ಅಸ್ತ್ರ ಲಕ್ಷ್ಮಣನಿಗೂ ಸೀತೆಗೂ ಸಂಬಂಧವಿತ್ತು, ಮೈಸೂರಲ್ಲಿ ಮಹಿಷ ದಸರಾ ಮಾಡಬೇಕು, ರಾಮ ಸೇತುವೆ ಕಟ್ಟಿದ್ದಾನೆ ಅನ್ನುವುದಕ್ಕೆ ಅವನೇನು ಇಂಜಿನಿಯರ್ ಆಗಿದ್ದನೆ? ಭಗವದ್ಗೀತೆ ಕೋಮುವಾದಿಗಳ ಅಜೆಂಡಾ, ಹಿಂದೂ ದೇವತೆಗಳ ಕೈಯಲ್ಲಿರುವ ಆಯುಧಗಳು ಸಂಹಾರ ಸಂಸ್ಕೃತಿಯ ದ್ಯೋತಕ– ಎಂದೆಲ್ಲಾ ಹೇಳುತ್ತಾ, ಅಸಂಬದ್ಧವಾಗಿ ಮಾತನಾಡುತ್ತಾ ಕಾಲ ಕಳೆಯುತ್ತಾರೆ ಇವರು. ಯಾವ ಸಿದ್ಧಾಂತಗಳು ನಮ್ಮ ದೇಶಕ್ಕೆ ಹೊಂದುವುದಿಲ್ಲವೋ ಅಂತಹ ಸಿದ್ಧಾಂತಗಳನ್ನೇ ಆಗಾಗ ಎತ್ತಿ ಹಿಡಿಯುತ್ತಾ ಅದೇ ಸತ್ಯವೆಂದು ಪ್ರತಿಪಾದಿಸುತ್ತಾ ಕೋಲಾಹಲ ವೆಬ್ಬಿಸುತ್ತಾರೆ. ಜೊತೆಗೇನೇ ನಮ್ಮ ದೇಶದ ಸಂಸ್ಕೃತಿಯನ್ನೂ ಹೀಗಳೆಯುತ್ತಿರುತ್ತಾರೆ. ವೈದಿಕ ಪರಂಪರೆ, ಸನಾತನ ಧರ್ಮ, ಹಿಂದುತ್ವದಂತಹ ಶಬ್ದಗಳನ್ನು ಕೇಳಿದರೆ ಸಾಕು. ಮೈ ಉರಿದು ಬೀಳುತ್ತಾರೆ.

ಇವರು ಎಂತಹ ಅಪಾಯಕಾರಿಗಳೆಂದರೆ– ಭಾರತ ಮತ್ತು ಪಾಕಿಸ್ತಾನ ಬದ್ಧ ವೈರ ದೇಶಗಳೆಂದು ಗೊತ್ತಿದ್ದರೂ ಇವರು ಪಾಕಿಸ್ತಾನವನ್ನೇ ಬೆಂಬಲಸುತ್ತಿರುತ್ತಾರೆ. ಎಲ್ಲಾ ರಾಷ್ಟ್ರೀಯ ಹಿತಾಸಕ್ತಿಗಳನ್ನೂ ಇವರು 'ಕೋಮುವಾದ' ಅನ್ನುತ್ತಾರೆ. ಅಂತಾರಾಷ್ಟ್ರೀಯ ಸಮಸ್ಯೆಗಳು ಎದುರಾದಾಗ ಇವರು ವಿದೇಶಿ ಹಿತಾಸಕ್ತಿಯನ್ನೇ ಪ್ರೋತ್ಸಾಹಿಸುತ್ತಾರೆ. ದೇಶದ್ರೋಹಿ ಶಕ್ತಿಗಳನ್ನು ಉದಾರವಾದಿಗಳೆಂದೂ, ಹಿಂಸಾಚಾರಿಗಳನ್ನು 'ನೊಂದವರು' ಎಂದೂ ಕರೆಯುತ್ತಾರೆ. ಅಪರಾಧಿಗಳ ವಿರುದ್ಧ ಮಾತನಾಡಿದರೆ 'ಮಾನವ ಹಕ್ಕು ಉಲ್ಲಂಘನೆ' ಆಯಿತೆಂದು ಬೊಬ್ಬಿಡುತ್ತಾರೆ. ಮಾತೆತ್ತಿದರೆ 'ಸಮಾನತೆ' 'ಸಮಾನತೆ' ಎಂದು ಹುಯ್ಲೆಬ್ಬಿಸುತ್ತಾರೆ. ಸ್ಪಷ್ಟವಾದ ಜನಾದೇಶದಿಂದ ಆಯ್ಕೆಯಾದ ಪಕ್ಷವೊಂದು ಆಡಳಿತಕ್ಕೆ ಬಂದರೆ ಅದನ್ನೂ ಇವರು ಸಹಿಸುವುದಿಲ್ಲ.

ಉದಾಹರಣೆಗೆ– ಇಂದು ಭಾರತದ ಅನೇಕ ರಾಜ್ಯಗಳಲ್ಲಿ ಭಾರತೀಯ ಜನತಾ ಪಕ್ಷ ಆಡಳಿತ ನಡೆಸುತ್ತಿದೆ. ಅದು ಆಡಳಿತಕ್ಕೆ ಬಂದಿದ್ದೇ ಬಂದಿದ್ದು, ಇವರಿಗೆಲ್ಲಾ ಸಹಿಸುವುದಕ್ಕೇ ಆಗಲಿಲ್ಲ. ಬರೀ ವಿಕೃತ ಬುದ್ಧಿಜೀವಿಗಳಿಗಷ್ಟೇ ಅಲ್ಲ. ಭಾರತದ ಕೆಲವು ಜನಸಾಮಾನ್ಯನಿಗೂ ಸಹಿಸಲಾಗಲಿಲ್ಲ. ಕಾರಣ ಇಷ್ಟೇ! ಸುಮಾರು 65 ವರ್ಷಗಳ ಕಾಲ ಈ ದೇಶವನ್ನು ಆಳಿದ ನೆಹರೂ ಮೆಂಟಾಲಿಟಿ, ಗಾಂಧಿ ಮೆಂಟಾಲಿಟಿ, ಕೆಲವರ ಓಲೈಕೆಯ ಪಕ್ಷಗಳ ಆಳ್ವಿಕೆ– ಇವೇ ಮೊದಲಾದವುಗಳಿಂದ ಬ್ರೈನ್‌ವಾಷ್ ಆಗಿ ಹೋದ ಭಾರತೀಯ ಮನಸ್ಸಿಗೆ ಇಂದು ಸತ್ಯ ಯಾವುದು ಅಸತ್ಯ ಯಾವುದು ಎಂಬ ತಿಳಿವಳಿಕೆಯೇ ಇಲ್ಲವಾಗಿ ಹೋಗಿದೆ. ನಮ್ಮ ದೇಶದ ಸುದೈವಕ್ಕೆ ನರೇಂದ್ರ ಮೋದಿ ಈ ದೇಶದ ಆಡಳಿತ ಸೂತ್ರ ಹಿಡಿದ ಮೇಲೆ ಅಷ್ಟೋ ಇಷ್ಟೋ ನಮ್ಮವರಲ್ಲಿ ಹಿಂದೂ ಜಾಗೃತಿ ಮೂಡುತ್ತಿದೆ. ಯಾವಾಗ ಬಿಜೆಪಿ ರಾಷ್ಟ್ರ–ರಾಷ್ಟ್ರೀಯತೆ, ದೇಶ–ದೇಶಪ್ರೇಮ ಅಂತ ಹೇಳತೊಡಗಿತೋ, ದೇಶದ ಸ್ವಂತಿಕೆಯನ್ನು ಎತ್ತಿಹಿಡಿಯತೊಡಗಿತೋ ಆಗಲೇ ಇವರಿಗೆ ಈ ದೇಶದಲ್ಲಿ ಏನೋ ನಡೆಯಬಾರದ್ದು ನಡೆಯತೊಡಗಿದೆ, ಆಗಬಾರದ್ದು ಆಗಿಹೋಗುತ್ತಿದೆ ಎಂಬ ಆತಂಕ ಶುರುವಾಯಿತು. ಆಗಲೇ ಇವರು ಬಿಜೆಪಿಯನ್ನು ಬಾಯಿಗೆ ಬಂದಂತೆ ಬೈಯ್ಯತೊಡಗಿದರು. 'ಕೇಸರೀಕರಣ', 'ಕೋಮುವಾದ', 'ಹಿಂದೂವಾದ' ಎಂದೆಲ್ಲಾ ಆಕ್ಷೇಪಿಸತೊಡಗಿದರು. 'ಹಿಂದೂ' ಅನ್ನುವ ಶಬ್ದ ಯಾವಾಗ ಪದೇ ಪದೇ ಮೊಳಗತೊಡಗಿತೋ ಆಗಲೇ ಇವರಿಗೆ ಮೈಮೇಲೆ ಚೇಳು ಹರಿದಂತೆ ಭಾಸವಾಗತೊಡಗಿತು.

ಅಚ್ಚರಿಯ ಸಂಗತಿಯೆಂದರೆ ಹಿಂದೂವಾಗಿಯೇ ಹುಟ್ಟಿ, ಅದರಲ್ಲೇ ಜೀವನ ಸಾಗಿಸುತ್ತಿರುವ, ಈ ದೇಶದ ಮಾಜಿ ಪ್ರಧಾನಿಯೊಬ್ಬರು 'ಭಾರತೀಯ ಜನತಾ ಪಕ್ಷದವರು ಈ ದೇಶವನ್ನು 'ಹಿಂದೂರಾಷ್ಟ್ರವನ್ನಾಗಿ ಮಾಡಲು ಹೊರಟಿದ್ದಾರೆ ಎಂದು ಅತ್ಯಂತ ಬಾಲಿಶವಾದ, ಅಸಂಬದ್ಧವಾದ ಹೇಳಿಕೆಯನ್ನು ಕೊಟ್ಟುಬಿಟ್ಟರು. ಇದು ಕೇವಲ ಒಬ್ಬ ಮಾಜಿ ಪ್ರಧಾನಿಯ ಅನಿಸಿಕೆಯಷ್ಟೇ ಅಲ್ಲ. ಭಾರತೀಯ ಅನೇಕರ ಮನಃಸ್ಥಿತಿ ಹೀಗೆಯೇ ಇದೆ. ಹಾಗಾದರೆ 'ಹಿಂದೂ', 'ಹಿಂದುತ್ವ', ಅಂದರೆ ಏನು?

ಸಾವಿರಾರು ವರ್ಷಗಳ ಹಿಂದೆ ಸಿಂಧೂ ನದಿಯ ದಡದಲ್ಲಿ ಅಥವಾ ನದಿಯ ಆಚೆ ವಾಸ ಮಾಡುವವರನ್ನು 'ಹಿಂದೂ'ಗಳು ಎಂದು ಕರೆಯುತ್ತಿದ್ದರು. ಬ್ರಿಟಿಷರಿಗೆ, ಕ್ರೈಸ್ತ ಮಿಷನರಿಗಳಿಗೆ 'ಸಿಂಧೂ' ಶಬ್ದ ಉಚ್ಚಾರಣೆ ಕಷ್ಟವಾಗಿ ಅವರ ಬಾಯಲ್ಲಿ ಅದೇ ಶಬ್ದ ಅಪಭ್ರಂಶವಾಗಿ 'ಹಿಂದೂ' ಎಂದಾಯಿತು. ಅದೇ ಇಂದೂ ಕೂಡಾ ಉಚ್ಚರಿಸಲ್ಪಡುತ್ತದೆ. ಭಾರತವನ್ನು ಈಗಲೂ ಕೂಡಾ 'ಹಿಂದೂಸ್ಥಾನ್' ಎಂದು ಕರೆಯುವುದು ರೂಢಿಯಲ್ಲಿದೆ. ಹಿಂದೂ ಸಂಸ್ಕೃತಿಗೆ, ಹಿಂದೂ ಧರ್ಮಕ್ಕೆ ಬಹು ದೊಡ್ಡ ಇತಿಹಾಸವಿದೆ. ಅದಕ್ಕೆ ತನ್ನದೇ ಆದ ವೈಶಿಷ್ಟ್ಯವಿದೆ; ಪರಂಪರೆಯಿದೆ. ಅದರ ಅಂತಃಸತ್ವ ಇತರರಿಗೆ ಅಷ್ಟು ಸುಲಭದಲ್ಲಿ ಎಟುಕುವಂಥಾದ್ದಲ್ಲ. ನಮ್ಮ ದೇಶದಲ್ಲೇ ಇದ್ದುಕೊಂಡು ನಮ್ಮ ದೇಶವನ್ನೇ ನಿಂದಿಸುವುದು, 'ಹಿಂದೂ'ಗಳನ್ನೂ 'ಹಿಂದೂತ್ವ'ವನ್ನು ದ್ವೇಷಿಸುವುದು ಒಂದು ಬಗೆಯ ಮನೋರೋಗ ಅಲ್ಲದೆ ಇನ್ನೇನೂ ಅಲ್ಲ. ಅದು ಅವರ ಮನಸ್ಸಿಗೆ ತಗುಲಿದ, ಶಾಶ್ವತವಾಗಿ ನೆಲೆಸಿದ, ಗುಣಪಡಿಸಲಾಗದ ಒಂದು ಮನೋವ್ಯಾಧಿ ಎಂದೇ ಹೇಳಬೇಕಾಗುತ್ತದೆ. ಇತ್ತೀಚೆಗೆ ಕಾಂಗ್ರೆಸ್ ನಾಯಕರೊಬ್ಬರು ಹೇಳಿದ 'ಹಿಂದೂ' ಅನ್ನುವ ಶಬ್ದದಲ್ಲಿ ಯಾವ ಅಶ್ಲೀಲವೂ ಇಲ್ಲ.

ಮೈಸೂರಲ್ಲಿ ವಿನೂತನ ರೀತಿ ಮಾಜಿ ಸಿಎಂ ಕುಮಾರಸ್ವಾಮಿ ಹುಟ್ಟುಹಬ್ಬ ಆಚರಣೆ









ಮೈಸೂರು, ಡಿ.16(ಆರ್‌ಕೆ)– ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಅವರ ಜನ್ಮ ದಿನವನ್ನು ಮೈಸೂರಿನಲ್ಲಿ ಜೆಡಿಎಸ್ ಕಾರ್ಯಕರ್ತರು, ಅಭಿಮಾನಿಗಳು ವಿವಿಧ ಸಮಾಜಮುಖಿ ಕಾರ್ಯಗಳ ಮೂಲಕ ಆಚರಿಸಿದರು.

ನಗರ ಪಾಲಿಕೆ ಸದಸ್ಯ ಕೆ.ವಿ. ಶ್ರೀಧರ್ ಅವರ ನೇತೃತ್ವದಲ್ಲಿ ಹೆಬ್ಬಾಳಿನಿಂದ ಬೈಕ್ ರ್‍ಯಾಲಿ ಮೂಲಕ ನಗರದ ಹಳ್ಳದಕೇರಿಯಲ್ಲಿರುವ ಕಾಲ ಭೈರವೇಶ್ವರ ಸ್ವಾಮಿ ದೇವಸ್ಥಾನಕ್ಕೆ ತೆರಳಿ ಕುಮಾರಸ್ವಾಮಿ ಅವರ ಹೆಸರಿನಲ್ಲಿ ವಿಶೇಷ ಪೂಜೆ ಸಲ್ಲಿಸಿ, ನಂತರ ವಿಜಯನಗರದ ರೈಲ್ವೆ ಲೇಔಟ್‌ನ ಮೈದಾನದಲ್ಲಿ ಕುಮಾರಸ್ವಾಮಿ ಅವರ ಬೃಹತ್ ಭಾವಚಿತ್ರ ಮತ್ತು ಅವರ ಹೊಸ ಚಿಂತನೆ ಪಂಚರತ್ನ ಯೋಜನೆಗಳನ್ನು ವಿಭಿನ್ನವಾಗಿ ಚಿತ್ರಿಸುವ ಮೂಲಕ ಜನರಿಗೆ ಅರಿವು ಮೂಡಿಸಿದರು. ಅಲ್ಲದೆ ಪಂಚರತ್ನ ಯೋಜನೆಯ ಮಹತ್ವ ಸಾರುವ ಪುಸ್ತಕ ಹಾಗೂ ಲಾಂಛನಗಳನ್ನು ಸಾರ್ವಜನಿಕರಿಗೆ ನೀಡುವ ಮೂಲಕ ಪ್ರಚಾರ ಮಾಡಲಾಯಿತು. ಮಕ್ಕಳಿಂದಲೇ ಬೃಹತ್ ಚಿತ್ರದ ಅನಾವರಣಗೊಳಿಸಿ, ಕೇಕ್ ಕತ್ತರಿಸಿ, ಸಿಹಿ ಹಂಚಿದರು.

ನಂತರ ಮಾತನಾಡಿದ ಕೆ.ವಿ.ಶ್ರೀಧರ್, ಅಭಿವೃದ್ಧಿಯ ಹರಿಕಾರ ಮಾಜಿ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ಅವರ ಹುಟ್ಟುಹಬ್ಬವನ್ನು ಪಂಚರತ್ನ ಯೋಜನೆಯ ಮನದಲ್ಲಿಟ್ಟು, ಜನರಿಗೆ ಆ ಯೋಜನೆಯ ಉಪಯೋಗವನ್ನು ತಿಳಿಸುವ ವಿನೂತನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ, ಕುಮಾರಣ್ಣ ಹಾಗೂ ಪಂಚರತ್ನ ಯೋಜನೆಯ ಬೃಹತ್ ಭಾವಚಿತ್ರವನ್ನು ನೆಲದಲ್ಲಿ ಬಿಡಿಸುವ ಮೂಲಕ ಜನರಲ್ಲಿ ಅರಿವು ಮೂಡಿಸುವ ಸಲುವಾಗಿ ಕಾರ್ಯಕ್ರಮವನ್ನು ಜನರ ನಡುವೆ ಜನರೊಟ್ಟಿಗೆ ವಿಭಿನ್ನವಾಗಿ ಆಚರಿಸಿದ್ದೇವೆ ಎಂದರು.

ಇದೇ ಸಂದರ್ಭದಲ್ಲಿ ನಗರಪಾಲಿಕೆ ಸದಸ್ಯೆ ಪ್ರೇಮಾ ಶಂಕರೇಗೌಡ, ಮಾಜಿ ಸದಸ್ಯ ಎಂ.ಶಿವಣ್ಣ, ಮುಖಂಡರಾದ ಮಲ್ಲಿಕಾರ್ಜುನ, ಕುಮಾರಸ್ವಾಮಿ, ರಮೇಶ್, ಅರ್ಜುನ್, ಪ್ರಮೋದ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಜೆಡಿಎಸ್ ಕಚೇರಿ : ನಗರದ ಶೇಷಾದ್ರಿ ಅಯ್ಯರ್ ರಸ್ತೆಯಲ್ಲಿರುವ ಜೆಡಿಎಸ್ ಕಚೇರಿಯಲ್ಲಿ ಜೆಡಿಎಸ್ ನಗರಾಧ್ಯಕ್ಷ ಕೆಟಿ. ಚಲುವೇಗೌಡ, ಮುಖಂಡರಾದ ಎಚ್.ಕೆ. ರಾಮು ಹಾಗೂ ಕಾರ್ಯಕರ್ತರು, ಅಭಿಮಾನಿಗಳು, ಮುಖಂಡರು ಕುಮಾರಸ್ವಾಮಿ ಅವರ ಹುಟ್ಟುಹಬ್ಬವನ್ನು ಕೇಕ್ ಕತ್ತರಿಸುವ ಮೂಲಕ ಆಚರಿಸಿದರೆ, ಕಚೇರಿ ಮುಂಭಾಗ ಕುಮಾರ್‌ಸ್ವಾಮಿ ಅವರ ಬೃಹತ್ ಕಟೌಟ್‌ಗೆ ಪುಷ್ಪವೃಷ್ಟಿ ಸುರಿಸಿದರು. ಈ ವೇಳೆ ಕೆ.ಆರ್.ಮಿಲ್ ಶಿವಣ್ಣ ಮಧುಸೂದನ್, ಬೋರೇಗೌಡ, ರಮ್ಯ, ಪುಟ್ಟಸ್ವಾಮಿಗೌಡ, ಅನೀತ ಸೇರಿದಂತೆ ಮತ್ತಿರರು ಇದ್ದರು.

ಚಾಮರಾಜ ಕ್ಷೇತ್ರದ ಜೆಡಿಎಸ್ ಅಧ್ಯಕ್ಷ ಮಂಜುನಾಥ್ ನೇತೃತ್ವದಲ್ಲಿ ತಿಲಕ್ ನಗರದಲ್ಲಿರುವ ಅಂಧ ಮಕ್ಕಳ ಹಾಗೂ ಪುಟ್ಟವೀರಮ್ಮ ಶಾಲೆಯಲ್ಲಿ ಮಕ್ಕಳಿಗೆ ಹಣ್ಣು–ಹಂಪಲು ವಿತರಿಸುವ ಮೂಲಕ ಅರ್ಥ ಪೂರ್ಣವಾಗಿ ಹುಟ್ಟುಹಬ್ಬ ಆಚರಿಸಿದರು. ಈ ವೇಳೆ ಜೆಡಿಎಸ್ ಮುಖಂಡರಾದ ಫಾಲ್ಕನ್ ಬೋರೇಗೌಡ, ಪ್ರಧಾನ ಕಾರ್ಯದರ್ಶಿ ಮಸ್ತಾ ಅಹಮ್ಮದ್, ಗಾಣಿಗ ಸಂಘದ ಉಮೇಶ್, ನಜರ್ ಬಾದ್ ಮಂಜು ಸೇರಿದಂತೆ ಮತ್ತಿತರರು ಇದ್ದರು.

ಹೆಚ್.ಡಿ.ಕುಮಾರಸ್ವಾಮಿ ಅಭಿಮಾನಿಗಳ ಬಳಗದ ವತಿಯಿಂದ ಸಿದ್ದಲಿಂಗಪುರ ಜಿಪಂ ಉಸ್ತುವಾರಿ ಮಂಜುಗೌಡರ ನೇತೃತ್ವದಲ್ಲಿ ನಗರದ ಮದರ್ ತೆರೇಸಾ ವೃದ್ಧಾಶ್ರಮದಲ್ಲಿ ಹಣ್ಣು ಹಂಪಲು ಹಂಚುವ ಮೂಲಕ ಆಚರಿಸಲಾಯಿತು. ಈ ಸಂದರ್ಭದಲ್ಲಿ ಅಧ್ಯಕ್ಷ ಬೆಲವತ್ತ ರಾಮಕೃಷ್ಣ ವಕೀಲರುಗಳಾದ ಹುಯಿಲು ಜವರೇಗೌಡ ಎನ್.ಲೋಹಿತ್, ಗೋಪಾಲೇ ಗೌಡ, ಸಾಲೇಕೊಪ್ಪಲು ಕುಮಾರ್, ಚೆಲುವರಾಜು, ಕೆ.ಆರ್.ಮಿಲ್ ಕಾಲೋನಿ ಆನಂದ್, ಸತೀಶ್, ಸಿದ್ದರಾಜು ಪಿಎಸಿಸಿಎಸ್ ಅಧ್ಯಕ್ಷ ನಾರಾಯಣಪ್ಪ, ಗ್ರಾಪಂ ಸದಸ್ಯರಾದ ಕೆ ಜೆ ಮಾದೇಶ್, ಹಳೇ ಕೆಸರೆ ಪರಮೇಶ, ಬೆಲವತ್ತ ಗ್ರಾಮದ ಮುಖಂಡರುಗಳಾದ ಸೀತಾರಾಮಯ್ಯ, ವಿಶ್ವನಾಥ್, ಪೇಪರ್ ಕುಮಾರ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಪ್ರವಾಸಿಗರಿಗೆ ನೆರವಾಗಲು ಬಿಐಟಿಯ ರಜಾ ಉತ್ಸವ



ಮೈಸೂರು, ಡಿ.16– ಪ್ರವಾಸಿ ಸೇವೆಗಳಿಗೆ ಹೆಸರುವಾಸಿಯಾದ ಮೈಸೂರಿನ ಪ್ರತಿಷ್ಠಿತ ಭಾರತ್ ಇಂಟರ್ ನ್ಯಾಷನಲ್ ಟ್ರಾವೆಲ್ಸ್(ಬಿಐಟಿ) ಸಂಸ್ಥೆಯಲ್ಲಿ ಮೂರು ದಿನಗಳ 'ಹಾಲಿಡೆ ಕಾರ್ನಿವಲ್ (ರಜಾ ಉತ್ಸವ)' ಆಯೋಜಿಸಲಾಗಿದೆ

BIT The Travel People Since 1990

ಹಾಲಿಡೆ ಕಾರ್ನಿವಲ್ ಇಂದಿನಿಂದ ಆರಂಭವಾಗಿದ್ದು, ಡಿ.18ರವರೆಗೆ ಬೆಳಗ್ಗೆ 10.30ರಿಂದ ಸಂಜೆ 6.30ರವರೆಗೆ ಅತ್ಯುತ್ತಮ ದೇಶೀಯ ಹಾಗೂ ವಿದೇಶಿ ಪ್ರವಾಸಗಳ ಬಗ್ಗೆ ಮಾಹಿತಿ ಪಡೆಯಬಹುದು. ಪ್ರವಾಸ ಆಯೋಜನೆ ಬಗ್ಗೆ ಅನುಭವಿಗಳು, ಪ್ರತಿಷ್ಠಿತ ಗ್ಲೋಬಸ್ ಹಾಗು ಕಾಸ್ಮೋಸ್ ಸಂಸ್ಥೆ ಸೇರಿದಂತೆ ಹಲವು ಸಂಸ್ಥೆಗಳ ಟೂರ್ ಮ್ಯಾನೇಜರ್‌ಗಳು, ಜನಾಕರ್ಷಣೆಯ ವೈಭವೋಪೇತ ಕಾರ್ಡೇಲಿಯಾ ಹಡಗಿನ ಮ್ಯಾನೇಜರ್‌ಗಳು ಇನ್ನಿತರ ಪರಿಣಿತರು ಸ್ಥಳದಲ್ಲೇ ಲಭ್ಯವಿದ್ದು, ಗ್ರಾಹಕರ ಪ್ರತಿಯೊಂದು ಪ್ರಶ್ನೆಗೂ ಸ್ಪಷ್ಟ ಉತ್ತರ ಒದಗಿಸುವ ಮೂಲಕ ಅತ್ಯುತ್ತಮ ಪ್ರವಾಸಕ್ಕೆ ಸಹಾಯ ಮಾಡಲಿದ್ದಾರೆ. ಮುಂಬರುವ ರಜಾ ದಿನಗಳನ್ನು ಗಮನದಲ್ಲಿಟ್ಟುಕೊಂಡು ಹಲವು ದೇಶ–ವಿದೇಶಗಳ ಪ್ರವಾಸ ಆಯೋಜಿದ್ದು, ಬಿಐಟಿ ಆಯೋಜಿತ ಪ್ರವಾಸಗಳಲ್ಲಿ ವಿಮಾನದ ಟಿಕೆಟ್ ಕಾಯ್ದಿರಿಸುವ ಸೌಲಭ್ಯವೂ ಇರಲಿದೆ.

ಸಂಸ್ಥೆಯು ಕಳೆದ ರಜಾ ದಿನಗಳಲ್ಲಿ ಆಯೋಜಿಸಿದ್ದ ಯೂರೋಪ್, ಸಿಂಗಾಪುರ, ದುಬೈ ಇನ್ನಿತರ ಪ್ರವಾಸಗಳಿಗೆ ಗ್ರಾಹಕರ ಸ್ಪಂದನೆ ಅತ್ಯುತ್ತಮವಾಗಿತ್ತು. ಕಳೆದ ಮೂರು ದಶಕಗಳಿಂದ ಗ್ರಾಹಕರ ಮನಸ್ಥಿತಿಗೆ ಅನುಗುಣವಾಗಿ ಸೇವೆ ಒದಗಿಸುತ್ತಿರುವುದರಿಂದ ಒಮ್ಮೆ ಸೇವೆ ಪಡೆದ ಗ್ರಾಹಕರು ಮತ್ತೆ ಮತ್ತೆ ಬರುತ್ತಿದ್ದಾರೆ. ಜೊತೆಗೆ ತಮ್ಮ ಪರಿಚಯದವರು ಹಾಗೂ ಸಂಬಂಧಿಗಳನ್ನು ಕರೆತರುತ್ತಿದ್ದಾರೆ. ಹಾಗಾಗಿ ಮುಂದಿನ ರಜಾದಿನಗಳಿಗಾಗಿ ಜೋಡಿಸಿರುವ ಪ್ರವಾಸಗಳಿಗೂ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ ಎಂದು ಸಂಸ್ಥೆಯ ಮುಖ್ಯಸ್ಥರಾದ ಮನೀಶ್ ಸಾಲಿಯಾನ ಸಂತಸ ವ್ಯಕ್ತಪಡಿಸಿದ್ದಾರೆ. ರಜಾ ದಿನಗಳಲ್ಲಿ ಅತ್ಯುತ್ತಮ ಪ್ರವಾಸ ಜೋಡಿಸಿಕೊಳ್ಳುವ ಬಗ್ಗೆ ಹೆಚ್ಚಿನ ಮಾಹಿತಿಗೆ ಸಂಸ್ಥೆಯ ವ್ಯವಸ್ಥಾಪಕರಾದ ಶ್ರೀನಿವಾಸ್(ಮೊ.9686667703) ಅವರನ್ನು ಸಂಪರ್ಕಿಸಬಹುದು ಎಂದು ತಿಳಿಸಿದ್ದಾರೆ.

ಮೈಸೂರು ಮಿತ್ರ
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಪಾಲಿಬೆಟ್ಟದಲ್ಲಿ ಕಾರು ಹತ್ತಿಸಿ ಮೀನು ವ್ಯಾಪಾರಿಯನ್ನು ಕೊಲೆ ಮಾಡಿದ್ದವನ ಬಂಧನ

ಘಟನೆ ನಂತರ ಚೆನ್ನೈನಲ್ಲಿ ತಲೆಮರೆಸಿಕೊಂಡಿದ್ದ ಆರೋಪಿ



ಕೊಲೆಗೆ ಬಳಸಲಾದ ಕಾರು, ಆರೋಪಿ ನೌಶದ್

ಸಿದ್ದಾಪುರ, ಡಿ.16– ಪಾಲಿಬೆಟ್ಟದ ಮೀನು ವ್ಯಾಪಾರಿಯ ಮೇಲೆ ಕಾರು ಹತ್ತಿಸಿ ಹತ್ಯೆ ಮಾಡಿದ್ದ ಆರೋಪಿಯನ್ನು ಸಿದ್ದಾಪುರ ಪೊಲೀಸರು ಚೆನ್ನೈನಲ್ಲಿ ಬಂಧಿಸಿದ್ದಾರೆ.

ಪಾಲಿಬೆಟ್ಟದ ನಿವಾಸಿ ನೌಶದ್ ಬಂಧಿತ ಆರೋಪಿ. ಈತ ಮೀನು ವ್ಯಾಪಾರಿ ಪಾಲಿಬೆಟ್ಟದ ನಿವಾಸಿ, ಚರ್ದು ಅವರ ಮಗ ಮಹಮ್ಮದ್ ತಾಹಿರ್ ಮೇಲೆ ಕಾರು ಹತ್ತಿಸಿ ಕೊಲೆ ಮಾಡಿದ್ದ. ಡಿ.10 ರಂದು ತಾಹಿರ್ ಪಾಲಿಬೆಟ್ಟದಲ್ಲಿ ಮೀನು ವ್ಯಾಪಾರ ಮುಗಿಸಿ, ನಡೆದುಕೊಂಡು ಮುಖ್ಯ ರಸ್ತೆಯಲ್ಲಿ ಹೋಗುತ್ತಿದ್ದಾಗ ಆಲ್ಟೋ ಕಾರಿನಲ್ಲಿ ಬಂದ ವ್ಯಕ್ತಿಯೋರ್ವ ಕಾರನ್ನು ತಾಹಿರ್ ಮೇಲೆ ಹತ್ತಿಸಿ ಪರಾರಿಯಾಗಿದ್ದ. ತಲೆಗೆ ಗಂಭೀರ ಸ್ವರೂಪದ ಗಾಯಗಳಾಗಿದ್ದ ತಾಹಿರ್‌ನನ್ನು ಪಾಲಿಬೆಟ್ಟ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿ, ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಆಸ್ಪತ್ರೆಗೆ ದಾಖಲು ಮಾಡಲಾಯಿತಾದರೂ ಚಿಕಿತ್ಸೆ ಫಲಕಾರಿಯಾಗದೆ ಸಾವನ್ನಪ್ಪಿದರು. ಆರೋಪಿಯು ಘಟನೆ ನಂತರ ಕಾರನ್ನು ಮೂರ್ನಾಡು ಬಳಿ ನಿಲ್ಲಿಸಿ ಪರಾರಿಯಾಗಿದ್ದ.

ಸಿದ್ದಾಪುರ ಪೊಲೀಸ್ ಠಾಣೆಯಲ್ಲಿ ಈ ಸಂಬಂಧ ಪ್ರಕರಣ ದಾಖಲಾಗಿತ್ತು. ಆರೋಪಿಯ ಪತ್ತೆಗಾಗಿ ಪೊಲೀಸ್ ವರಿಷ್ಠಾಧಿಕಾರಿ ಕ್ಯಾಪ್ಟನ್ ಅಯ್ಯಪ್ಪ ಪೊಲೀಸ್ ತಂಡವನ್ನು ರಚಿಸಿದ್ದರು. ಡಿವೈಎಸ್ಪಿ ಗಜೇಂದ್ರ ಪ್ರಸಾದ್ ಮಾರ್ಗದರ್ಶನದಲ್ಲಿ ಸರ್ಕಲ್ ಇನ್ಸ್‌ಪೆಕ್ಟರ್ ಶಿವಶಂಕರ್ ನೇತೃತ್ವದೊಂದಿಗೆ ಸಿದ್ದಾಪುರ ಠಾಣಾಧಿಕಾರಿ ಮೋಹನ್‌ರಾಜ್ ಹಾಗೂ ಸಿಬ್ಬಂದಿಗಳು ಚೆನ್ನೈನಲ್ಲಿ ತಲೆಮರೆಸಿಕೊಂಡಿದ್ದ ಆರೋಪಿಯನ್ನು ಪತ್ತೆ ಹಚ್ಚಿ ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಾರೆ.

ಹಳೆ ವೈಷಮ್ಯ ಘಟನೆಗೆ ಕಾರಣ: ಮೀನು ವ್ಯಾಪಾರಿ ತಾಹಿರ್ ಹಾಗೂ ಪಾಲಿಬೆಟ್ಟದ ನೌಶದ್ ನಡುವೆ ಹಳೇ ವೈಷಮ್ಯವಿದ್ದ ಕಾರಣ ತಾಹಿರ್ ಮೇಲೆ ಹತ್ತಿಸಿ ಕೊಲೆಗೆ ಯತ್ನಿಸಿದ್ದಾನೆ ಎಂದು ಆರೋಪಿಸಿ ಸಿದ್ದಾಪುರ ಠಾಣೆಗೆ ದೂರು ನೀಡಿದ ಹಿನ್ನೆಲೆಯಲ್ಲಿ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಿದ ಸಂದರ್ಭ ಮೂರ್ನಾಡು ಬಳಿ ಕಾರು ಪತ್ತೆಯಾಗಿತ್ತು. ಕಾರನ್ನು ವಶಪಡಿಸಿಕೊಂಡು ತನಿಖೆ ಮುಂದುವರಿಸಿದ ಪೊಲೀಸರು ಆರೋಪಿಯನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಸ್ವಾಯತ್ತ ಕೊಡವ ಲ್ಯಾಂಡ್‌ಗೆ ಬೇಡಿಕೆ

ಸುಪ್ರೀಂಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಲು ಕೇಂದ್ರದ ಮಾಜಿ ಸಚಿವ ಸುಬ್ರಮಣಿಯನ್ ಸ್ವಾಮಿಗೆ ಸಿಎನ್‌ಸಿ ಮನವಿ



ಮಡಿಕೇರಿ, ಡಿ.16– ಕೊಡವ ನ್ಯಾಷನಲ್ ಕೌನ್ಸಿಲ್ ನಿಯೋಗ ಕೇಂದ್ರದ ಮಾಜಿ ಸಚಿವ ಹಾಗೂ ಖ್ಯಾತ ಅರ್ಥ ಶಾಸ್ತ್ರಜ್ಞ ಡಾ.ಸುಬ್ರಮಣಿಯನ್ ಸ್ವಾಮಿ ಅವರನ್ನು ಭೇಟಿಯಾಗಿ ಸ್ವಾಯತ್ತ ಕೊಡವ ಲ್ಯಾಂಡ್ ಬೇಡಿಕೆಯ ಕುರಿತು ಚರ್ಚಿಸಿತು.

ರೇವ ಯೂನಿವರ್ಸಿಟಿ– ಬ್ಯುಸಿನೆಸ್ ಸ್ಕೂಲ್‌ನಲ್ಲಿ ಡಾ.ಸ್ವಾಮಿ, ವಿಹೆಚ್‌ಎಸ್ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಜಗದೀಶ್ ಶೆಟ್ಟಿ ಹಾಗೂ ಸುಪ್ರೀಂ ಕೋರ್ಟ್ ವಕೀಲ ಸತ್ಯ ಸಬರ್ವಾಲ್ ಅವರನ್ನು ಭೇಟಿಯಾದ ಸಿಎನ್‌ಸಿ ನಿಯೋಗ ಕೊಡವ ನ್ಯಾಷನಲ್ ಡೇಯಲ್ಲಿ ನೀಡಿದ ಭರವಸೆಯಂತೆ ಕೊಡವ ಲ್ಯಾಂಡ್ ಕುರಿತು ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸುವಂತೆ ಮನವಿ ಮಾಡಿತು. ನಂತರ ಮಾತನಾಡಿದ ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ, ನ್ಯಾಯಾಲಯದ ರಜೆ ಮುಗಿದ ನಂತರ ರಿಟ್ ಅರ್ಜಿಯನ್ನು ಸಲ್ಲಿಸುವ ಭರವಸೆ ದೊರೆತಿದೆ. ನಮ್ಮ ಬೇಡಿಕೆ ಈಡೇರುವ ಬಗ್ಗೆ ಸಂಪೂರ್ಣ ವಿಶ್ವಾಸವಿದ್ದು, ಡಾ.ಸ್ವಾಮಿ ಅವರನ್ನು ಮತ್ತೆ ಭೇಟಿಯಾಗಿ ನ್ಯಾಯಾಲಯದಲ್ಲಿ ಕೈಗೊಳ್ಳಬೇಕಾದ ಪ್ರಕ್ರಿಯೆ ಕುರಿತು ಗೌರವಯುತವಾಗಿ ಮನವಿ ಮಾಡಿಕೊಳ್ಳಲಾಗಿದೆ ಎಂದು ತಿಳಿಸಿದರು.

ಕೊಡವಲ್ಯಾಂಡ್ ಭೌಗೋಳಿಕ–ರಾಜಕೀಯ ಸ್ವಾಯತ್ತತೆಯನ್ನು ಸಾಧಿಸುವ ಗಂಭೀರತೆ ಮತ್ತು ಬದ್ಧತೆಯನ್ನು ಡಾ.ಸ್ವಾಮಿ ಪ್ರದರ್ಶಿಸಿದ್ದಾರೆ. ಸುಪ್ರೀಂ ಕೋರ್ಟ್‌ನಲ್ಲಿ ರಿಟ್ ಅರ್ಜಿಯನ್ನು ಸಂವಿಧಾನದ 32ನೇ ವಿಧಿಯಡಿಯಲ್ಲಿ ಸಲ್ಲಿಸುವ ಕೆಲಸ ಮಾಡುತ್ತಿದ್ದಾರೆ. ಅದಕ್ಕೂ ಮೊದಲು ಕೇಂದ್ರ ಸರ್ಕಾರ ಮತ್ತು 'ಜಿಒಕೆ'ಗೆ ವಿವರವಾದ ಮನವಿ ಸಲ್ಲಿಸಲಿದ್ದಾರೆ ಎಂದರು.

ಸಿಎನ್‌ಸಿ ಪ್ರಮುಖರಾದ ಕಲಿಯಂಡ ಮೀನಾ ಪ್ರಕಾಶ್, ಲೆಫ್ಟಿನೆಂಟ್ ಕರ್ನಲ್ ಪಾರ್ವತಿ, ಮುಕ್ಕಾಟೀರ ಶಾಂತಿ, ಕಲಿಯಂಡ ಪ್ರಕಾಶ್, ಅಲ್ಮಂಡ ಭೀಮಯ್ಯ, ವಾಟೇರಿರ ಪೂವಣ್ಣ, ಪಾಲಂದೀರ ಜೋಯಪ್ಪ, ಬೊಳ್ಳಾರಪಂಡ ಮಾಚಯ್ಯ ಮತ್ತಿತರರು ನಿಯೋಗದಲ್ಲಿದ್ದರು.

ಸಂರಕ್ಷಣಾ ಕಾಯ್ದೆ ಜಾರಿಗೆ ಆಗ್ರಹಿಸಿ ವಕೀಲರ ಮೆರವಣಿಗೆ



ವಿರಾಜಪೇಟೆ, ಡಿ.16– ರಾಜ್ಯದಲ್ಲಿ ಇತ್ತೀಚೆಗೆ ವಕೀಲರ ಮೇಲೆ ಹಲ್ಲೆ ನಡೆಸುವ ಪ್ರಕರಣಗಳು ಹೆಚ್ಚಾಗುತ್ತಿರುವುದರಿಂದ ವಕೀಲರಿಗೆ ಸಂರಕ್ಷಣಾ ಕಾಯ್ದೆಯನ್ನು ವಿಧಾನ ಮಂಡಲದ ಅಧಿವೇಶನದಲ್ಲಿ ಅಂಗೀಕರಿಸುವಂತೆ ಒತ್ತಾಯಿಸಿ ವಿರಾಜಪೇಟೆ ವಕೀಲರ ಸಂಘದ ವತಿಯಿಂದ ವಕೀಲರುಗಳು ನ್ಯಾಯಾಲಯದಿಂದ ತಾಲೂಕು ಕಛೇರಿವರೆಗೆ ಮೆರವಣಿಗೆ ನಡೆಸಿ ತಹಶೀಲ್ದಾರ್ ಅರ್ಚನಾ ಭಟ್ ಅವರಿಗೆ ಮನವಿ ಸಲ್ಲಿಸಿದರು.

ಈ ವೇಳೆ ವಕೀಲರ ಸಂಘದ ಅಧ್ಯಕ್ಷ ಐ.ಆರ್.ಪ್ರಮೋದ್ ಮಾತನಾಡಿ, ವಕೀಲರ ಸಂರಕ್ಷಣಾ ಕಾಯ್ದೆಯನ್ನು ಜಾರಿಗೊಳಿಸುವಂತೆ ವಿರಾಜಪೇಟೆ ಶಾಸಕ ಕೆ.ಜಿ.ಬೋಪಯ್ಯ ಹಾಗೂ ವಿಧಾನ ಪರಿಷತ್ ಸದಸ್ಯ ಸುಜಾ ಕುಶಾಲಪ್ಪ ಅವರಿಗೂ ಮನವಿ ಸಲ್ಲಿಸಲಾಗಿದೆ ಎಂದರು. ಈ ಸಂದರ್ಭ ವಕೀಲರ ಸಂಘದ ಉಪಾಧ್ಯಕ್ಷ ಬಿ.ಎನ್.ಸುಬ್ಬಯ್ಯ, ಗೌ;ಕಾರ್ಯದರ್ಶಿ ಎಮ್.ಕೆ.ದಿನೇಶ್, ಜಂಟಿ ಕಾರ್ಯದರ್ಶಿ ವಿ.ಎಸ್.ಪ್ರೀತಮ್, ಖಜಾಂಚಿ ವಿ.ಜಿ.ರಾಕೇಶ್, ಅನುಪಮ ಕಿಶೋರ್, ಪ್ರದ್ಯುಮ್ನ ಸೇರಿದಂತೆ ಹಿರಿಯ ಕಿರಿಯ ವಕೀಲರುಗಳು ಭಾಗವಹಿಸಿದ್ದರು.

ಪ್ರಕರಣಗಳ ವಿಚಾರಣೆ ಮುಂದೂಡಿಕೆ

ಮಡಿಕೇರಿ, ಡಿ.16– ಡಿ.19 ರಿಂದ 31 ರವರೆಗೆ ಸಿವಿಲ್ ನ್ಯಾಯಾಲಯಗಳಿಗೆ ರಜೆ ಇರುವುದರಿಂದ ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ಡಿ.19 ರಿಂದ 31 ರವರೆಗೆ ನಡೆಯುವ ಪ್ರಕರಣಗಳನ್ನು ಮುಂದೂಡುವಂತೆ ಮಡಿಕೇರಿ ವಕೀಲರ ಸಂಘದ ಅಧ್ಯಕ್ಷರು ಮನವಿ ಮಾಡಿದ್ದಾರೆ.

ಈ ಹಿನ್ನೆಲೆ ಜಿಲ್ಲಾಧಿಕಾರಿಯವರ ನ್ಯಾಯಾಲಯದಲ್ಲಿ ಡಿಸೆಂಬರ್, 19 ರಿಂದ 31 ರವರೆಗೆ ನಡೆಯುವ ಪ್ರಕರಣಗಳನ್ನು ಮುಂದೂಡಲಾಗಿದೆ ಎಂದು ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ ಅವರು ತಿಳಿಸಿದ್ದಾರೆ.

ಅಕ್ಕವ್ವ ನಿಧನ



ನಾಪೋಕ್ಲು, ಡಿ.16– ಸ್ಥಳೀಯ ಗ್ರಾಮದ ದಿವಂಗತ ಕೇಲೇಟ್ಟಿರ ಮಂದಯ್ಯನವರ ಧರ್ಮಪತ್ನಿ ಅಕ್ಕವ್ವ (91) ಅವರು ಗುರುವಾರ ನಿಧನರಾಗಿದ್ದಾರೆ. ಮೃತರ ಅಂತ್ಯಕ್ರಿಯೆ ಶುಕ್ರವಾರ ಸ್ವಗ್ರಾಮದಲ್ಲಿ ನೆರವೇರಿತು. ದಿವಂಗತರು ಮೂವರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ಕುಶಾಲನಗರದಲ್ಲಿ ಸಾಕುನಾಯಿಗಳ ಮೇಲೆ ಗುಂಡು

ಒಂದು ನಾಯಿ ಸಾವು, ಮತ್ತೊಂದಕ್ಕೆ ಗಂಭೀರ ಗಾಯ

ಕುಶಾಲನಗರ, ಡಿ.16– ಪಟ್ಟಣದ ಬಸವೇಶ್ವರ ಬಡಾವಣೆಯಲ್ಲಿ ವಿಕೃತ ಮನಸ್ಸಿನ ವ್ಯಕ್ತಿಯೊಬ್ಬ ಗುಂಡು ಹಾರಿಸಿದ ಪರಿಣಾಮ ಸಾಕು ನಾಯಿಯೊಂದು ಮೃತಪಟ್ಟಿದ್ದು, ಮತ್ತೊಂದು ಶ್ವಾನಕ್ಕೆ ಗಂಭೀರ ಸ್ವರೂಪದ ಗಾಯವಾಗಿರುವ ಘಟನೆ ಶುಕ್ರವಾರ ನಡೆದಿದೆ. ಬಡಾವಣೆಯಲ್ಲಿ ವ್ಯಕ್ತಿಯೊಬ್ಬ ಆಟವಾಡುತ್ತಿದ್ದ ನಾಯಿಗಳಿಗೆ ಗುಂಡು ಹಾರಿಸಿದ್ದು, ನಾಯಿಯೊಂದು ವಿಲವಿಲ ಒದ್ದಾಡಿ ಪ್ರಾಣಬಿಟ್ಟಿದೆ. ಗಂಭೀರ ಸ್ಥಿತಿಯಲ್ಲಿದ್ದ ನಾಯಿಯನ್ನು ಚಿಕಿತ್ಸೆಗೆ ರವಾನಿಸಿದ ನಿವಾಸಿಗಳು. ಅಮಾನವೀಯ ಘಟನೆಯನ್ನು ಖಂಡಿಸಿದ್ದಾರೆ. ಈ ಕುರಿತು ಪೊಲೀಸ್ ಠಾಣೆಯಲ್ಲಿ ಯಾವುದೇ ದೂರು ದಾಖಲಾಗಿಲ್ಲ.

ಸಿಎಸ್‌ಪಿ ಯುವ ಬಳಗದಿಂದ ಹಣ್ಣು ಹಂಪಲು ವಿತರಣೆ



ಪಾಂಡವಪುರ, ಡಿ.16– ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ಹುಟ್ಟುಹಬ್ಬದ ಅಂಗವಾಗಿ ಜಿಪಂ ಮಾಜಿ ಸದಸ್ಯ ಸಿ.ಅಶೋಕ್ ನೇತೃತ್ವದಲ್ಲಿ ಪಟ್ಟಣದ ಸಾರ್ವಜನಿಕ ಆಸ್ಪತ್ರೆ ಒಳರೋಗಿಗಳಿಗೆ ಸಿ.ಎಸ್. ಪುಟ್ಟರಾಜು ಯುವ ಬಗಳದಿಂದ ಹಣ್ಣು ಹಂಪಲು ವಿತರಿಸಲಾಯಿತು.

ಸಾರ್ವಜನಿಕ ಆಸ್ಪತ್ರೆಗೆ ತೆರಳಿದ ಅಭಿಮಾನಿಗಳು ಆಸ್ಪತ್ರೆಯ ನೂರಾರು ರೋಗಿಗಳಿಗೆ ಹಣ್ಣು ಹಂಪಲು ವಿತರಿಸುವ ಮೂಲಕ ನೆಚ್ಚಿನ ನಾಯಕರಿಗೆ ಶುಭ ಹಾರೈಸಿದರು.

ಜಿಪಂ ಮಾಜಿ ಸದಸ್ಯ ಸಿ.ಅಶೋಕ್ ಮಾತನಾಡಿ, ಮಾಜಿ ಮುಖ್ಯಮಂತ್ರಿ, ಸರಳ ಸಜ್ಜನಿಕೆ ವ್ಯಕ್ತಿತ್ವದ ನಮ್ಮ ನೆಚ್ಚಿನ ನಾಯಕರಾದ ಹೆಚ್.ಡಿ.ಕುಮಾರಸ್ವಾಮಿ ಅವರ ಹುಟ್ಟುಹಬ್ಬದ ಅಂಗವಾಗಿ ರೋಗಿಗಳಿಗೆ ಹಣ್ಣು ಹಂಪಲು ವಿತರಿಸಿದ್ದೇವೆ. ರಾಜ್ಯದ ಮುಖ್ಯಮಂತ್ರಿಗಳಾಗಿ ಜನಪರ, ರೈತಪರ, ಮಹಿಳೆಯರು, ಶೋಷಿತರು, ದೀನದಲಿತರ ಪರ ಕೆಲಸ ಮಾಡಿ ಜನ ಮೆಚ್ಚುಗೆ ಪಡೆದ ಕುಮಾರ ಸ್ವಾಮಿ ಅವರಿಗೆ ತಾಯಿ ಚಾಮುಂಡೇಶ್ವರಿ ಆಯಸ್ಸು ಆರೋಗ್ಯ ದಯಪಾಲಿಸಲಿ. ಮುಂದಿನ ಚುನಾವಣೆಯಲ್ಲಿ ರಾಜ್ಯದ ಜನತೆ ಜೆಡಿಎಸ್ ಪಕ್ಷಕ್ಕೆ ಸ್ಪಷ್ಟ ಬಹುಮತ ನೀಡಿ ರಾಜ್ಯದಲ್ಲಿ ಮತ್ತೊಮ್ಮೆ ಕುಮಾರಸ್ವಾಮಿ ಸರ್ಕಾರ ಅಧಿಕಾರಕ್ಕೆ ಬರಲಿ ಎಂದು ಹಾರೈಸಿದರು.

ಈ ವೇಳೆ ಸಿ.ಎಸ್.ಪುಟ್ಟರಾಜು ಅಭಿಮಾನಿ ಬಗಳದ ಮುಖಂಡರಾದ ಅಶೋಕ್, ರಾಮಚಂದ್ರು, ಟೌನ್ ಚಂದ್ರು, ಸಿ.ಡಿ.ಮಹದೇವು, ರವಿ, ತಾಪಂ ಮಾಜಿ ಸದಸ್ಯ ವಿ.ಎಸ್. ನಿಂಗೇಗೌಡ, ರವಿ, ಅರವಿಂದ, ಪುರಸಭೆ ಸದಸ್ಯ ಶಿವಕುಮಾರ್, ಪವನ್ ಸೇರಿದಂತೆ ಅಭಿಮಾನಿ ಬಳಗದ ಎಲ್ಲಾ ಸದಸ್ಯರಿದ್ದರು.

ರಾಮಚಂದ್ರು ನೇತೃತ್ವದಲ್ಲಿ ಹೆಚ್‌ಡಿಕೆ ಹುಟ್ಟುಹಬ್ಬ ಅದ್ಧೂರಿ ಆಚರಣೆ



ಮಂಡ್ಯ, ಡಿ.16– ಮಂಡ್ಯ ವಿಧಾನ ಸಭಾ ಕ್ಷೇತ್ರದ ಜೆಡಿಎಸ್ ಟಿಕೆಟ್ ಆಕಾಂಕ್ಷಿ ಹಾಗೂ ಮನ್‌ಮುಲ್ ಅಧ್ಯಕ್ಷ ಬಿ.ಆರ್. ರಾಮಚಂದ್ರು ನೇತೃತ್ವದಲ್ಲಿ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರ ಹುಟ್ಟುಹಬ್ಬವನ್ನು ವಿವಿಧ ಸೇವಾ ಕಾರ್ಯಗಳೊಂದಿಗೆ ಅರ್ಥಪೂರ್ಣವಾಗಿ ಆಚರಿಸಲಾಯಿತು.

ಬೆಳಗ್ಗೆ ನಗರದ ವಿವಿ ರಸ್ತೆಯಲ್ಲಿರುವ ಗಣಪತಿ ದೇವಾಲಯದಲ್ಲಿ ಜೆಡಿಎಸ್ ಕಾರ್ಯಕರ್ತರೊಂದಿಗೆ ವಿಶೇಷ ಪೂಜೆ ಸಲ್ಲಿಸಿದ ರಾಮಚಂದ್ರು, ಬಳಿಕ ಪ್ರೇರಣಾ ಟ್ರಸ್ಟ್‌ನ ವಿಶೇಷಚೇತನ ಮಕ್ಕಳೊಂದಿಗೆ ಕೇಕ್ ಕತ್ತರಿಸಿ ಮಾಜಿ ಸಿಎಂ ಕುಮಾರಸ್ವಾಮಿ ಅವರ ಹುಟ್ಟುಹಬ್ಬ ಆಚರಿಸಿದರು. ಅಲ್ಲದೇ ಮಕ್ಕಳಿಗೆ ಬೆಳಗಿನ ಉಪಾಹಾರ ವ್ಯವಸ್ಥೆ ಮಾಡಲಾಗಿತ್ತು. ನಗರದ ಮಿಮ್ಸ್ ಆಸ್ಪತ್ರೆಯಲ್ಲಿ ರೋಗಿಗಳಿಗೆ ಹಣ್ಣು ಹಂಪಲು ವಿತರಿಸಿದ ರಾಮಚಂದ್ರು, ಹೆರಿಗೆ ವಿಭಾಗದ ರೋಗಿಗಳು ಹಾಗೂ ಸಂಬಂಧಿಕರಿಗೆ ಊಟದ ವ್ಯವಸ್ಥೆ ಮಾಡಿದ್ದರು. ನೆಹರು ನಗರದ ಸರ್ಕಾರಿ ಶಾಲಾ ಮಕ್ಕಳಿಗೆ ಶ್ರೀಶಂಭು ಸೇವಾ ಟ್ರಸ್ಟ್ ವತಿಯಿಂದ ಉಚಿತ ಶಾಲಾ ಬ್ಯಾಗ್ ವಿತರಿಸಲಾಯಿತು.

ಸೇವಾ ಕಿರಣ ವೃದ್ಧಾಶ್ರಮದ ವೃದ್ಧರಿಗೆ ಬೆಡ್ ಶೀಟ್ ವಿತರಣೆ ಹಾಗೂ ಗ್ರೀನ್ ಪ್ಯಾಲೇಸ್ ಸಮುದಾಯ ಭವನದಲ್ಲಿ ಅದ್ಧೂರಿಯಾಗಿ ಕೇಕ್ ಕತ್ತರಿಸುವ ಮೂಲಕ ಹುಟ್ಟುಹಬ್ಬ ಆಚರಿಸಿದ ರಾಮಚಂದ್ರು, ಅಭಿಮಾನಿಗಳಿಗೆ, ಕಾರ್ಯಕರ್ತರಿಗೆ ಮಧ್ಯಾಹ್ನ ಬಾಡೂಟದ ವ್ಯವಸ್ಥೆ ಮಾಡಿದ್ದರು.

ಜೆಡಿಎಸ್ ಟಿಕೆಟ್ ಆಕಾಂಕ್ಷಿ ಬಿ.ಆರ್. ರಾಮಚಂದ್ರು ಮಾತನಾಡಿ, ಮುಂದಿನ ಚುನಾವಣೆಯಲ್ಲಿ ಜೆಡಿಎಸ್ ಅಭೂತಪೂರ್ವ ಗೆಲುವು ಸಾಧಿಸುವ ಮೂಲಕ ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಅವರು ಮತ್ತೊಮ್ಮೆ ಮುಖ್ಯಮಂತ್ರಿಯಾಗಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಈಗಾಗಲೇ ಘೋಷಿಸಿರುವಂತೆ ರೈತರು ಹಾಗೂ ರಾಜ್ಯದ ಜನರ ಅಭಿವೃದ್ಧಿಗೆ ಪಂಚರತ್ನ ಯೋಜನೆಗಳನ್ನು ಜಾರಿಗೊಳಿಸುವ ಮೂಲಕ ಜನಪರವಾಗಿ ಕೆಲಸ ಮಾಡಲಿದ್ದಾರೆ. ಆದ್ದರಿಂದ ನಾವೆಲ್ಲರೂ ಅವರ ಕೈಬಲ ಪಡಿಸಲು ಸಂಕಲ್ಪ ಮಾಡಬೇಕು ಎಂದರು.

ವಿಧಾನ ಪರಿಷತ್ ಮಾಜಿ ಸದಸ್ಯ ಕೆ.ಟಿ. ಶ್ರೀಕಂಠೇಗೌಡ, ನಗರಸಭೆ ಅಧ್ಯಕ್ಷ ಎಚ್.ಎಸ್. ಮಂಜು, ಜೆಡಿಎಸ್ ಜಿಲ್ಲಾಧ್ಯಕ್ಷ ಡಿ. ರಮೇಶ್, ಮನ್‌ಮುಲ್ ಉಪಾಧ್ಯಕ್ಷ ಹಾಗೂ ಜೆಡಿಎಸ್ ಜಿಲ್ಲಾ ವಕ್ತಾರ ಎಂ.ಎಸ್.ರಘುನಂದನ್, ಜೆಡಿಎಸ್ ಕಾರ್ಯಾಧ್ಯಕ್ಷ ಬೂದನೂರು ಸ್ವಾಮಿ, ಹನಕೆರೆ ಕಿರಣ್, ಕನ್ನಲಿ ವಿಜಯ್, ಕೆ.ಸಿ.ನಾಗಮ್ಮ, ನಗರಸಭೆ ಸದಸ್ಯರು ಹಾಗೂ ಜೆಡಿಎಸ್ ಕಾರ್ಯಕರ್ತರು ಭಾಗವಹಿಸಿದ್ದರು.

ರಸ್ತೆ ಅಭಿವೃದ್ಧಿ ಕಾಮಗಾರಿಗೆ ಭೂಮಿ ಪೂಜೆ



ಶ್ರೀರಂಗಪಟ್ಟಣ, ಡಿ.16– ತಾಲೂಕಿನ ಕೆ.ಶೆಟ್ಟಹಳ್ಳಿ ಗ್ರಾಪಂ ವ್ಯಾಪ್ತಿಯ ಗೌರಿಪುರದಲ್ಲಿ ಸಂಸದರ ನಿಧಿಯಿಂದ ಎಸ್ಸಿ, ಎಸ್ಟಿ ಸಮುದಾಯದ ಅಭಿವೃದ್ಧಿ ಯೋಜನೆಗೆ ನೀಡಿರುವ 9 ಲಕ್ಷ ರೂ. ವೆಚ್ಚದ ರಸ್ತೆ, ಚರಂಡಿ ಅಭಿವೃದ್ಧಿ ಕಾಮಗಾರಿಗೆ ಗ್ರಾಪಂ ಅಧ್ಯಕ್ಷ ಬೋರಪ್ಪ ಭೂಮಿಪೂಜೆ ನೆರವೇರಿಸಿದರು.

ಸಂಸದರ ನಿಧಿಯನ್ನು ವಿವಿಧ ಗ್ರಾಮಗಳಲ್ಲಿ ಅಗತ್ಯವಿರುವ ಸಮುದಾಯ ಭವನಗಳು, ದೇವಾಲಯಗಳ ಅಭಿವೃದ್ಧಿ ಕಾಮಗಾರಿಗಳಿಗೆ ಬಳಕೆ ಮಾಡಿಕೊಂಡು ಸಾಕಷ್ಟು ಅಭಿವೃದ್ಧಿಪಡಿಸಲಾಗುತ್ತಿದೆ. ಮುಂದಿನ ದಿನಗಳಲ್ಲಿ ಮತ್ತಷ್ಟು ಕಾಮಗಾರಿಗಳು ಕೈಗೊಳ್ಳಲಾಗುವುದು ಎಂದು ಯುವ ಮುಖಂಡ ದರ್ಶನ್ ಲಿಂಗರಾಜು ತಿಳಿಸಿದರು. ಈ ವೇಳೆ ಗ್ರಾಪಂ ಸದಸ್ಯರಾದ ಪ್ರಸಾದ್, ಅಪ್ಪಾಜಿ, ಜಗದೀಶ್, ಗ್ರಾಮದ ಯಜಮಾನ್ ಶ್ರೀಕಂಠಯ್ಯ, ಕೆ.ಬಿ. ಮಹೇಶ್, ಕುಬೇರಪ್ಪ, ಮುರುಳಿ ಸೇರಿದಂತೆ ಗ್ರಾಪಂ ಅಧಿಕಾರಿಗಳು ಹಾಗೂ ಸಿಬ್ಬಂದಿ ಹಾಜರಿದ್ದರು.

ಕಾಳಿಕಾಂಬ ದೇವಾಲಯದಲ್ಲೂ ಹುಟ್ಟುಹಬ್ಬ ಆಚರಣೆ



ಮಂಡ್ಯ, ಡಿ.16– ನಗರದ ಕಾಳಿಕಾಂಬ ದೇವಾಲಯದಲ್ಲಿ ಶಾಸಕ ಎಂ.ಶ್ರೀನಿವಾಸ್, ಯುವ ಮುಖಂಡ ಹೆಚ್.ಎನ್.ಯೋಗೇಶ್, ಜಿಲ್ಲಾ ಜೆಡಿಎಸ್ ವಕ್ತಾರ ಮುದ್ದನಘಟ್ಟ ಮಹಾಲಿಂಗೇಗೌಡ ಹಾಗೂ ಮನ್‌ಮುಲ್ ಉಪಾಧ್ಯಕ್ಷ ರಘುನಂದನ್ ನೇತೃತ್ವದಲ್ಲಿ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರ ಸ್ವಾಮಿ ಹುಟ್ಟುಹಬ್ಬ ಅಂಗವಾಗಿ ವಿಶೇಷ ಪೂಜೆ ಸಲ್ಲಿಸಿ ಸಿಹಿ ಹಂಚಲಾಯಿತು.

ಮುಖಂಡ ಹೆಚ್.ಎನ್.ಯೋಗೇಶ್ ಮಾತನಾಡಿ, ಮಾಜಿ ಪ್ರಧಾನಿ ದೇವೇಗೌಡರ ಸುಪುತ್ರ ಹಾಗೂ ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಅವರ ಜನ್ಮದಿನವನ್ನು ಸರಳವಾಗಿ ಆಚರಿಸಿದ್ದೇವೆ ಎಂದರು.

ಜಿಲ್ಲಾ ಜೆಡಿಎಸ್ ವಕ್ತಾರ ಮುದ್ದನಘಟ್ಟ ಮಹಾಲಿಂಗೇಗೌಡ ಮಾತನಾಡಿ, ಬಡವರ ಕಷ್ಟಗಳಿಗೆ ಸ್ಪಂದಿಸಲು ಪಂಚರತ್ನ ಯೋಜನೆಗಳ ಅನುಷ್ಠಾನಕ್ಕಾಗಿ ಜೆಡಿಎಸ್ ಗೆಲುವು ಅಗತ್ಯ. ರಾಜ್ಯದ ಸಮಗ್ರ ಅಭಿವೃದ್ಧಿಗೆ ಜೆಡಿಎಸ್ ಅಧಿಕಾರಕ್ಕೆ ಬರಬೇಕಿದೆ. ಕುಮಾರಸ್ವಾಮಿ ಅವರನ್ನು ಮುಖ್ಯಮಂತ್ರಿ ಮಾಡುವ ಹಂಬಲ ಜನತೆಗಿದ್ದು, ದೇವರು ಅವರಿಗೆ ಮತ್ತಷ್ಟು ಆರೋಗ್ಯ, ಆಯುಷ್ಯ ಕೊಟ್ಟು ಕಾಪಾಡಲಿ ಎಂದು ಹಾರೈಸಿದರು.

ಮನ್‌ಮುಲ್ ಉಪಾಧ್ಯಕ್ಷ ಎಂ.ಎಸ್. ರಘುನಂದನ್ ಮಾತನಾಡಿ, ಜನಪರ ಕಾಳಜಿಯುಳ್ಳ ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಅವರಿಗೆ ಪ್ರಧಾನಮಂತ್ರಿಯಾಗುವ ಎಲ್ಲಾ ಅರ್ಹತೆ ಇದ್ದು, ಅಭಿಮಾನಿಗಳು ಮತ್ತು ಜೆಡಿಎಸ್ ಮುಖಂಡರ ಸಮ್ಮುಖದಲ್ಲಿ ದೇವರಲ್ಲಿ ವಿಶೇಷ ಪೂಜೆ, ಆಯುಸ್ಸು, ಆರೋಗ್ಯ, ರಾಜಕೀಯ ಶಕ್ತಿಗಾಗಿ ಪ್ರಾರ್ಥನೆ ಸಲ್ಲಿಸಿದ್ದೇವೆ ಎಂದು ತಿಳಿಸಿದರು.

ಶಾಸಕ ಎಂ.ಶ್ರೀನಿವಾಸ್, ನಗರಸಭೆ ಅಧ್ಯಕ್ಷ ಎಚ್.ಎಸ್.ಮಂಜು, ಜೆಡಿಎಸ್ ಜಿಲ್ಲಾಧ್ಯಕ್ಷ ಡಿ.ರಮೇಶ್, ಪಿಇಟಿ ಅಧ್ಯಕ್ಷ ವಿಜಯ್‌ಆನಂದ್, ನಗರಸಭೆ ಸದಸ್ಯ ನಾಗೇಶ್, ತಾಲೂಕು ಅಧ್ಯಕ್ಷ ತಿಮ್ಮೇಗೌಡ, ಬೂದನೂರು ಸ್ವಾಮಿ, ತಾಪಂ ಸದಸ್ಯ ಕಿರಣ್ ಕುಮಾರ್ ಸೇರಿದಂತೆ ಕಾರ್ಯಕರ್ತರಿದ್ದರು.

ಮರಿಯಾಲದಲ್ಲಿ ಶ್ರೀ ಮುರುಘ ರಾಜೇಂದ್ರ ಶ್ರೀಗಳ 106ನೇ ಸಂಸ್ಮರಣ ಆರಾಧನಾ ಮಹೋತ್ಸವ



ಅದ್ಧೂರಿ ಮೆರವಣಿಗೆ: ಮರಿಯಾಲ ಶ್ರೀಗಳ ಸಂಸ್ಮರಣೆಯ ಅಂಗವಾಗಿ ಡಿ.15ರ ರಾತ್ರಿ ಜಂಗಮ ಪುಷ್ಪಾಂದೋಲಿಕಾ ಮಹೋತ್ಸವ, ವಚನ ಸಂಪುಟ ಹಾಗೂ ಶ್ರೀಮಠದ ಗುರು ಪರಂಪರೆಯ ಭಾವಚಿತ್ರ ಮೆರವಣಿಗೆಯು ಮಂಗಳವಾದ್ಯ, ವೀರಗಾಸೆ, ನಂದಿಧ್ವಜ, ಶಿವಭಜನೆ ವಿವಿಧ ಜಾನಪದ ಕಲಾತಂಡಗಳೊಂದಿಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಯಿತು. ಶುಕ್ರವಾರ ಮುಂಜಾನೆ 5 ಗಂಟೆಗೆ ಕರ್ತೃ ಗದ್ದುಗೆಗಳಿಗೆ ಪೂಜೆ, ಬಿಲ್ವಾರ್ಚನೆ, ಮಹಾ ಮಂಗಳಾರತಿ, ಷಟಸ್ಥಲ ಧ್ವಜಾರೋಹಣ, ಬೆಳಗ್ಗೆ 8 ಗಂಟೆಗೆ ಪೂಜ್ಯರ ದಿವ್ಯ ಪಾದಪೂಜೆ ನೆರವೇರಿತು. ಮಧ್ಯಾಹ್ನ ಸಾವಿರಾರು ಜನರಿಗಾಗಿ ಅನ್ನಸಂತರ್ಪಣೆ ಏರ್ಪಡಿಸಲಾಗಿತ್ತು.

ಚಾಮರಾಜನಗರ, ಡಿ.16– ಮರಿಯಾಲದಲ್ಲಿ ಶ್ರೀ ಮುರುಘ ರಾಜೇಂದ್ರ ಸ್ವಾಮೀಜಿಗಳು ನೆಲೆಯೂರಿದ್ದರಿಂದ ಈ ಕ್ಷೇತ್ರ ಸುಕ್ಷೇತ್ರವಾಗಿ ನಾಡಿನಲ್ಲಿ ಪ್ರಸಿದ್ಧಿ ಪಡೆದಿದೆ ಎಂದು ಹುಕ್ಕೇರಿಯ ಚರಂತಿಶ್ವರ ಚರತಿ ವಿರಕ್ತ ಮಠದ ಪೀಠಾಧಿಪತಿ ಶರಣ ಬಸವದೇವರು ಬಣ್ಣಿಸಿದರು.

ತಾಲೂಕಿನ ಮರಿಯಾಲ ಗ್ರಾಮದ ಶ್ರೀ ಮುರುಘ ರಾಜೇಂದ್ರ ಮಹಾಸಂಸ್ಥಾನ ಮಠದಲ್ಲಿ ಸದ್ಗುರು ಶ್ರೀ ಮುರುಘ ರಾಜೇಂದ್ರ ಸ್ವಾಮೀಜಿಗಳ 106ನೇ ವರ್ಷದ ಸಂಸ್ಮರಣ ಆರಾಧನಾ ಮಹೋತ್ಸವದ ಅಂಗವಾಗಿ ಶುಕ್ರವಾರ ಆಯೋಜಿಸಿದ್ದ ಶರಣ ಚಿಂತನಾ ಕಾರ್ಯಕ್ರಮದಲ್ಲಿ ಆಶೀರ್ವಚನ ನೀಡಿದರು.

ಕರ್ನಾಟಕದಲ್ಲಿ ಹುಡುಕಿದ ಕಡೆಯಲ್ಲೆಲ್ಲಾ ಶಿವಯೋಗಿಯ ಗದ್ದುಗೆಗಳು ಕಾಣಸಿಗುತ್ತವೆ. ಶರಣ ಪರಂಪರೆಯಲ್ಲಿ ಬಸವಣ್ಣ, ಚನ್ನಬಸವಣ್ಣ, ಅಲ್ಲಮಪ್ರಭು, ಅಕ್ಕಮಹಾದೇವಿ, ಸಿದ್ಧರಾಮೇಶ್ವರರು ಗುರುಲಿಂಗ ಜಂಗಮರ ಪ್ರತಿರೂಪ. 12ನೇ ಶತಮಾನದ ಬಸವಾದಿ ಪ್ರಮುಖರು ನಮ್ಮೆಲ್ಲರಿಗೂ ಆರಾಧ್ಯ ಪ್ರಮುಖರು. ಊರೂರು ಸುತ್ತಿ ಬಸವಾದಿ ಶರಣರ ತತ್ವ ಪ್ರತಿಪಾದಿಸಿದವರು, ಕುಂಟುತ್ತಾ ಸಾಗಿದ್ದ ಧರ್ಮ ಪ್ರಚಾರಕ್ಕೆ ವೇಗ ಕೊಟ್ಟು ಗಡಿನಾಡ ಭಾಗವನ್ನು ಭಕ್ತಿಯ ಸಾಮ್ರಾಜ್ಯ ಮಾಡಿ, ಸಾವಿರಾರು ವಿರಕ್ತ ಮಠ ಸ್ಥಾಪನೆ ಮಾಡಲು ಎಡಿಯೂರಿನ ಸಿದ್ದಲಿಂಗೇಶ್ವರರು ಮೂಲ ಪ್ರೇರಕ ರಾದವರು ಎಂದರು.

ಚಾಮರಾಜನಗರ ತಾಲೂಕಿನ ಹರದನಹಳ್ಳಿ ಸಿದ್ದಲಿಂಗೇಶ್ವರರ ಮೂಲಸ್ಥಾನ. ಇದು ನಮಗೆ ಬಸವ ಕಲ್ಯಾಣದಂತೆಯೇ ತವರು ಮನೆ. ಬಸವಣ್ಣನ ಭಕ್ತಿ, ಚನ್ನಬಸವಣ್ಣನ ಜ್ಞಾನ, ಪ್ರಭುದೇವರ ವೈರಾಗ್ಯ, ಸಿದ್ದರಾಮರ ಶಿವಯೋಗ ನಿಷ್ಠೆ, ಸರ್ವಜ್ಞರ ಪರಿಪೂರ್ಣ ಭಾವ ಇವೆಲ್ಲವೂ ಒಂದೇ ರೂಪವಾಗಿ ಹರದನಹಳ್ಳಿಯ ತೋಂಟದ ಸಿದ್ದಲಿಂಗೇಶ್ವರರು ಬಂದರು ಎಂದು ಹೇಳಿದರು. ಇದೇ ಸಂದರ್ಭದಲ್ಲಿ ರಕ್ತದಾನ ಶಿಬಿರ ಆಯೋಜಿಸಲಾಗಿತ್ತು. ಕಾರ್ಯಕ್ರಮದಲ್ಲಿ ಶ್ರೀಮಠದ ಅಧ್ಯಕ್ಷ ಇಮ್ಮಡಿ ಮುರುಘ ರಾಜೇಂದ್ರಸ್ವಾಮೀಜಿ ಮತ್ತು ವಿವಿಧ ಮಠಗಳ ಮಠಾಧೀಶರು, ಜನಪ್ರತಿನಿಧಿಗಳು, ಸಾವಿರಾರು ಭಕ್ತರು ಭಾಗವಹಿಸಿದ್ದರು.

'ಪ್ರಭುಲಿಂಗಲೀಲೆ' ನಾಟಕ ಪ್ರದರ್ಶನ

ಶ್ರೀಮುರುಘ ರಾಜೇಂದ್ರ ಮಹಾಸ್ವಾಮಿ ಕಲಾ ಸಂಘದಿಂದ ರಾತ್ರಿ 'ಪ್ರಭುಲಿಂಗ ಲೀಲೆ' ನಾಟಕ ಪ್ರದರ್ಶನ ನಡೆಯಿತು. ಅಲ್ಲಮಪ್ರಭುವಾಗಿ ದಳಪತಿ ವೀರತಪ್ಪ, ಶ್ರೀಬಸವೇಶ್ವರರಾಗಿ ಎಚ್.ಎಸ್. ಮಹದೇವಸ್ವಾಮಿ, ಹರಳಯ್ಯನಾಗಿ ಕೂಸಣ್ಣ ಕಲಿ ಪಾತ್ರದಲ್ಲಿ ವಿಜಯವಾಣಿ ಮರಿಯಾಲ ಪತ್ರಿಕಾ ಪ್ರತಿನಿಧಿ ಪೇಪರ್ ಸಿದ್ದಪ್ಪ ಮತ್ತು ಇತರರು ಮನೋಜ್ಞವಾಗಿ ಅಭಿನಯಿಸಿದರು. ನಾಟಕವನ್ನು ಎಚ್.ಎಸ್.ನಟರಾಜು ಹೆಗ್ಗೋಠಾರ ನಿರ್ದೇಶನ ಮಾಡಿದರು.

ಮೂಡಲ ಹೊಸಹಳ್ಳಿ ಕಾಡಾನೆ ದಾಳಿ: ಫಸಲು ನಾಶ




ಚಾಮರಾಜನಗರ, ಡಿ.16– ತಾಲೂಕಿನ ಮೂಡಲ ಹೊಸಹಳ್ಳಿ ಗ್ರಾಮದ ರೈತರ ಜಮೀನುಗಳಿಗೆ ಗುರುವಾರ ರಾತ್ರಿ ಕಾಡಾನೆಗಳು ಲಗ್ಗೆಯಿಟ್ಟು ಬಾಳೆ ಫಸಲು ನಾಶ ಮಾಡಿವೆ.

ಹರದನಹಳ್ಳಿ ಗ್ರಾಮದ ರೈತ.ಪಿ.ಕುಮಾರ್ ಅವರಿಗೆ ಮೂಡಲ ಹೊಸಹಳ್ಳಿ ಗ್ರಾಮಕ್ಕೆ ಸೇರಿದ ಜಮೀನಿಗೆ ಕಾಡಾನೆಗಳು ಲಗ್ಗೆಯಿಟ್ಟು 4 ರಿಂದ 5 ಎಕರೆ ಪ್ರದೇಶದಲ್ಲಿ ಗೊನೆಗೆ ಬಿಟ್ಟಿದ್ದ ಬಾಳೆ ಫಸಲು ಹಾಗೂ ತುಂತುರು ನೀರಾವರಿಗೆ ಅಳವಡಿಸಿದ ಉಪಕರಣಗಳನ್ನು ಹಾಳು ಮಾಡಿದೆ.

ಕುಮಾರ್ ಅವರು ತಮಗೆ ಸೇರಿದ 2 ಎಕರೆ ಹಾಗೂ ಗುತ್ತಿಗೆ ಪಡೆದ 2.5 ಎಕರೆ ಒಟ್ಟು 4.5 ಎಕರೆ ಸೇರಿ ಜಮೀನಿನಲ್ಲಿ 3 ಸಾವಿರ ನೇಂದ್ರ ಬಾಳೆ, 600 ಏಲಕ್ಕಿ ಬಾಳೆ ಫಸಲು ಬೆಳೆದಿದ್ದರು. ಕಾಡಾನೆ ನುಗ್ಗಿ ನಾಶ ಮಾಡಿದೆ. ಸ್ಥಳಕ್ಕೆ ಅರಣ್ಯಾಧಿಕಾರಿಗಳಾದ ಸುರೇಶ್, ಇತರ ಅಧಿಕಾರಿಗಳು ಭೇಟಿ ನೀಡಿ ಪರಿಶೀಲಿಸಿ ಸರ್ಕಾರದಿಂದ ಪರಿಹಾರ ಕೊಡಿಸುವುದಾಗಿ ಭರವಸೆ ನೀಡಿದರು. ಕಾಡುಪ್ರಾಣಿಗಳಿಗೆ ಜಮೀನುಗಳಿಗೆ ಲಗ್ಗೆಯಿಡದಂತೆ ಕ್ರಮಕೈಗೊಳ್ಳಬೇಕು ಎಂದು ರೈತರ ಒತ್ತಾಯಿಸಿದರು. ಅಧಿಕಾರಿಗಳು ರಾತ್ರಿ ವೇಳೆ ಗಸ್ತು ಮಾಡಿಸಲಾಗುವುದು ರೈತರು ನಮ್ಮೊಂದಿಗೆ ಸಹಕರಿಸಬೇಕು ಎಂದರು.

ಸೂಕ್ತ ಪರಿಹಾರ ಕೊಡಿಸಲು ಕುಮಾರ್ ಆಗ್ರಹ : ಕಾಡಾನೆ ದಾಳಿಯಿಂದ ಸಾಲ ಮಾಡಿ ಶ್ರಮಪಟ್ಟು ಬೆಳೆದ ಬಾಳೆ ಫಸಲುನ್ನು ನಾಶ ಮಾಡಿದೆ. ಇದರಿಂದ ಸುಮಾರು 4 ಲಕ್ಷಕ್ಕೂ ಹೆಚ್ಚು ನಷ್ಟ ಉಂಟಾಗಿದೆ . ಸರ್ಕಾರದಿಂದ ಸೂಕ್ತ ಪರಿಹಾರ ಕೊಡಿಸುವಂತೆ ಅರಣ್ಯಾಧಿಕಾರಿಗಳಲ್ಲಿ ಒತ್ತಾಯಿಸಿದರು.

ಡಿ. 22ರಂದು ಬೆಳಗಾವಿ ವಿಧಾನಸೌಧಕ್ಕೆ ಮುತ್ತಿಗೆ



ಚಾಮರಾಜನಗರ, ಡಿ.16– ಪಂಚಮಶಾಲಿ–ಲಿಂಗಾಯತರನ್ನು 2ಎಗೆ ಸೇರ್ಪಡೆ ಮಾಡಬೇಕೆಂದು ಒತ್ತಾಯಿಸಿ ಡಿ. 22ರಂದು ಬೆಳಗಾವಿ ವಿಧಾನಸೌಧಕ್ಕೆ ಮುತ್ತಿಗೆ ಹಾಕಲು ನಿರ್ಧರಿಸಲಾಗಿದ್ದು, ಈ ಹೋರಾಟಕ್ಕೆ ಗೌಡ ಲಿಂಗಾಯತರು ಸಂಪೂರ್ಣ ಬೆಂಬಲ ವ್ಯಕ್ತಪಡಿಸಿದ್ದಾರೆ.

ನಗರದ ಶ್ರೀ ಸಿದ್ದಬಸವರಾಜ ಸ್ವಾಮೀಜಿ ಅನುಭವ ಮಂಟಪದಲ್ಲಿ ನಡೆದ ಜಿಲ್ಲೆಯ ಗೌಡ ಲಿಂಗಾಯತ ಮುಖಂಡರ ಸಭೆಯಲ್ಲಿ ಗೌಡ ಲಿಂಗಾಯತ ಪಂಚಮಶಾಲಿ ಸಮನ್ವಯ ಸಮಿತಿ ರಾಜ್ಯ ಸಂಚಾಲಕ ಅಮ್ಮನಪುರ ಮಲ್ಲೇಶ ಮಾತನಾಡಿ, ಈಗಾಗಲೇ ಗೌಡ ಲಿಂಗಾಯಿತರು ಹಾಗೂ ಪಂಚಮಶಾಲಿಗಳಿಗೆ ಡಿ. 19ರಂದು 2ಎ ಮೀಸಲಾತಿ ನೀಡುವುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭರವಸೆ ನೀಡಿದ್ದಾರೆ. ಈ ಭರವಸೆ ಈಡೇರಿಸದಿದ್ದರೆ, ಡಿ.22ರಂದು ಬೆಳಗಾವಿ ವಿಧಾನಸಭೆ ಚಲೋ ಹಮ್ಮಿಕೊಳ್ಳಲು ತೀರ್ಮಾನಿಸಲಾಗಿದೆ ಎಂದರು.

ಈ ಹೋರಾಟಕ್ಕೆ ಜಿಲ್ಲೆಯಿಂದಲೂ ಹೆಚ್ಚಿನ ಸಂಖ್ಯೆಯಲ್ಲಿ ಗೌಡ ಲಿಂಗಾಯತ ಸಮುದಾಯದವರು ಭಾಗವಹಿಸಬೇಕು. ಗೌಡ ಲಿಂಗಾಯತರು, ಪಂಚಮ ಶಾಲಿಗಳು, ಮಲೆಗೌಡರು, ಆದಿ ಲಿಂಗಾಯತರಾದ ನಾವೆಲ್ಲರು ಒಂದೇ ಪಂಗಡಕ್ಕೆ ಸೇರಿದ್ದೇವೆ. ನಮ್ಮ ಆಚಾರ–ವಿಚಾರಗಳು ಒಂದೇ ಆಗಿದೆ. ಪಂಚಮಶಾಲಿ ಗೌಡ ಲಿಂಗಾಯತ ಜನಾಂಗದ ಪ್ರಥಮ ಜಗದ್ಗುರು ಶ್ರೀಬಸವ ಜಯ ಮೃತ್ಯುಂಜಯ ಸ್ವಾಮೀಜಿ ಮಾರ್ಗದರ್ಶನ, ನಾಯಕರಾದ ಬಸವನಗೌಡ ಪಾಟೀಲ್ ಯತ್ನಾಳ್, ರಾಷ್ಟ್ರೀಯ ಅಧ್ಯಕ್ಷ ಕಾಶಪ್ಪನವರ್ ತೆಗೆದುಕೊಳ್ಳುವ ನಿರ್ಧಾರಕ್ಕೆ ಬದ್ಧರಾಗಿರಲು ಸಭೆಯಲ್ಲಿ ತೀರ್ಮಾನಿಲಾಗಿದೆ ಎಂದರು.

ಸಭೆಯಲ್ಲಿ ಎಪಿಎಂಸಿ ಅಧ್ಯಕ್ಷ ಮನೋಜ್ ಪಟೇಲ್, ಕೊತ್ತಲವಾಡಿ ಕುಮಾರ್, ಕಾವುದವಾಡಿ ಗುರು, ನಟರಾಜು, ಅಂಕನಶೆಟ್ಟಿಪುರ ಸೋಮಣ್ಣ, ಅಟ್ಟುಗೂಳಿಪುರ ಚನ್ನಂಜಪ್ಪ, ಬಸವನಪುರ ಮಹದೇವಸ್ವಾಮಿ, ಶಿವಾಲಂಕಾರಪ್ಪ, ಹಿರಿಬೇಗೂರು ಗುರುಸ್ವಾಮಿ, ಮೂಡ್ಲುಪುರ ಮಂಜೇಶ್, ಜ್ಯೋತಿಗೌಡಪುರ ಮಂಜುನಾಥ್ ಇದ್ದರು.

ಮಂಜುನಾಥ್ ನಿಧನ



ಚಾಮರಾಜನಗರ, ಡಿ.16– ತಾಲೂಕಿನ ಆಲೂರು ಗ್ರಾಮದ ದಿವಂಗತ ಮಿಲ್ಲಿನ ಮರಿಸ್ವಾಮಿರವರ ಪುತ್ರ ಮಂಜುನಾಥ್ (55)ಇಂದು ಶುಕ್ರವಾರ ಸಂಜೆ ಅನಾರೋಗ್ಯದಿಂದ ನಿಧನರಾದರು. ಮೃತರು ಪತ್ನಿ ಗೀತಾ, ಪುತ್ರಿ ನಿವೇದಿತಾ ರಮೇಶ್, ಸಹೋದರ ಮಲ್ಲಣ್ಣ ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಶನಿವಾರ ಮಧ್ಯಾಹ್ನ ಸ್ವಗ್ರಾಮ ಆಲೂರಿನ ಅವರ ತೋಟದಲ್ಲಿ ನಡೆ ಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ನಾಳೆ ವಿವಿಧೆಡೆ ವಿದ್ಯುತ್ ವ್ಯತ್ಯಯ

ಚಾಮರಾಜನಗರ, ಡಿ.16– ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದಿಂದ ಸಂತೇಮರಹಳ್ಳಿ ಮತ್ತು ಗುಂಡ್ಲುಪೇಟೆ ಉಪವಿಭಾಗ ವ್ಯಾಪ್ತಿಯಲ್ಲಿ ತ್ರೈಮಾಸಿಕ ನಿರ್ವಹಣೆ ಕಾಮಗಾರಿಯನ್ನು ಡಿ.18ರಂದು ಹಮ್ಮಿಕೊಂಡಿರುವುದರಿಂದ ಅಂದು ಬೆಳಿಗ್ಗೆ 9 ರಿಂದ ಸಂಜೆ 5 ಗಂಟೆಯವರೆಗೆ ವಿವಿಧೆಡೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ಗಾಂಜಾ ಬೆಳೆದಿದ್ದ ವ್ಯಕ್ತಿ ಬಂಧನ

ಮನೆಯಲ್ಲಿ ಜಿಂಕೆ ಮಾಂಸ, ಕರಡಿ, ಕಾಡು ಬೆಕ್ಕಿನ ಉಗುರು ಪತ್ತೆ

ಗುಂಡ್ಲುಪೇಟೆ,ಡಿ.16(ಎಂಟಿವೈ)– ಸೈಬರ್ ಕ್ರೈಂ ಹಾಗೂ ಅರಣ್ಯ ಇಲಾಖೆಯ ಅಧಿಕಾರಿಗಳು ಜಂಟಿಯಾಗಿ ನಡೆಸಿದ ಕಾರ್ಯಾಚರಣೆಯಲ್ಲಿ ಜಿಂಕೆ ಬೇಟೆ ಹಾಗೂ ಗಾಂಜಾ ಬೆಳೆಯುತ್ತಿದ್ದ ವ್ಯಕ್ತಿಯೊಬ್ಬನನ್ನು ಬಂಧಿಸಿ, ಆತನಿಂದ ಕರಡಿ, ಕಾಡು ಬೆಕ್ಕಿನ ಉಗುರು ಹಾಗೂ ನಾಡ ಬಂದೂಕು ವಶಪಡಿಸಿಕೊಂಡಿದ್ದಾರೆ ಖಚಿತ ಮಾಹಿತಿಯೊಂದಿಗೆ ಚಾಮರಾಜನಗರದ ಸೈಬರ್ ಕ್ರೈಂ ಪೊಲೀಸರು ಗುಂಡ್ಲುಪೇಟೆ ಬಫರ್ ಜ಼ೋನ್ ವಲಯದ ಅರಣ್ಯಾಧಿಕಾರಿಗಳೊಂದಿಗೆ ಗುಂಡ್ಲುಪೇಟೆ ತಾಲೂಕಿನ ಅಣ್ಣೂರು ಕೇರಿ ಗ್ರಾಮದ ಶಿವನಾಗ ಬಿನ್ ಮಹದೇವಶೆಟ್ಟಿ(34) ಎಂಬಾತನ ಮನೆ ಮೇಲೆ ದಾಳಿ ನಡೆಸಿದಾಗ ಮನೆ ಹಿಂಭಾಗ ಬೆಳೆದಿದ್ದ 6 ಗಾಂಜಾ ಗಿಡ ಪತ್ತೆಯಾಗಿದೆ. ಅಲ್ಲದೆ, ಮನೆಯನ್ನು ಕೂಲಂಕುಶವಾಗಿ ಪರಿಶೀಲಿಸಿದಾಗ 5 ಕೆಜಿ ಜಿಂಕೆ ಮಾಂಸ, ಬೇಟೆಗಾಗಿ ಬಳಸುತ್ತಿದ್ದ ನಾಡ ಬಂದೂಕು ಹಾಗೂ 30 ಸಿಡಿ ಗುಂಡುಗಳು ಪತ್ತೆಯಾಗಿವೆ. ಅಲ್ಲದೇ, ಪ್ಲಾಸ್ಟಿಕ್ ಕವರ್‌ನಲ್ಲಿ ಬಚ್ಚಿಟ್ಟಿದ್ದ ಕರಡಿಯ 5 ಉಗುರು, ಕಾಡುಬೆಕ್ಕಿನ 21 ಉಗುರು ಪತ್ತೆಯಾಗಿವೆ.



ಅಲ್ಲದೇ, ಮನೆಯಲ್ಲಿ 300 ಗ್ರಾಂ ಸಲ್ಫರ್ ಪುಡಿ, ಬಿಳಿ ಉಪ್ಪು ಹಾಗೂ ಎರಡು ಬಂಡಲ್ ವೈರ್ ಪತ್ತೆಯಾಗಿದ್ದು, ಹಲವು ಅನುಮಾನಗಳಿಗೆ ಎಡೆಮಾಡಿಕೊಟ್ಟಿದೆ. ಬಂಧಿತನಿಂದ ಎಲ್ಲಾ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ. ಆರೋಪಿ ಶಿವನಾಗಶೆಟ್ಟಿ ಮತ್ತಿಬ್ಬರು ಆರೋಪಿಗಳಾದ ಬೆಳ್ಳಶೆಟ್ಟಿ ಹಾಗೂ ಕರಿಯಶೆಟ್ಟಿ ಅವರೊಂದಿಗೆ ಸೇರಿ ವಾರದಲ್ಲಿ ಎರಡು ದಿನ ಗುಂಡ್ಲುಪೇಟೆ ತಾಲೂಕಿನ ಹಳೇಪುರ ಗ್ರಾಮದಲ್ಲಿ ಜಿಂಕೆಯನ್ನು ಬೇಟೆಯಾಡಿ ಮಾಂಸವನ್ನು ಮಾರಾಟ ಮಾಡುವ ದಂಧೆ ನಡೆಸುತ್ತಿದ್ದರೆಂದು ತಿಳಿದು ಬಂದಿದೆ. ದಾಳಿ ವೇಳೆ ಬೆಳ್ಳಶೆಟ್ಟಿ ಹಾಗೂ ಕರಿಯಶೆಟ್ಟಿ ತಲೆಮರೆಸಿಕೊಂಡಿದ್ದು, ಅವರ ಬಂಧನಕ್ಕೆ ಪೊಲೀಸರು ಬಲೆ ಬೀಸಿದ್ದಾರೆ.

ಕಾರ್ಯಾಚರಣೆಯಲ್ಲಿ ಸೈಬರ್ ಕ್ರೈಂ ವಿಭಾಗದ ಇನ್ಸ್‌ಪೆಕ್ಟರ್ ಆನಂದ್‌ಕುಮಾರ್, ಗುಂಡ್ಲುಪೇಟೆ ಬಫರ್‌ಜ಼ೋನ್ ಆರ್‌ಎಫ್‌ಓ ಎನ್.ಪಿ.ನವೀನ್‌ಕುಮಾರ್, ಸಬ್‌ಇನ್ಸ್‌ಪೆಕ್ಟರ್, ಡಿಆರ್‌ಎಫ್‌ಓ ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.

ಶಿಕ್ಷಣದಲ್ಲಿ ಹೊಸ ಚಿಂತನೆಗೆ ವಿದೇಶಿ ವಿವಿಗಳ ಸಹಭಾಗಿತ್ವ ಅನಿವಾರ್ಯ

ಬೆಂಗಳೂರು, ಡಿ. 16 (ಕೆಎಂಶಿ)–ಶಿಕ್ಷಣ ವ್ಯವಸ್ಥೆಯಲ್ಲಿ ಹೊಸತನದ ಚಿಂತನೆಗಳು ಇಂದು ನಿರ್ಣಾಯಕವಾಗಿವೆ. ವಿದ್ಯಾರ್ಥಿಗಳು ಜಾಗತಿಕ ಮಟ್ಟದಲ್ಲಿ ಮತ್ತು ವೈವಿಧ್ಯಮಯವಾಗಿ ಚಿಂತಿಸಬೇಕಾಗಿದೆ. ಇದು ಸಾಧ್ಯವಾಗಬೇಕು ಎಂದರೆ, ಜಾಗತಿಕ ಮಟ್ಟದ ವಿವಿಗಳೊಂದಿಗೆ ಸಹಭಾಗಿತ್ವ ಅನಿವಾರ್ಯವಾಗಿದೆ ಎಂದು ಉನ್ನತ ಶಿಕ್ಷಣ ಸಚಿವ ಡಾ. ಸಿ.ಎನ್. ಅಶ್ವತ್ಥನಾರಾಯಣ ಹೇಳಿದ್ದಾರೆ.



ಎಂಬಿಎ (ಹೆಲ್ತ್‌ಕೇರ್) ಕೋರ್ಸ್ ಬಗ್ಗೆ ಜಾಗೃತಿ ಮೂಡಿಸುವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು ನಾವು ಉನ್ನತ ಶಿಕ್ಷಣದ ಮೂಲಕ ಎಲ್ಲರನ್ನೂ ಒಳಗೊಂಡಿರುವ ಅಭಿವೃದ್ಧಿಯನ್ನು ಸಾಧಿಸಬೇಕು. ಇದಕ್ಕಾಗಿ ಸಾಂಪ್ರದಾಯಿಕ ಕಲಿಕಾ ಕ್ರಮಗಳಿಂದ ಹೊರಬರಬೇಕು. ವಿದ್ಯಾರ್ಥಿಗಳು ಕಲಿಕೆಯನ್ನು ಮುಗಿಸಿದ ಕೂಡಲೇ ಅಗತ್ಯ ಕೌಶಲಗಳೊಂದಿಗೆ ಉದ್ಯೋಗ ಮಾರುಕಟ್ಟೆಗೆ ಲಭ್ಯವಾಗುವಂತೆ ಇರಬೇಕು ಎಂದು ಅವರು ಪ್ರತಿಪಾದಿಸಿದರು. ಶಿಕ್ಷಣ ಈಗ ಸಂಪೂರ್ಣ ಡಿಜಿಟಲೀಕರಣಗೊಂಡಿದೆ. ಇಲ್ಲಿ ಯೋಜನೆಗಳು ತ್ವರಿತಗತಿಯಲ್ಲಿ ಅನುಷ್ಠಾನ ಗೊಳ್ಳಬೇಕು. ಆಗ ಮಾತ್ರ ಎದುರಿಗಿರುವ ಅವಕಾಶಗಳನ್ನು ಬಾಚಿಕೊಳ್ಳಲು ಸಾಧ್ಯವಾಗುತ್ತದೆ ಎಂದು ಅವರು ಅಭಿಪ್ರಾಯಪಟ್ಟರು.

ಬೆಂಗಳೂರು ಮತ್ತು ಕರ್ನಾಟಕ ಐಟಿ, ಬಿಟಿ ಸೇರಿದಂತೆ ಹಲವು ಆಧುನಿಕ ತಂತ್ರಜ್ಞಾನಗಳ ನಗರವಾಗಿದೆ. ಹೀಗಾಗಿ ಶಿಕ್ಷಣ ಸಂಸ್ಥೆಗಳು ಇಂತಹ ಉದ್ದಿಮೆಗಳ ಜತೆ ಅರ್ಥಪೂರ್ಣ ಸಂಬಂಧವನ್ನು ಹೊಂದಬೇಕು ಎಂದು ಅವರು ನುಡಿದರು.



ಅರಸು ರಾಜಕೀಯ ನೆಲೆಯಲ್ಲಿ ವಾರಸುದಾರರಾಗಲು ಹಲವರ ಹವಣಿಕೆ

ಹುಣಸೂರು ವಿಧಾನಸಭಾ ಕ್ಷೇತ್ರದ ಶಾಸಕರ ಪರಂಪರೆ

1952: ಡಿ.ದೇವರಾಜ ಅರಸು –ಕಾಂಗ್ರೆಸ್
1957: ಡಿ.ದೇವರಾಜ ಅರಸು, ಎನ್.ರಾಚಯ್ಯ (ದ್ವಿಸದಸ್ಯ ಕ್ಷೇತ್ರ) –ಕಾಂಗ್ರೆಸ್
1962: ಡಿ.ದೇವರಾಜ ಅರಸು, (ಅವಿರೋಧ ಆಯ್ಕೆ) –ಕಾಂಗ್ರೆಸ್
1967: ಡಿ.ದೇವರಾಜ ಅರಸು –ಕಾಂಗ್ರೆಸ್
1972: ಡಿ.ಕರಿಯಪ್ಪಗೌಡ –ಕಾಂಗ್ರೆಸ್
1972: ಡಿ.ದೇವರಾಜ ಅರಸು, (ಉಪ ಚುನಾವಣೆ) –ಕಾಂಗ್ರೆಸ್
1978: ಡಿ.ದೇವರಾಜ ಅರಸು –ಕಾಂಗ್ರೆಸ್
1983: ಚಂದ್ರಪ್ರಭ ಅರಸು–ಜನತಾಪಕ್ಷ
1985: ಡಾ.ಹೆಚ್.ಎಲ್.ತಿಮ್ಮೇಗೌಡ –ಜನತಾಪಕ್ಷ
1989: ಚಂದ್ರಪ್ರಭ ಅರಸು–ಕಾಂಗ್ರೆಸ್
1991: ಎಸ್.ಚಿಕ್ಕಮಾದು (ಉಪಚುನಾವಣೆ) –ಕಾಂಗ್ರೆಸ್
1994: ಸಿ.ಹೆಚ್.ವಿಜಯಶಂಕರ್ –ಬಿಜೆಪಿ
1998: ಜಿ.ಟಿ.ದೇವೆಗೌಡ, (ಉಪ ಚುನಾವಣೆ) –ಜನತಾಪಕ್ಷ
1999: ವಿ.ಪಾಪಣ್ಣ–ಬಿಜೆಪಿ
2004: ಜಿ.ಟಿ.ದೇವೇಗೌಡ –ಜನತಾದಳ
2008: ಹೆಚ್.ಪಿ.ಮಂಜುನಾಥ್ –ಕಾಂಗ್ರೆಸ್
2013: ಹೆಚ್.ಪಿ.ಮಂಜುನಾಥ್ –ಕಾಂಗ್ರೆಸ್
2018: ಹೆಚ್.ವಿಶ್ವನಾಥ್ –ಜನತಾದಳ
2019: ಹೆಚ್.ಪಿ.ಮಂಜುನಾಥ್, (ಉಪ ಚುನಾವಣೆ) –ಕಾಂಗ್ರೆಸ್



ಹೆಚ್.ಪಿ.ಮಂಜುನಾಥ್ | ಜಿ.ಡಿ.ಹರೀಶ್‌ಗೌಡ | ಸಿ.ಪಿ.ಯೋಗೇಶ್ವರ್ | ವೆಂಕಟಮ್ಮ | ಸೋಮಶೇಖರ್ | ಯೋಗಾನಂದಕುಮಾರ್ | ಗಣೇಶ್‌ಕುಮಾರ್ | ಅಣ್ಣಯ್ಯನಾಯ್ಕ | ಪ್ರಸನ್ನ | ಸಯ್ಯದ್ ನಾಸಿರ್

ಹುಣಸೂರು, ಡಿ.16–ಸಾಮಾಜಿಕ ಹರಿಕಾರ, ಮಾಜಿ ಮುಖ್ಯಮಂತ್ರಿ ದಿವಂಗತ ಡಿ.ದೇವರಾಜ ಅರಸು ಅವರ ಕರ್ಮಭೂಮಿ ಹುಣಸೂರು ವಿಧಾನಸಭಾ ಕ್ಷೇತ್ರದಲ್ಲಿ ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಲು ಈಗಾಗಲೇ ಆಕಾಂಕ್ಷಿಗಳು ಭರ್ಜರಿ ತಯಾರಿಯಲ್ಲಿ ತೊಡಗಿದ್ದಾರೆ.

ಯಾವುದೇ ಚುನಾವಣೆಯಲ್ಲೂ ರಾಜಕೀಯ ಪಕ್ಷಗಳು ಜಾತಿ ಆಧರಿಸಿ ಅಭ್ಯರ್ಥಿಗಳನ್ನು ಕಣಕ್ಕಿಳಿಸುತ್ತವೆ. ವಿಶೇಷವೆಂದರೆ ಹುಣಸೂರು ವಿಧಾನಸಭಾ ಕ್ಷೇತ್ರದ ಮತದಾರರು ತಮ್ಮ ಪ್ರತಿನಿಧಿಯನ್ನು ಆಯ್ಕೆ ಮಾಡುವಾಗ ಜಾತಿಯನ್ನು ಬದಿಗೊತ್ತಿ, ಮತ ಚಲಾಯಿಸುವ ಮೂಲಕ ಈ ಕ್ಷೇತ್ರವನ್ನು ವಿಶಿಷ್ಟ ಕ್ಷೇತ್ರವಾಗಿಸಿದ್ದಾರೆ. ಪ್ರಬಲ ಜಾತಿಯವರಿಗಿಂತ ಅಲ್ಪಸಂಖ್ಯೆಯಲ್ಲಿ ಮತದಾರರನ್ನು ಹೊಂದಿರುವ ಜಾತಿಯವರೇ ಈ ಕ್ಷೇತ್ರದಲ್ಲಿ ಹೆಚ್ಚು ಬಾರಿ ಆಯ್ಕೆಯಾಗಿರುವುದು ವಿಶೇಷ.

ದಿವಂಗತ ಡಿ.ದೇವರಾಜ ಅರಸು ಅವರ ಸಮುದಾಯದ ಮತದಾರರು ಅತ್ಯಲ್ಪ ಸಂಖ್ಯೆಯಲ್ಲಿದ್ದರೂ ಅವರು ಆರು ಬಾರಿ ಆಯ್ಕೆಯಾಗಿದ್ದರೆ, ಅವರ ಪುತ್ರಿ ಚಂದ್ರಪ್ರಭಾ ಅರಸು ಎರಡು ಬಾರಿ ಈ ಕ್ಷೇತ್ರದಿಂದ ಶಾಸಕರಾಗಿದ್ದಾರೆ. ಹಾಲಿ ಶಾಸಕರಾಗಿರುವ ಹೆಚ್.ಪಿ.ಮಂಜುನಾಥ್ ಅವರ ಆರ್ಯ ವೈಶ್ಯ ಸಮುದಾಯದವರೂ ಕೂಡ ಅಲ್ಪಸಂಖ್ಯೆಯಲ್ಲಿದ್ದರೂ, ಇಲ್ಲಿನ ಮತದಾರರು ಅವರನ್ನು ಮೂರು ಬಾರಿ ಆಯ್ಕೆ ಮಾಡುವ ಮೂಲಕ ಈ ಕ್ಷೇತ್ರದಲ್ಲಿ ಜಾತಿ ಆಧಾರದ ಮೇಲೆ ಮತದಾನ ನಡೆಯುವುದಿಲ್ಲ ಎಂಬುದನ್ನು ಸಾಬೀತುಪಡಿಸಿದ್ದಾರೆ. ಮತ್ತೊಂದು ವಿಶೇಷವೆಂದರೆ ಡಿ.ದೇವರಾಜ ಅರಸು ಅವರು ಎರಡು ಬಾರಿ ಮುಖ್ಯಮಂತ್ರಿಯಾದದ್ದು ಈ ಕ್ಷೇತ್ರದ ಶಾಸಕರಾಗಿದ್ದಾಗಲೇ.

ಈ ಕ್ಷೇತ್ರದ ಇನ್ನೊಂದು ವಿಶೇಷವೆಂದರೆ ಇಲ್ಲಿ ಶಾಸಕರಾಗಿದ್ದವರು ಎರಡು ಬಾರಿ ಲೋಕಸಭೆಗೆ ಆಯ್ಕೆಯಾಗಿದ್ದಾರೆ. ಚಂದ್ರಪ್ರಭಾ ಅರಸು ಅವರು ಶಾಸಕರಾಗಿದ್ದಾಗ ಲೋಕಸಭಾ ಚುನಾವಣೆಗೆ ಸ್ಪರ್ಧಿಸಿ, ಸಂಸದರಾದರು. ಅದೇ ರೀತಿ ಸಿ.ಹೆಚ್. ವಿಜಯಶಂಕರ್ ಕೂಡ ಇಲ್ಲಿ ಶಾಸಕರಾಗಿದ್ದಾಗಲೇ ಲೋಕಸಭೆಗೆ ಸ್ಪರ್ಧಿಸಿ ಸಂಸದರಾದರು.

ಅತೀ ಹೆಚ್ಚು ಉಪ ಚುನಾವಣೆಗಳನ್ನು ಕಂಡದ್ದೂ ಕೂಡ ಹುಣಸೂರು ವಿಧಾನಸಭಾ ಕ್ಷೇತ್ರದ ಮಗದೊಂದು ವಿಶೇಷ. ಈ ಕ್ಷೇತ್ರ 4 ಉಪ ಚುನಾವಣೆಗಳನ್ನು ಕಂಡಿದೆ. ಮೊದಲಿಗೆ 1977ರಲ್ಲಿ ಶಾಸಕರಾಗಿದ್ದ ಕರಿಯಪ್ಪಗೌಡರು ರಾಜೀನಾಮೆ ನೀಡಿದ ಹಿನ್ನೆಲೆಯಲ್ಲಿ ನಡೆದ ಉಪ ಚುನಾವಣೆಯಲ್ಲಿ ಡಿ.ದೇವರಾಜ ಅರಸು ಅವರು ಸ್ಪರ್ಧಿಸಿ ಗೆಲ್ಲುವ ಮೂಲಕ ಎರಡನೇ ಬಾರಿಗೆ ಮುಖ್ಯಮಂತ್ರಿಯಾದರು. 1989ರಲ್ಲಿ ಅರಸು ಅವರ ಪುತ್ರಿ ಚಂದ್ರಪ್ರಭಾ ಅರಸು ಲೋಕಸಭೆಗೆ ಆಯ್ಕೆಯಾದ ಕಾರಣ ನಡೆದ ಉಪ ಚುನಾವಣೆಯಲ್ಲಿ ಕಾಂಗ್ರೆಸ್‌ನಿಂದ ಸ್ಪರ್ಧಿಸಿದ್ದ ಎಸ್.ಚಿಕ್ಕಮಾದು ಶಾಸಕರಾದರು. ನಂತರ ಬಿಜೆಪಿ ಶಾಸಕರಾಗಿದ್ದ ಸಿ.ಹೆಚ್.ವಿಜಯಶಂಕರ್ ಸಂಸದರಾಗಿ ಆಯ್ಕೆಯಾಗಿದ್ದರಿಂದ 1998ರಲ್ಲಿ ನಡೆದ ಉಪ ಚುನಾವಣೆಯಲ್ಲಿ ಜನತಾ ಪಕ್ಷದಿಂದ ಸ್ಪರ್ಧಿಸಿದ್ದ ಜಿ.ಟಿ.ದೇವೇಗೌಡರು ಶಾಸಕರಾಗಿ ಮೊದಲ ಬಾರಿಗೆ ವಿಧಾನಸಭೆ ಪ್ರವೇಶಿಸಿದರು. ಜನತಾ ದಳದಿಂದ ಶಾಸಕರಾಗಿ ಆಯ್ಕೆಯಾಗಿದ್ದ ಎ.ಹೆಚ್. ವಿಶ್ವನಾಥ್ ಅವರ ಶಾಸಕ ಸ್ಥಾನ ಅನರ್ಹಗೊಂಡಿದ್ದರಿಂದ 2019ರಲ್ಲಿ ನಡೆದ ಉಪ ಚುನಾವಣೆಯಲ್ಲಿ ಹಾಲಿ ಶಾಸಕ ಹೆಚ್.ಪಿ.ಮಂಜುನಾಥ್ ಕಾಂಗ್ರೆಸ್ ಅಭ್ಯರ್ಥಿಯಾಗಿ ಮೂರನೇ ಬಾರಿಗೆ ಆಯ್ಕೆಯಾದರು. ಕ್ಷೇತ್ರದಲ್ಲಿ ನಡೆದ ಒಟ್ಟು ನಾಲ್ಕು ಉಪ ಚುನಾವಣೆಗಳ ಪೈಕಿ ಮೂರರಲ್ಲಿ ಕಾಂಗ್ರೆಸ್ ಗೆದ್ದಿದೆ.

ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಲು ಆಕಾಂಕ್ಷಿಗಳು ಈಗಿನಿಂದಲೇ ತಯಾರಿ ನಡೆಸಿದ್ದಾರೆ. ಕಾಂಗ್ರೆಸ್ ಹಾಲಿ ಶಾಸಕರಿಗೆ ಟಿಕೆಟ್ ನೀಡುವ ಪರಿಪಾಠವಿರುವುದರಿಂದ ಟಿಕೆಟ್‌ಗಾಗಿ ಈ ಕ್ಷೇತ್ರದಿಂದ ಹೆಚ್.ಪಿ.ಮಂಜುನಾಥ್ ಮಾತ್ರವೇ ಕೆಪಿಸಿಸಿಗೆ ಅರ್ಜಿ ಸಲ್ಲಿಸಿದ್ದು, ಬಹುತೇಕ ಅವರೇ ಕಾಂಗ್ರೆಸ್ ಅಭ್ಯರ್ಥಿಯಾಗುವ ಸಾಧ್ಯತೆಯಿರುವುದರಿಂದ ಅವರು ಈಗಾಗಲೇ ಚುನಾವಣೆ ತಯಾರಿಯನ್ನು ನಡೆಸುತ್ತಿದ್ದಾರೆ. ಈ ಕ್ಷೇತ್ರದಲ್ಲಿ ಎರಡು ಬಾರಿ ಶಾಸಕರಾಗಿ ಆಯ್ಕೆಯಾಗಿರುವ ಜಿ.ಟಿ. ದೇವೇಗೌಡರು ಹಿಡಿತ ಸಾಧಿಸಿದ್ದರೂ, ಕಳೆದ ಎರಡು ಚುನಾವಣೆಗಳಲ್ಲಿ ಅವರು ಚಾಮುಂಡೇಶ್ವರಿ ಕ್ಷೇತ್ರದಿಂದ ಸ್ಪರ್ಧಿಸಿ ಶಾಸಕರಾಗಿದ್ದಾರೆ. ಆದರೂ ಹುಣಸೂರಿನಲ್ಲಿ ಅವರ ಪ್ರಭಾವ ಸ್ವಲ್ಪವೂ ತಗ್ಗಿಲ್ಲ. ಹೀಗಾಗಿ ಜಿ.ಟಿ.ದೇವೇಗೌಡರ ಪುತ್ರ, ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ.ಹರೀಶ್‌ಗೌಡರಿಗೆ ಹುಣಸೂರು ಟಿಕೆಟ್ ನೀಡುವುದಾಗಿ ಜೆಡಿಎಸ್ ವರಿಷ್ಠರು ಈಗಾಗಲೇ ಭರವಸೆ ನೀಡಿದ್ದಾರೆ. ಹಾಗಾಗಿ ಜಿ.ಡಿ.ಹರೀಶ್‌ಗೌಡ ಈ ಕ್ಷೇತ್ರದಲ್ಲಿ ಜೆಡಿಎಸ್ ಅಭ್ಯರ್ಥಿಯಾಗಿ ಸ್ಪರ್ಧಿಸುವುದು ಬಹುತೇಕ ಖಚಿತವಾಗಿದೆ. ಸಂಘಟನಾ ಚತುರರು ಎನಿಸಿಕೊಂಡಿರುವ ಹರೀಶ್‌ಗೌಡ, ಕಳೆದ ಕೆಲವು ತಿಂಗಳಿನಿಂದಲೇ ಕ್ಷೇತ್ರಾದ್ಯಂತ ಸಂಚರಿಸಿ ಸಂಘಟನೆ ಮಾಡುವ ಮೂಲಕ ಚುನಾವಣೆಗೆ ತಯಾರಿ ನಡೆಸಿದ್ದಾರೆ. ಇವರ ಹಿಂದೆ ಯುವಕರ ದಂಡೇ ಹಿಂಬಾಲಿಸುತ್ತಿದೆ. ಈ ಮಧ್ಯೆ ಕಳೆದ ಚುನಾವಣೆಯಲ್ಲಿ ಜೆಡಿಎಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿ ಪರಾಭವಗೊಂಡಿದ್ದ ತಾಲೂಕು ಜೆಡಿಎಸ್ ಅಧ್ಯಕ್ಷ ದೇವರಹಳ್ಳಿ ಸೋಮಶೇಖರ್ ಕೂಡ ಟಿಕೆಟ್ ಆಕಾಂಕ್ಷಿಯಾಗಿದ್ದಾರೆ.



ಹುಣಸೂರು ವಿಧಾನಸಭಾ ಕ್ಷೇತ್ರ

ಹುಣಸೂರು ಕ್ಷೇತ್ರದಲ್ಲಿ 1994ರಲ್ಲಿ ಸಿ.ಹೆಚ್.ವಿಜಯಶಂಕರ್ ಮತ್ತು 1999ರಲ್ಲಿ ಕೋಡಿ ಪಾಪಣ್ಣ ಬಿಜೆಪಿ ಅಭ್ಯರ್ಥಿಗಳಾಗಿ ಗೆಲುವು ಸಾಧಿಸಿರುವುದರಿಂದ ಆ ಪಕ್ಷದಿಂದ ಸ್ಪರ್ಧಿಸಲು ಹೆಚ್ಚಿನ ಆಕಾಂಕ್ಷಿಗಳಿದ್ದಾರೆ. ಬಿಜೆಪಿ ತಾಲೂಕು ಅಧ್ಯಕ್ಷ ನಾಗಣ್ಣಗೌಡ, ಮುಡಾ ಅಧ್ಯಕ್ಷ ಗಣೇಶ್ ಕುಮಾರಸ್ವಾಮಿ, ಮೈಸೂರು ಜಿಲ್ಲಾ ಬಿಜೆಪಿ ಪ್ರಧಾನ ಕಾರ್ಯದರ್ಶಿ ಬಿ.ಎಸ್.ಯೋಗಾನಂದ ಕುಮಾರ್, ನಾಯಕ ಸಮುದಾಯದ ತಾಲೂಕು ಅಧ್ಯಕ್ಷ ಅಣ್ಣಯ್ಯ ನಾಯ್ಕ ಮತ್ತು ವೆಂಕಟಮ್ಮ ಬಿಜೆಪಿ ಟಿಕೆಟ್ ಆಕಾಂಕ್ಷಿಗಳಾಗಿದ್ದಾರೆ. ಬಿಎಸ್‌ಪಿಯಿಂದ ಕಣಕ್ಕಿಳಿಯಲು ಪ್ರಸನ್ನ ಸೋಮನಹಳ್ಳಿ ಪ್ರಬಲ ಆಕಾಂಕ್ಷಿಯಾಗಿದ್ದಾರೆ. ಅಲ್ಲದೇ ಸಯ್ಯದ್ ನಾಸಿರ್(ನಾಸಿರ್ ಸೇಠ್) ಪಕ್ಷೇತರರಾಗಿ ಸ್ಪರ್ಧಿಸಲಿರುವುದಾಗಿ ಕ್ಷೇತ್ರದಲ್ಲಿ ಓಡಾಡುತ್ತಿದ್ದಾರೆ.

ಕಳೆದ ಉಪ ಚುನಾವಣೆಯಲ್ಲಿ ಬಿಜೆಪಿಯಿಂದ ಸ್ಪರ್ಧಿಸಲು ಹಾಲಿ ವಿಧಾನ ಪರಿಷತ್ ಸದಸ್ಯರಾಗಿರುವ ಸಿ.ಪಿ.ಯೋಗೇಶ್ವರ್ ತಯಾರಿ ನಡೆಸಿದ್ದರು. ಆದರೆ ಜೆಡಿಎಸ್‌ನಿಂದ ಶಾಸಕರಾಗಿದ್ದು, ಬಿಜೆಪಿಗೆ ಹೋಗಿದ್ದ ಎ.ಹೆಚ್.ವಿಶ್ವನಾಥ್ ಅವರಿಗೆ ಆಗ ಪಕ್ಷ ಟಿಕೆಟ್ ನೀಡಿತ್ತು. ಈ ಬಾರಿಯ ಚುನಾವಣೆಯಲ್ಲಿ ಸ್ಪರ್ಧಿಸಲು ಸಿ.ಪಿ.ಯೋಗೇಶ್ವರ್ ಬರಬಹುದೇ ಎಂಬ ಮಾತುಗಳು ಕೇಳಿಬರುತ್ತಿವೆಯಾದರೂ, ಈ ಬಗ್ಗೆ ಯೋಗೇಶ್ವರ್ ಈವರೆವಿಗೂ ಏನನ್ನೂ ಹೇಳಿಲ್ಲ.

ಮೇಲ್ನೋಟಕ್ಕೆ ಹುಣಸೂರು ವಿಧಾನಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಮತ್ತು ಜೆಡಿಎಸ್ ನಡುವೆ ನೇರ ಸ್ಪರ್ಧೆ ಎಂದು ಹೇಳಲಾಗುತ್ತಿದ್ದರೂ, ಎರಡು ಬಾರಿ ಈ ಕ್ಷೇತ್ರದಲ್ಲಿ ಗೆಲುವು ಸಾಧಿಸಿರುವ ಬಿಜೆಪಿಯನ್ನು ಕೂಡ ಅಲ್ಲಗಳೆಯುವಂತಿಲ್ಲ. ಸಂಸದ ಪ್ರತಾಪ್ ಸಿಂಹ ಹುಣಸೂರು ಕ್ಷೇತ್ರದಲ್ಲಿ ಬಿಜೆಪಿಯನ್ನು ಸಂಘಟಿಸಿದ್ದು, ಇದರ ಫಲವಾಗಿ ಬಿಜೆಪಿ ಅಭ್ಯರ್ಥಿಯಾರೇ ಆದರೂ ಚುನಾ ವಣೆಯನ್ನು ಸಮರ್ಥವಾಗಿ ನಿಭಾಯಿಸುತ್ತಾರೆ ಎಂದು ನಿರೀಕ್ಷಿಸಲಾಗಿದೆ.

ಸಂಚಾರ ನಿಯಮ ಅರಿವು, ಅಪರಾಧ ತಡೆಗೆ ವಾಹನ ತಪಾಸಣೆ ನಡೆಸಲಾಗುತ್ತಿದೆ

● ಪೊಲೀಸ್ ಆಯುಕ್ತ ರಮೇಶ್ ಸ್ಪಷ್ಟನೆ ● ಕಾನೂನು–ಸುವ್ಯವಸ್ಥೆ, ಶಾಂತಿ ಕಾಪಾಡುವುದು ನಮ್ಮ ಕರ್ತವ್ಯ

ಮೈಸೂರು, ಡಿ.16(ಎಸ್‌ಬಿಡಿ)– ಸಂಚಾರ ನಿಯಮ ಪಾಲನೆ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸುವುದರ ಜೊತೆಗೆ ಅಪರಾಧ ಕೃತ್ಯಗಳನ್ನು ತಡೆಯುವ ಉದ್ದೇಶದಿಂದ ಕಟ್ಟುನಿಟ್ಟಾಗಿ ವಾಹನ ತಪಾಸಣೆ ನಡೆಸಲಾಗುತ್ತಿದೆ ಎಂದು ಮೈಸೂರು ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ತಿಳಿಸಿದ್ದಾರೆ.

ನಗರದೆಲ್ಲೆಡೆ ನಿತ್ಯ ವಾಹನ ತಪಾಸಣೆ ನಡೆಸುತ್ತಿರುವ ಬಗ್ಗೆ ಕೆಲವರು ಆಕ್ಷೇಪಾರ್ಹವಾಗಿ ಮಾತನಾಡಿದ್ದಾರೆ. ಪೊಲೀಸರು ಅನಗತ್ಯವಾಗಿ ವಾಹನ ಸವಾರರಿಗೆ ಕಿರುಕುಳ ನೀಡುತ್ತಿದ್ದಾರೆ ಎಂದು ಆರೋಪಿಸುತ್ತಿದ್ದಾರೆ. ಆದರೆ ಕಾನೂನು–ಸುವ್ಯವಸ್ಥೆ ಹಾಗೂ ಇಲ್ಲಿನ ಶಾಂತಿಯುತ ವಾತಾವರಣವನ್ನು ಕಾಯ್ದುಕೊಳ್ಳಬೇಕೆಂಬ ಒಳ್ಳೆಯ ಉದ್ದೇಶದಿಂದ ನಡೆಸುತ್ತಿರುವ ಕಾರ್ಯಾಚರಣೆಗೆ ಎಲ್ಲರೂ ಸಹಕರಿಸಬೇಕೆಂದು ಸುದ್ದಿಗೋಷ್ಠಿಯಲ್ಲಿ ಮನವಿ ಮಾಡಿದರು. ನಾನು ಪೊಲೀಸ್ ಆಯುಕ್ತನಾಗಿ ಅಧಿಕಾರ ವಹಿಸಿಕೊಂಡ ಆರಂಭದಲ್ಲಿ ವಾರ ಕಾಲ ಮೈಸೂರಿನಲ್ಲಿ ಹಗಲು–ರಾತ್ರಿ ಓಡಾಡಿದ್ದೇನೆ. ಆ ವೇಳೆ ಹೆಲ್ಮೆಟ್ ರಹಿತ ಚಾಲನೆ, ತ್ರಿಬಲ್ ರೈಡಿಂಗ್ ಹೀಗೆ ಸಂಚಾರ ನಿಯಮ ಉಲ್ಲಂಘಿಸುವವರು ಹೆಚ್ಚಾಗಿ ಕಂಡರು. ಸಾರ್ವಜನಿಕರಲ್ಲಿ



ಜಾಗೃತಿ ಕೊರತೆ ಜೊತೆಗೆ ಸಂಚಾರ ನಿಯಮ ಅನುಷ್ಠಾನವೂ ಅಸಮರ್ಪಕವೆನಿಸಿತು. ಈ ನಡುವೆ ಮಂಗಳೂರಿನಲ್ಲಿ ಕುಕ್ಕರ್ ಬಾಂಬ್ ಸ್ಫೋಟ ಪ್ರಕರಣದ ಆರೋಪಿ ಮೈಸೂರಿನಲ್ಲೇ ನೆಲೆಸಿ, ಇಲ್ಲಿಯೇ ಕುಕ್ಕರ್ ಬಾಂಬ್ ತಯಾರಿಸಿದ್ದ ಪ್ರಕರಣವೂ ಆಯಿತು. ಈ ಹಿನ್ನೆಲೆಯಲ್ಲಿ ವಾಹನ ತಪಾಸಣೆ ವ್ಯಾಪಕಗೊಳಿಸಲಾಯಿತು ಎಂದು ಸ್ಪಷ್ಟನೆ ನೀಡಿದರು.

ನಗರದ ಭದ್ರತೆ ಹೆಚ್ಚಿಸಲಾಗಿದೆ. ನಾನೂ ಸೇರಿದಂತೆ ಡಿಸಿಪಿ, ಎಸಿಪಿಗಳೂ ನಿರಂತರವಾಗಿ ಗಸ್ತು ನಡೆಸುತ್ತಿದ್ದೇವೆ. ನಗರದ ಗಡಿ ಭಾಗಗಳಲ್ಲಿ ಸಂಚರಿಸುವ ವಾಹನಗಳ ಮೇಲೆ ಹೆಚ್ಚಿನ ನಿಗಾ ಇಡಲಾಗಿದೆ. 23–24 ಕಡೆ ವಾಹನ ತಪಾಸಣೆ ನಡೆಸಲಾಗುತ್ತಿದೆ. ವಾಹನ ಸಂಚಾರ ಹೆಚ್ಚಿರುವ ಕಡೆ ತಪಾಸಣೆಯೂ ಹೆಚ್ಚಾಗಿರುತ್ತದೆ. ಸಂಚಾರ ವಿಭಾಗ ಹಾಗೂ ಕಾನೂನು–ಸುವ್ಯವಸ್ಥೆ ವಿಭಾಗದ ಪೊಲೀಸರು ಜಂಟಿ ಕಾರ್ಯಾಚರಣೆ ನಡೆಸಲಾಗುತ್ತಿದೆ. ಸಂಚಾರ ಪೊಲೀಸರು ಸಂಚಾರ ನಿಯಮ ಉಲ್ಲಂಘನೆ ಸಂಬಂಧ ನಿಗಾ ವಹಿಸಿದರೆ, ಕಾನೂನು–ಸುವ್ಯವಸ್ಥೆ ವಿಭಾಗದ ಪೊಲೀಸರು ಅಪರಾಧ ತಡೆಯುವ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ವಾಹನಗಳಲ್ಲಿ ಮಾರಕಾಸ್ತ್ರ ಇನ್ನಿತರ ವಸ್ತುಗಳನ್ನು ಸಾಗಿಸದಂತೆ ಕಟ್ಟೆಚ್ಚರ ವಹಿಸುತ್ತಾರೆ ಎಂದರು.

ಧೈರ್ಯ ಹಾಗೂ ನಂಬಿಕೆ: ಪೊಲೀಸರ ವ್ಯಾಪಕ ಕಾರ್ಯಾಚರಣೆಯಿಂದ ಸಾರ್ವಜನಿಕರಿಗೆ ಸ್ವಲ್ಪ ತೊಂದರೆಯಾಗಬಹುದು. ಆದರೆ ಮೈಸೂರಿನ ಹಿತದೃಷ್ಟಿಯಿಂದ ಸಹಕರಿಸಬೇಕು. ತಪಾಸಣೆಯಿಂದ ಸರಗಳ್ಳತನ ಇನ್ನಿತರ ಕೃತ್ಯಗಳನ್ನು ತಡೆಯಬಹುದು. ಸಂಚಾರ ನಿಯಮ ಪಾಲಿಸದೆ ಅಪಘಾತ ಸಂಭವಿಸಿ ಪ್ರಾಣಹಾನಿಯಾದರೆ ಅವರ ಕುಟುಂಬದ ಗತಿಯೇನು. ಈ ಬಗ್ಗೆ ಸ್ವಲ್ಪ ಯೋಚಿಸಬೇಕು. ಸಂಜೆ 6ರಿಂದ ರಾತ್ರಿ 10ರವರೆಗೆ ಹೆಚ್ಚು ಪೊಲೀಸರ ಹಾಜರಾತಿ ಕಾಣಬೇಕು. ಈ ಮೂಲಕ ಸಾರ್ವಜನಿಕರಲ್ಲಿ ಧೈರ್ಯ ಹಾಗೂ ಪೊಲೀಸರ ಬಗ್ಗೆ ನಂಬಿಕೆ ಹೆಚ್ಚಬೇಕೆಂದು ಹೇಳಿದರು.

ಸಿಬ್ಬಂದಿಗೂ ಎಚ್ಚರಿಕೆ...



ಮರದ ಮರೆಯಲ್ಲಿ ಅವಿತು ವಾಹನ ತಡೆಯುತ್ತಾರೆಂದು ಹಲವು ದೂರಿದ್ದಾರೆ. ಹಾಗೆ ಮಾಡದಂತೆ ಸೂಚಿಸುವುದರ ಜೊತೆಗೆ ವೇಗ ತಗ್ಗಿಸಲು ಬ್ಯಾರಿಕೇಡ್ ಅಳವಡಿಸಿ ತಪಾಸಣೆ ನಡೆಸುವಂತೆ ತಿಳಿಸಲಾಗಿದೆ. ನಮಗೆ ದಂಡ ಸಂಗ್ರಹಿಸುವುದು ಮುಖ್ಯವಲ್ಲ. ನಿಯಮ ಪಾಲನೆ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವುದು ಹಾಗೂ ಅಪರಾಧ ಕೃತ್ಯ ತಡೆಯುವುದು ನಮ್ಮ ಉದ್ದೇಶ. ಇದರ ನಡುವೆ ಪೊಲೀಸರು ಏನಾದರೂ ದಂಡದ ಬದಲಿಗೆ ಹಣ ನೀಡುಮತೆ ಅಥವಾ ಇನ್ಯಾವುದೇ ರೀತಿ ಕಿರುಕುಳ ನೀಡಿದರೆ ವಿಡಿಯೋ ಮಾಡಿ ನನಗೆ ಕೊಡಿ. ಅಂತಹವರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ವಹಿಸುತ್ತೇನೆ. ಇದರಲ್ಲಿ ಯಾವುದೇ ರಾಜೀ ಇಲ್ಲ.

–ಬಿ.ರಮೇಶ್, ನಗರ ಪೊಲೀಸ್ ಆಯುಕ್ತ

ಭಯೋತ್ಪಾದಕರ ಕಂಡರೆ ಕಾಂಗ್ರೆಸ್‌ಗೆ ಬಲು ಪ್ರೀತಿ

● ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿಕೆಗೆ ಕಟೀಲ್ ಖಂಡನೆ ● ದೇಶದ ಭದ್ರತೆ, ಏಕತೆ ವಿಷಯದಲ್ಲಿ ಕಾಂಗ್ರೆಸ್ ಕಣ್ಣಾಮುಚ್ಚಾಲೆ

ಬೆಂಗಳೂರು, ಡಿ. 16 (ಕೆಎಂಶಿ)– ಕಾಂಗ್ರೆಸ್ ರಾಜ್ಯಾಧ್ಯಕ್ಷ (ಕೆಪಿಸಿಸಿ) ಡಿ.ಕೆ. ಶಿವಕುಮಾರ್ ಅವರು ಬಿಜೆಪಿಗೆ ಬೈಯ್ಯುವ ಭರದಲ್ಲಿ ಭಯೋತ್ಪಾದಕರ ಮೇಲಿನ ತಮ್ಮ ಪ್ರೇಮವನ್ನು ಜಗಜ್ಜಾಹೀರು ಪಡಿಸಿದ್ದಾರೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ನಳಿನ್‌ಕುಮಾರ್ ಕಟೀಲ್ ತಿಳಿಸಿದ್ದಾರೆ. ದೇಶದ ಭದ್ರತೆ, ಏಕತೆ ವಿಚಾರದಲ್ಲಿ ಕಾಂಗ್ರೆಸ್ ಕಣ್ಣಾಮುಚ್ಚಾಲೆ ಆಡುತ್ತಿರುವುದು ಇದೇ ಮೊದಲಲ್ಲ. ಮಂಗಳೂರಿನ ಕುಕ್ಕರ್ ಬಾಂಬ್ ವಿಚಾರ ಭಯೋತ್ಪಾದನೆಗೆ ಸಮಾನವಲ್ಲ ಎಂದು ಮಾತನಾಡುವ ಇವರು ಅಧಿಕಾರಕ್ಕೆ ಬರದಂತೆ ಜನತೆ ತಕ್ಕ ಪಾಠ ಕಲಿಸುತ್ತಾರೆ. ಅಲ್ಲದೆ ಪೂರ್ಣಪ್ರಮಾಣದಲ್ಲಿ ಮೂಲೆಗುಂಪು ಮಾಡುತ್ತಾರೆ ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದ್ದಾರೆ.



ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಅವರು, ಬಾಟ್ಲಾ ಹೌಸ್ ಪ್ರಕರಣದಲ್ಲಿ ಕಾಂಗ್ರೆಸ್‌ನ ಅಂದಿನ ರಾಷ್ಟ್ರಾಧ್ಯಕ್ಷೆ ಸೋನಿಯಾ ಗಾಂಧಿಯವರು ಉಗ್ರರನ್ನು ಎನ್‌ಕೌಂಟರ್ ಮಾಡಿದ್ದಕ್ಕಾಗಿ ಅತ್ತಿದ್ದು ನೆನಪಿಲ್ಲವೇ ಎಂದು ಪ್ರಶ್ನಿಸಿದ್ದಾರೆ.

ಹಿಂದೊಮ್ಮೆ ನೆಹರೂ ಮತಕ್ಕಾಗಿ ಉರ್ದುವಿನಲ್ಲಿ ತನ್ನ ಮದುವೆ ಆಮಂತ್ರಣ ಪತ್ರವನ್ನು ಮುದ್ರಿಸಿದ್ದರು. ರಾಜೀವ್ ಗಾಂಧಿ ಕೂಡ ಭಿಂದ್ರನ್‌ವಾಲೆಯನ್ನು ಒಬ್ಬ ಸಂತ ಎಂದು ಕರೆದಿದ್ದರು ಎಂದು ನೆನಪಿಸಿದ್ದಾರೆ. ಕಾಂಗ್ರೆಸ್ ಆಡಳಿತದಲ್ಲಿ ಭಯೋತ್ಪಾದನೆ ಉತ್ತುಂಗ ಸ್ಥಿತಿಯಲ್ಲಿತ್ತು. ಕಾಂಗ್ರೆಸ್ ಪಕ್ಷ ಭಯೋತ್ಪಾದಕರಿಗೆ ಬೆಂಬಲ ಕೊಡುವ ಮೂಲಕ ಮತಬ್ಯಾಂಕ್ ರಾಜಕೀಯ ಮಾಡುತ್ತಿದೆ. ಇದನ್ನು ಜನರು ಅರ್ಥ ಮಾಡಿಕೊಂಡಿದ್ದು, ಎಲ್ಲೆಡೆ ಅವರ ವಿರುದ್ಧ ಜನಾಭಿಪ್ರಾಯ ಮೂಡಿದೆ ಎಂದು ತಿಳಿಸಿದ್ದಾರೆ.

ದೇಶದ ಭದ್ರತೆ ಮತ್ತು ಅಭಿವೃದ್ಧಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ಉತ್ತರ ಪ್ರದೇಶ ಸೇರಿದಂತೆ ಪಂಚ ರಾಜ್ಯ ಚುನಾವಣೆ, ಗುಜರಾತ್ ಚುನಾವಣೆಯಲ್ಲಿ ಜನರು ಬಿಜೆಪಿ ಪರ ನಿಂತಿದ್ದಾರೆ. ಕರ್ನಾಟಕದಲ್ಲಿ ಅಧಿಕಾರಕ್ಕೇರುವ ಹಗಲುಗನಸು ಕಾಣುತ್ತಿರುವ ಕಾಂಗ್ರೆಸ್ ಅಧ್ಯಕ್ಷರಿಗೆ ಅದು ತಿರುಕನ ಕನಸು ಎಂಬುದರ ಅರಿವಾಗಿದೆ. ಆದ್ದರಿಂದಲೇ ಅವರು ಭಯೋತ್ಪಾದಕರ ಪರ ನಿಂತು ತಮ್ಮ ತುಷ್ಟೀಕರಣ ನೀತಿಯನ್ನು ಮುಂದುವರಿಸಿದ್ದಾರೆ.

ನಮ್ಮ ದೇಶದ ಸೈನಿಕರ ಪರ ನಿಲ್ಲದೆ, ರಕ್ಷಣಾ ವಿಚಾರದಲ್ಲೂ ಸಾಕ್ಷಿ ಕೇಳುವ ಮಟ್ಟಕ್ಕೆ ಕಾಂಗ್ರೆಸ್ ತಲುಪಿದೆ. ಇದೀಗ ಭಯೋತ್ಪಾದಕರ ಪರ ನಿಂತು ತನ್ನ ಲಜ್ಜೆಗೇಡಿ ವರ್ತನೆಯನ್ನು ಮುಂದುವರಿಸಿದೆ. ಇದು ಅತ್ಯಂತ ನಾಚಿಕೆಗೇಡಿನ ಸಂಗತಿಯಾಗಿದೆ. ಭಯೋತ್ಪಾದನೆಯಂಥ ವಿಚಾರದಲ್ಲೂ ರಾಜಕೀಯದ ಬೇಳೆ ಬೇಯಿಸಿಕೊಳ್ಳುವ ಕಾಂಗ್ರೆಸ್ಸಿಗರ ಹೇಯ ಮನಸ್ಥಿತಿಯನ್ನು ಖಂಡಿಸುವುದಾಗಿ ಅವರು ತಿಳಿಸಿದ್ದಾರೆ.

ಡಿ.19ರಂದು ಮಂಡ್ಯ ನಗರ ಬಂದ್; ಟನ್ ಕಬ್ಬಿಗೆ 4,500 ದರ ನಿಗದಿಗೆ ಒತ್ತಾಯ

ರಾಜ್ಯ ರೈತ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ ಪ್ರಕಟ

ಮೈಸೂರು, ಡಿ.16(ಪಿಎಂ)–ಟನ್ ಕಬ್ಬಿಗೆ 4,500 ರೂ. ದರ ನಿಗದಿ ಮಾಡಬೇಕೆಂಬುದೂ ಸೇರಿದಂತೆ ನೆನೆಗುದಿಗೆ ಬಿದ್ದಿರುವ ವಿವಿಧ ಬೇಡಿಕೆಗಳನ್ನು ಈಡೇರಿಸಲು ಒತ್ತಾಯಿಸಿ ಕರ್ನಾಟಕ ರಾಜ್ಯ ರೈತ ಸಂಘವು ಡಿ.19ರಂದು ಮಂಡ್ಯ ನಗರ ಬಂದ್‌ಗೆ ಕರೆ ನೀಡಿದೆ ಎಂದು ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ ತಿಳಿಸಿದರು.



ಮೈಸೂರಿನ ಜಲದರ್ಶಿನಿ ಅತಿಥಿಗೃಹದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕೇಂದ್ರ ಸರ್ಕಾರ ಟನ್ ಕಬ್ಬಿಗೆ ನಿಗದಿ ಮಾಡಿರುವ ಎಫ್‌ಆರ್‌ಪಿ ದರ ಕಡಿಮೆ ಇರುವ ಕಾರಣ ಉತ್ಪಾದನಾ ವೆಚ್ಚವೂ ರೈತರಿಗೆ ದೊರೆಯುತ್ತಿಲ್ಲ. ಹಾಗಾಗಿ ವೈಜ್ಞಾನಿಕ ಬೆಲೆ ನಿಗದಿ ಮಾಡಬೇಕೆಂದು ಕಳೆದ ಆರು ತಿಂಗಳಿಂದ ಹೋರಾಟ ಮಾಡಲಾಗುತ್ತಿದೆ ಎಂದರು.

ಎಫ್‌ಆರ್‌ಪಿ ದರ ಕಡಿಮೆ ಇರುವ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಎಸ್‌ಎಪಿ ದರ ಟನ್‌ವೊಂದಕ್ಕೆ ಕನಿಷ್ಠ 500 ರೂ. ನಿಗದಿ ಮಾಡಬೇಕು. ಒಟ್ಟಾರೆ ಟನ್ ಕಬ್ಬಿಗೆ 4,500 ರೂ. ದರ ನೀಡಬೇಕು ಎಂಬುದು ನಮ್ಮ ಪ್ರಮುಖ ಬೇಡಿಕೆ. ಈ ನಿಟ್ಟಿನಲ್ಲಿ ನಿರಂತರವಾಗಿ ಹೋರಾಟ ನಡೆಸಲಾಗುತ್ತಿದೆ ಎಂದು ಹೇಳಿದರು.

5 ಪೈಸೆ ಇವರಿಗೆ ಬಂಪರ್ ಕೊಡುಗೆ: ಹೋರಾಟದ ಹಿನ್ನೆಲೆಯಲ್ಲಿ ಸರ್ಕಾರ ಸಭೆ ಕರೆಯಿತು. ಬಳಿಕ ಹಲವು ಬಾರಿ ಮನವಿ ಸಲ್ಲಿಸಿದ್ದರಿಂದ ಶೀಘ್ರ ಸಿಹಿ ಸುದ್ದಿ ಕೊಡುತ್ತೇವೆ ಎಂದು ಟನ್‌ಗೆ 50 ರೂ. ಘೋಷಣೆ (ಎಥಾನಲ್ ಹಣದಲ್ಲಿ) ಮಾಡಿದೆ. ಆ ಮೂಲಕ ಕೆಜಿ ಕಬ್ಬಿಗೆ ಕೇವಲ 5 ಪೈಸೆ ನಿಗದಿ ಮಾಡಿ ರೈತರಿಗೆ ಬಂಪರ್ ಕೊಡುಗೆ ಎಂದು ಹೇಳಿಕೊಂಡಿದೆ ಎಂದು ಕಿಡಿಕಾರಿದರು.

ಜನಪರ ಚಳುವಳಿಗಳನ್ನು ಈ ಸರ್ಕಾರ ನಿರ್ಲಕ್ಷ್ಯ ಮಾಡುತ್ತಿದೆ. ಈ ಸರ್ಕಾರದ್ದು ದಪ್ಪ ಚರ್ಮ, ಇದಕ್ಕೆ ಪಂಚೇಂದ್ರಿಯಗಳೇ ಇಲ್ಲ. ದುಡ್ಡು ಇದ್ದರೆ ಚುನಾವಣೆಗಳನ್ನು ಗೆಲ್ಲಬಹುದು ಎಂಬ ಅಹಂ ಹೊಂದಿದೆ. ಇಂತಹ ಅಹಂಗಳಿಗೆ ದೇಶ ಮತ್ತು ರಾಜ್ಯ ಜನತೆ ಬೇಕಾದಷ್ಟು ಬಾರಿ ತಕ್ಕ ಉತ್ತರ ಕೊಟ್ಟ ಉದಾಹರಣೆಗಳಿವೆ ಎಂದು ಎಚ್ಚರಿಸಿದರು.

ಕಬ್ಬಿಗೆ ಸೂಕ್ತ ದರ ನಿಗದಿಗೆ ಆಗ್ರಹಿಸಿ ಮಂಡ್ಯದಲ್ಲಿ ರೈತ ಸಂಘ ಅನಿರ್ದಿಷ್ಟಾವಧಿ ಪ್ರತಿಭಟನೆ ಆರಂಭಿಸಿ ಇಂದಿಗೆ 40 ದಿನಗಳೇ ಆಗಿವೆ. ಡಿ.19ರಂದು ಮಂಡ್ಯ ನಗರದ ಸ್ವಯಂಪ್ರೇರಿತ ಬಂದ್‌ಗೆ ರೈತ ಸಂಘ ಕರೆ ನೀಡಿದೆ. ಇದಕ್ಕೆ ಹಲವು ಸಂಘ ಸಂಸ್ಥೆಗಳು ಬೆಂಬಲ ವ್ಯಕ್ತಪಡಿಸಿವೆ.

> ಬಿಜೆಪಿಯವರು ಜನವಿರೋಧಿ ಕಾನೂನು ತಂದು, ಜನರ ಸಂಕಷ್ಟಕ್ಕೆ ಸ್ಪಂದಿಸದೇ ಲೂಟಿ ಮಾಡುತ್ತಾ ಜನಸಂಕಲ್ಪ ಯಾತ್ರೆ ಮಾಡುತ್ತಿದ್ದಾರೆ. ಇದು ಅರ್ಥಹೀನ. ಇದು ನೈತಿಕ ಯಾತ್ರೆಯಲ್ಲ. ರೈತ ವಿರೋಧಿಯಾದ ಭೂ ಸುಧಾರಣೆ ತಿದ್ದುಪಡಿ ಕಾಯ್ದೆ, ಎಪಿಎಂಸಿ ತಿದ್ದುಪಡಿ ಕಾಯ್ದೆ ಮುಂದುವರೆಸಿದ್ದಾರೆ. ವಿದ್ಯುತ್ ಖಾಸಗೀಕರಣಕ್ಕೆ ತಯಾರಿ ನಡೆಸುತ್ತಿದ್ದಾರೆ. ಸಂಪೂರ್ಣ ರೈತರ ನಾಶ, ಕಾರ್ಮಿಕರ ಹಕ್ಕು ದಮನ ಮಾಡುತ್ತಿರುವ ಈ ಸರ್ಕಾರ ಯಾವ ಮುಖ ಹೊತ್ತು ಜನಸಂಕಲ್ಪ ಯಾತ್ರೆ ಮಾಡುತ್ತಿದೆ. ಜನಸಂಕಲ್ಪ ಯಾತ್ರೆ ನಡೆಸುವ ಎಲ್ಲಾ ಕಡೆಗಳಲ್ಲಿ ರೈತ ಸಂಘವು ಅದಕ್ಕೆ ಪ್ರತಿಯಾಗಿ ಪ್ರತಿಭಟನೆ ನಡೆಸಲಿದೆ.
>
> –ಬಡಗಲಪುರ ನಾಗೇಂದ್ರ

ವ್ಯಾಪಾರಸ್ಥರು, ಹೋಟೆಲ್ ಮಾಲೀಕರು, ಎಲ್ಲಾ ವರ್ಗದ ಜನ ಸಮುದಾಯ ಬಂದ್‌ಗೆ ಬೆಂಬಲ ವ್ಯಕ್ತಪಡಿಸಿವೆ. ಜಿಲ್ಲೆಯ ಎಲ್ಲಾ ಗ್ರಾಮಗಳಿಂದ ಮಹಿಳೆಯರೂ ಸೇರಿದಂತೆ 15 ಸಾವಿರಕ್ಕೂ ಹೆಚ್ಚು ಜನ ಸೇರಿ ಅಂದು ಮಂಡ್ಯ ನಗರದಲ್ಲಿ ಬೃಹತ್ ಪ್ರತಿಭಟನಾ ಮೆರವಣಿಗೆ ಸಹ ನಡೆಸಲಾಗುವುದು. ಇದರಲ್ಲಿ ಮೈಸೂರು, ಚಾಮರಾಜನಗರ, ಕೊಡಗು ಮತ್ತು ರಾಮನಗರ ಜಿಲ್ಲೆಗಳ ರೈತರೂ ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು. ಬೆಳಗಾವಿಯ ಸುವರ್ಣಸೌಧದಲ್ಲಿ ಡಿ.19ರಂದು ಚಳಿಗಾಲದ ಅಧಿವೇಶನ ಪ್ರಾರಂಭವಾಗಲಿದೆ. ಅಂದೇ ಮಂಡ್ಯ ನಗರದಲ್ಲಿ ಬೆಳಗ್ಗೆ 6ರಿಂದ ಮಧ್ಯಾಹ್ನ 2ರವರೆಗೆ ಬಂದ್‌ಗೆ ಕರೆ ನೀಡಲಾಗಿದೆ. ಟನ್ ಕಬ್ಬಿಗೆ 4,500 ರೂ. ನಿಗದಿ ಮಾಡಬೇಕೆಂಬುದೂ ಸೇರಿದಂತೆ ಲೀಟರ್ ಹಾಲಿಗೆ 40 ರೂ. ನಿಗದಿ ಮಾಡಬೇಕು. ಭತ್ತಕ್ಕೆ ಪ್ರೋತ್ಸಾಹ ಧನ ಕೊಡಬೇಕೆಂದು ಆಗ್ರಹಿಸಿ ಅಂದು ಮಂಡ್ಯ ನಗರದಲ್ಲಿ ಶಾಂತಿಯುತ ಯಶಸ್ವಿ ಬಂದ್ ನಡೆಯಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಡಿ.20ರಂದು ಸುವರ್ಣಸೌಧಕ್ಕೆ ಮುತ್ತಿಗೆ: ಈ ಎಲ್ಲಾ ಬೇಡಿಕೆ ಈಡೇರಿಸಬೇಕೆಂದು ಆಗ್ರಹಿಸಿ ಡಿ.20ರಂದು ಸುವರ್ಣಸೌಧಕ್ಕೆ ಮುತ್ತಿಗೆ ಹಾಕಲು ವಿವಿಧ ರೈತ ಸಂಘಟನೆಗಳು ನಿರ್ಧರಿಸಿವೆ. ರೈತ ಸಂಘವೂ ಇದರಲ್ಲಿ ಭಾಗವಹಿಸಲಿದೆ. ಕಬ್ಬು ಬೆಲೆ ನಿಗದಿಗೆ ಆಗ್ರಹಿಸಿ, ವಿರೋಧ ಪಕ್ಷಗಳು ಸದನದಲ್ಲಿ ದನಿ ಎತ್ತಬೇಕೆಂದು ರೈತ ಸಂಘ ಒತ್ತಾಯಿಸಿದೆ. ಈ ನಿಟ್ಟಿನಲ್ಲಿ ಸಂಘವು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಮತ್ತು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಹೆಚ್.ಡಿ.ಕುಮಾರಸ್ವಾಮಿ ಅವರಿಗೆ ಪತ್ರ ಬರೆದು ಒತ್ತಾಯಿಸಿದೆ ಎಂದರು. ಸಂಘದ ಜಿಲ್ಲಾಧ್ಯಕ್ಷ ಹೊಸೂರು ಕುಮಾರ್, ಮುಖಂಡ ಮರಂಕಯ್ಯ ಮತ್ತಿತರರು ಗೋಷ್ಠಿಯಲ್ಲಿದ್ದರು.

ಒಂದನೇ ಪುಟದಿಂದ

ರೌಡಿಶೀಟ್ ತೆರೆಯಲು ನಿರ್ಧಾರ

ಹಾಗೂ ಘಟನೆ ಬಳಿಕ ಪರಾರಿ ಯಾಗಲು ಬಳಸಿದ್ದ ಕಾರನ್ನು ವಶಕ್ಕೆ ಪಡೆಯಲಾಗಿದೆ. ಗಲಾಟೆಯಲ್ಲಿ ಆರೋಪಿ ದಂಪತಿ ಜೊತೆಗಿದ್ದ ಇನ್ನಿಬ್ಬರು ಮಹಿಳೆಯರು, ತಲೆಮರೆಸಿಕೊಳ್ಳಲು ಸಹಕರಿಸಿದವರು ಹಾಗೂ ಅವರಿಗೆ ಆಶ್ರಯ ನೀಡಿದವರ ಬಂಧನಕ್ಕೂ ಶೋಧ ಮುಂದುವರೆಸಲಾಗಿದೆ ಎಂದರು. ಸಾತಗಳ್ಳಿ ಬಸ್ ನಿಲ್ದಾಣದ ವಾಣಿಜ್ಯ ಸಂಕೀರ್ಣವನ್ನು 2017ರಲ್ಲಿ 12 ವರ್ಷಗಳ ಅವಧಿಗೆ ಶಫೀಕ್‌ಗೆ ವಾರ್ಷಿಕ 48 ಲಕ್ಷ ರೂ. ಬಾಡಿಗೆಗೆ ನೀಡಲಾಗಿತ್ತು. ಆತ ಮತ್ತೊಬ್ಬರಿಗೆ ಸಬ್‌ಲೀಜ್ ಮಾಡಿ, ಬಾಡಿಗೆ ಪಡೆಯುತ್ತಿದ್ದ. ಆದರೆ ತಾನು ಕೆಎಸ್‌ಆರ್‌ಟಿಸಿಗೆ ಪಾವತಿಸಬೇಕಿದ್ದ ಬಾಡಿಗೆ ಯನ್ನು 2 ವರ್ಷದಿಂದ ಪಾವತಿಸದ ಕಾರಣ ಒಂದೂವರೆ ಕೋಟಿ ರೂ.ಗೂ ಹೆಚ್ಚು ಬಾಕಿ ಇತ್ತು. ಈ ಹಿನ್ನೆಲೆಯಲ್ಲಿ ಕೆಎಸ್‌ಆರ್‌ಟಿಸಿ ಅಧಿಕಾರಿಗಳು ನೋಟಿಸ್ ನೀಡಿದ್ದರಿಂದ ಬಾಡಿಗೆದಾರ ನ್ಯಾಯಾಲಯಕ್ಕೆ ಹೋಗಿ ಮಧ್ಯಂತರ ತಡೆ ಆದೇಶ ತಂದಿದ್ದರು. ಬಳಿಕ ಕೆಎಸ್‌ಆರ್‌ಟಿಸಿ ಅಧಿಕಾರಿಗಳು ನ್ಯಾಯಾಲಯದ ಮೊರೆಹೋಗಿದ್ದರಿಂದ ಮಧ್ಯಂತರ ತಡೆಯಾಜ್ಞೆ ರದ್ದಾಯಿತು. ನ್ಯಾಯಾಲಯದ ಆದೇಶದಂತೆ ಡಿ.10ರಂದು ಬೆಳಗ್ಗೆ ಕೆಎಸ್‌ಆರ್‌ಟಿಸಿ ಅಧಿಕಾರಿಗಳು ಬಾಡಿಗೆದಾರರಿಗೆ ನೋಟಿಸ್ ಜಾರಿ ಮಾಡಿ, ವಾಣಿಜ್ಯ ಸಂಕೀರ್ಣವನ್ನು ವಶಕ್ಕೆ ಪಡೆಯಲು ಹೋದಾಗ ಈ ಘಟನೆ ನಡೆದಿದ್ದಾಗಿ ವಿಚಾರಣೆಯಿಂದ ತಿಳಿದು ಬಂದಿದೆ ಎಂದು ಹೇಳಿದರು.

ಪೊಲೀಸರು ಇರಲಿಲ್ಲ: ಘಟನೆಯ ವಿಡಿಯೋ ವೀಕ್ಷಿಸಿದವರು ಪೊಲೀಸರ ಸಮಕ್ಷಮದಲ್ಲೇ ಮಚ್ಚು ತೋರಿಸಿ ಬೆದರಿಕೆ ಹಾಕಲಾಗಿದೆ ಎಂದು ತಪ್ಪಾಗಿ ಭಾವಿಸಿದ್ದಾರೆ. ಪೊಲೀಸರು ಹಾಗೂ ಕೆಎಸ್‌ಆರ್‌ಟಿಸಿ ಸಿಬ್ಬಂದಿಯದ್ದು ಒಂದೇ ರೀತಿಯ ಸಮವಸ್ತ್ರವಾಗಿರುವುದರಿಂದ ಹಾಗೆ ತಿಳಿದುಕೊಂಡಿದ್ದಾರೆ. ಆದರೆ ಆ ವೇಳೆ ಪೊಲೀಸರು ಅಲ್ಲಿರಲಿಲ್ಲ. ನಮ್ಮ ಒಬ್ಬ ಸಿಬ್ಬಂದಿ ಇದ್ದಿದ್ದರೂ ಮಚ್ಚು ತೋರಿಸಿ ದರ್ಪ ತೋರುವ ಧೈರ್ಯ ಮಾಡುತ್ತಿರಲಿಲ್ಲ. ಘಟನೆ ನಡೆದ ಡಿ.10ರ ಮಧ್ಯಾಹ್ನ ಕೆಎಸ್‌ಆರ್‌ಟಿಸಿ ಡಿಟಿಓ ಮರೀಗೌಡ ಅವರು ಉದಯಗಿರಿ ಪೊಲೀಸ್ ಠಾಣೆಗೆ ದೂರು ನೀಡಿದರು. ಬೆದರಿಕೆ ಹಾಕಿದ್ದಾರೆಂದು ದೂರಿನಲ್ಲಿ ತಿಳಿಸಿದ್ದರಿಂದ ಆರೋಪಿಗಳ ವಿರುದ್ಧ ಐಪಿಸಿ ಸೆಕ್ಷನ್ 353, 504, 506, 34ರಡಿ ಪ್ರಕರಣ ದಾಖಲಿಸಿಕೊಳ್ಳಲಾಗಿತ್ತು. ಆ ಸಂದರ್ಭದಲ್ಲಿ ಮಚ್ಚು ತೋರಿಸಿ ಬೆದರಿಕೆ ಹಾಕಿರುವ ಬಗ್ಗೆ ಮಾಹಿತಿ ಇರಲಿಲ್ಲ. ಆದರೆ ಡಿ.12ರಂದು ಘಟನೆಯ ವಿಡಿಯೋ ಲಭ್ಯವಾಗಿದ್ದು, ಅದರಲ್ಲಿ ಶಫೀಕ್ ಪತ್ನಿ ಮಚ್ಚು ಝುಳಪಿಸಿ ಪ್ರಾಣಬೆದರಿಕೆ ಹಾಕಿದ್ದು, ಇಬ್ಬರೂ ಅವಾಚ್ಯವಾಗಿ ನಿಂಧಿಸಿದ್ದು ತಿಳಿದಿದ್ದರಿಂದ ತಕ್ಷಣವೇ ಐಪಿಸಿ ಸೆಕ್ಷನ್ 307 ಅನ್ನು ಸೇರ್ಪಡೆಗೊಳಿಸಲಾಯಿತು. ಅಷ್ಟರಲ್ಲಿ ದಂಪತಿ ಮೊಬೈಲ್ ಸ್ವಿಚ್ ಆಫ್ ಮಾಡಿಕೊಂಡು ತಲೆಮರೆಸಿಕೊಂಡಿದ್ದರು. ಆರೋಪಿಗಳ ಬಂಧನಕ್ಕೆ ವಿಶೇಷ ತಂಡವನ್ನು ರಚಿಸಲಾಗಿತ್ತು. ಹಾಸನ, ಚಿಕ್ಕಮಗಳೂರು ಇನ್ನಿತರ ಕಡೆಯಲೆಲ್ಲಾ ಹುಡುಕಾಟ ನಡೆಸಿದ ತಂಡ ವಿರಾಜಪೇಟೆ ಬಳಿಯ ಗ್ರಾಮದಲ್ಲಿದ್ದ ಆರೋಪಿ ದಂಪತಿಯನ್ನು ಬಂಧಿಸಿದೆ ಎಂದು ವಿವರಿಸಿದರು.

ಕಾನೂನು ಮತ್ತು ಸುವ್ಯವಸ್ಥೆ ವಿಭಾಗದ ಡಿಸಿಪಿ ಪ್ರದೀಪ್ ಗುಂಟಿ ಮಾರ್ಗದರ್ಶನ, ದೇವರಾಜ ವಿಭಾಗದ ಎಸಿಪಿ ಎಂ.ಎನ್.ಶಶಿಧರ್ ನೇತೃತ್ವದಲ್ಲಿ ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಿರುವ ಉದಯಗಿರಿ ಠಾಣೆ ಇನ್‌ಸ್ಪೆಕ್ಟರ್ ಪಿ.ಕೆ.ರಾಜು, ಸಬ್‌ಇನ್‌ಸ್ಪೆಕ್ಟರ್‌ಗಳಾದ ಸುನೀಲ್, ರಾಜು, ರೂಪೇಶ್, ಸಿಬ್ಬಂದಿ ಸಿದ್ದೀಕ್ ಅಹಮದ್, ವಿನೋದ್ ರಾಥೋಡ್, ಮಲ್ಲಿಕಾರ್ಜುನ್, ನಾಜಿಯಾ ಭಾನು, ಸಂತೋಷ್, ಸಮೀರ್, ಶಿವರಾಜಪ್ಪ, ಗೋಪಾಲ್, ರವಿಕುಮಾರ್ ಹಾಗೂ ಸಿಡಿಆರ್ ಸೆಲ್‌ನ ಕುಮಾರ್ ಅವರನ್ನೊಳಗೊಂಡ ತಂಡವನ್ನು ಇದೇ ವೇಳೆ ಪ್ರಶಂಸಿಸಿದರು.

ನಾಲ್ವರ ಸ್ಪರ್ಧೆ

ಸಿದ್ಧತೆ ಮಾಡಿಕೊಂಡಿದ್ದರು. ಆದರೆ, ಅವರ ಹಿತೈಷಿಗಳು ತಡರಾತ್ರಿ ಇಲ್ಲವೆ ಮುಂಜಾನೆ ಪಟ್ಟಿ ಬಿಡುಗಡೆ ಮಾಡಿ ಎಂದು ಮಾಡಿದ ಸಲಹೆಗೆ ಕುಮಾರಸ್ವಾಮಿ ಸಮ್ಮತಿಸಿದ್ದಾರೆ ಎಂದು ಹೇಳಲಾಗಿದೆ. ವಿಧಾನಸಭೆಯ ಐವರು ಹಾಲಿ ಶಾಸಕರಿಗೆ ಮೊದಲ ಪಟ್ಟಿಯಲ್ಲಿ ಅವಕಾಶ ನೀಡಿಲ್ಲ. ವಿವಾದವಲ್ಲದ ಸರಿಸುಮಾರು 100 ಕ್ಷೇತ್ರಗಳ ಅಭ್ಯರ್ಥಿಗಳ ಹೆಸರು ಬಿಡುಗಡೆಗೊಳ್ಳುತ್ತಿದೆ. ದೆಹಲಿ, ಮುಂಬೈ ಹಾಗೂ ಹೈದರಾಬಾದ್‌ನಿಂದ ಬಂದಿರುವ ಚುನಾವಣಾ ತಜ್ಞರು ನೀಡಿರುವ ಸಲಹೆ ಸೂಚನೆಗಳ ಅನುಸಾರ ಅಭ್ಯರ್ಥಿಗಳ ಆಯ್ಕೆ ನಡೆಸಲಾಗಿದೆ ಎನ್ನಲಾಗಿದೆ.

ಜೆಡಿಎಸ್‌ನಲ್ಲೇ ಉಳಿದುಕೊಂಡಿರುವ ಹಿರಿಯ ನಾಯಕ ಜಿ.ಟಿ. ದೇವೇಗೌಡ ಚಾಮುಂಡೇಶ್ವರಿ ಕ್ಷೇತ್ರ, ಅವರ ಪುತ್ರ ಹರೀಶ್‌ಗೌಡ ಹುಣಸೂರು ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧೆ ಮಾಡಲಿದ್ದಾರೆ. ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿನ ಅಭ್ಯರ್ಥಿಗಳ ಆಯ್ಕೆಯಲ್ಲಿ ಜಿ.ಟಿ. ದೇವೇಗೌಡರು ನೀಡಿರುವ ಸಲಹೆಗಳನ್ನು ಕುಮಾರಸ್ವಾಮಿ ಪರಿಗಣಿಸಿದ್ದಾರೆ ಎನ್ನಲಾಗಿದೆ. ಮಾಜಿ ಪ್ರಧಾನಿ ದೇವೇಗೌಡರು ಈ ಬಾರಿ ಅಭ್ಯರ್ಥಿಗಳ ಆಯ್ಕೆಯಲ್ಲಿ ಹಸ್ತಕ್ಷೇಪ ಮಾಡಿಲ್ಲ. ಆದರೆ ತಮ್ಮ ಪುತ್ರ ಕುಮಾರಸ್ವಾಮಿಗೆ ಕೆಲವು ಸಲಹೆ ಸೂಚನೆ ನೀಡಿದ್ದಾರೆ. ವಿಧಾನಸಭೆಯ ಜೆಡಿಎಸ್‌ನ ಉಪನಾಯಕ ಬಂಡೆಪ್ಪ ಕಾಶೆಂಪೂರ್ (ಬೀದರ್ ದಕ್ಷಿಣ) ಹೆಚ್.ಕೆ. ಕುಮಾರಸ್ವಾಮಿ (ಸಕಲೇಶಪುರ), ಸಿ.ಎಸ್. ಪುಟ್ಟರಾಜು (ಪಾಂಡವಪುರ) ಸಾರಾ ಮಹೇಶ್ (ಕೆ.ಆರ್.ನಗರ) ಮಂಜುನಾಥ್ (ದಾಸರಹಳ್ಳಿ), ಗೌರಿಶಂಕರ್ (ತುಮಕೂರು ಗ್ರಾಮಾಂತರ) ವೀರಭದ್ರಯ್ಯ (ಮಧುಗಿರಿ), ಎಂ.ಟಿ. ಕೃಷ್ಣಪ್ಪ (ತುರುವೇಕೆರೆ) ಸುರೇಶ್‌ಗೌಡ (ಚಿಕ್ಕನಾಯಕನಹಳ್ಳಿ), ಸುಧಾಕರಲಾಲ್ (ಕೊರಟಗೇರೆ) ನಾಗರಾಜ (ಗುಬ್ಬಿ) ತಿಮ್ಮರಾಯಪ್ಪ (ಪಾವಗಡ) ಕೃಷ್ಣಾರೆಡ್ಡಿ (ಶಿಡ್ಲಘಟ್ಟ) ನಿಸರ್ಗ ನಾರಾಯಣಸ್ವಾಮಿ (ದೇವನಹಳ್ಳಿ) ಡಾ. ಶ್ರೀನಿವಾಸಮೂರ್ತಿ (ನೆಲಮಂಗಲ) ಕೆ.ಪಿ. ಬಚ್ಚೇಗೌಡ (ಚಿಕ್ಕಬಳ್ಳಾಪುರ). ರಾಜಾವೆಂಕಟಪ್ಪ ನಾಯಕ (ಮಸ್ಕಿ), ವೆಂಕಟರಾವ್ ನಾಡಗೌಡ (ಸಿಂದನೂರು), ದೇವಾನಂದ ಚವ್ಹಾಣ್ (ನಾಗಠಾಣ), ಹೆಚ್.ಎಸ್. ಶಿವಶಂಕರ (ಹರಿಹರ), ಹನುಮಂತಪ್ಪ ಮಾವಿನಮರದ (ಬಾದಾಮಿ), ಎಸ್.ಎ. ಗೋವಿಂದರಾಜ (ತುಮಕೂರು), ಶಾರದಾ ನಾಯಕ (ಶಿವಮೊಗ್ಗ ಗ್ರಾಮಾಂತರ), ಸಮೃದ್ಧಿ ಮಂಜುನಾಥ (ಮುಳಬಾಗಿಲು), ವೆಂಕಟಶಿವಾರೆಡ್ಡಿ (ಶ್ರೀನಿವಾಸಪುರ), ಪ್ರಭಾಕರ ರೆಡ್ಡಿ (ಬೆಂಗಳೂರು ದಕ್ಷಿಣ). ನಾಗನಗೌಡ ಕುಂದಕೂರು (ಗುರುಮಿಟಕಲ್) ಶ್ರೀನಾಥ (ಕೋಲಾರ) ಮಂಜುನಾಥ (ಮಾಗಡಿ) ರವೀಂದ್ರ ಶ್ರೀಕಂಠಯ್ಯ (ಶ್ರೀರಂಗಪಟ್ಟಣ) ಅಶ್ವಿನ್‌ಕುಮಾರ್ (ಟಿ.ನರಸೀಪುರ) ಕೆಮಹದೇವ (ಪಿರಿಯಾಪಟ್ಟಣ) ಸೇರಿದಂತೆ 100 ಆಸುಪಾಸಿನ ಅಭ್ಯರ್ಥಿಗಳ ಹೆಸರು ಪ್ರಕಟಗೊಳ್ಳಲಿದೆ.

ಬಿಜೆಪಿ ಗುಜರಾತ್ ಮಾದರಿ ದಾಖಲೆ

ಸ್ಥಗಿತಗೊಂಡಿದ್ದ ಪಿಎಸ್‌ಎಸ್‌ಕೆ ಹಾಗೂ ಮೈಶುಗರ್ ಸಕ್ಕರೆ ಕಾರ್ಖಾನೆ ಪುನರಾರಂಭಿಸಿದ್ದು ಬಿಜೆಪಿ ಸರ್ಕಾರ. ಕಾರ್ಖಾನೆ ಆರಂಭಿಸುವಂತೆ ರೈತರು ಚಳವಳಿ ನಡೆಸಿದರೂ ಯಾವ ಸರ್ಕಾರಗಳೂ ಕ್ರಮ ವಹಿಸಲಿಲ್ಲ. ಮೈಶುಗರ್ ಕಾರ್ಖಾನೆಯನ್ನು ಸರ್ಕಾರಿ ಸ್ವಾಮ್ಯದಲ್ಲಿಯೇ ಆರಂಭಿಸಿ, ಕಬ್ಬಿನ ಪೇಮೆಂಟ್ ಅನ್ನು ಮೊದಲು 17 ಕೋಟಿ, ಇದೀಗ 4 ಕೋಟಿ ರೂ ನೀಡಲಾಗಿದೆ. ಮುಂದಿನ ದಿನಗಳಲ್ಲಿ ಮೈಶುಗರ್ ಕಾರ್ಖಾನೆಯಲ್ಲಿ ಎಥೆನಾಲ್ ಘಟಕ ಆರಂಭಿಸುವ ಮೂಲಕ ಶಾಶ್ವತವಾಗಿ ಕಾರ್ಖಾನೆ ಈ ಭಾಗದ ರೈತರ ಕಬ್ಬು ನುರಿಸುವಂತೆ ಮಾಡಲಾಗುವುದು. ಕೆಆರ್‌ಎಸ್ ಅಣೆಕಟ್ಟೆ 16 ಗೇಟ್‌ಗಳನ್ನು ದುರಸ್ತಿಪಡಿಸಿದ್ದೇವೆ ಮುಂದಿನ ದಿನಗಳಲ್ಲಿ ಕೆಆರ್‌ಎಸ್‌ನ ಎಲ್ಲಾ ಗೇಟ್ ದುರಸ್ತಿಪಡಿಸಲಾಗುವುದು. ಜಿಲ್ಲೆಯಲ್ಲಿ 184 ಕೆರೆ ತುಂಬಿಸುವ 450 ಕೋಟಿ ವೆಚ್ಚದ ಯೋಜನೆ ಮಂಜೂರು ಮಾಡಲಾಗುತ್ತಿದೆ. ಹೀಗೆ ನಮ್ಮ ಸರ್ಕಾರ ಜನಪರ, ರೈತಪರವಾಗಿ ಕೆಲಸ ಮಾಡುತ್ತಿದೆ ಎಂದು ತಿಳಿಸಿದರು.

ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ಮಾತನಾಡಿ, ಕಾಂಗ್ರೆಸ್ ಜಾತಿ, ಧರ್ಮದ ವಿಷ ಬೀಜ ಬಿತ್ತಿ ಚುನಾವಣೆ ಗೆದ್ದು ಅಧಿಕಾರ ಹಿಡಿಯುವ ಭ್ರಮೆಯಲ್ಲಿದೆ. ರಾಜ್ಯದಲ್ಲಿ ಬಿಜೆಪಿ ಗುಜರಾತ್ ಮಾದರಿ ಸ್ಪಷ್ಟ ಬಹುಮತ ಪಡೆದು ಮತ್ತೊಮ್ಮೆ ಅಧಿಕಾರಕ್ಕೆ ಬರಲಿದೆ ಎಂದು ಭವಿಷ್ಯ ನುಡಿದರು. ಮೇಲುಕೋಟೆ ಕ್ಷೇತ್ರದಲ್ಲಿ ಬಿಜೆಪಿ ಪ್ರಬಲವಾಗಿ ಸಂಘಟನೆಯಾಗಿದೆ. ನಮ್ಮ ನಿರೀಕ್ಷೆಗೂ ಮೀರಿ ಜನಸಂಕಲ್ಪ ಸಭೆಗೆ ಜನರು ಬಂದಿದ್ದಾರೆ. ಬಿಜೆಪಿ ಸಂಘಟನೆ ಮಾಡುತ್ತಿರುವ ಡಾ.ಇಂದ್ರೇಶ್ ಅವರಿಗೆ ಮುಂದಿನ ಚುನಾವಣೆಯಲ್ಲಿ ಕ್ಷೇತ್ರದ ಮತದಾರರು ಬೆಂಬಲಿಸಬೇಕು. ಜಿಲ್ಲೆಯ ಏಳು ಕ್ಷೇತ್ರದಲ್ಲೂ ಬಿಜೆಪಿ ಅಭ್ಯರ್ಥಿಯನ್ನು ಗೆಲ್ಲಿಸುವ ಮೂಲಕ ರಾಜ್ಯದಲ್ಲಿ ಬಿಜೆಪಿ ಕೈ ಬಲಪಡಿಸಬೇಕು ಎಂದು ಮನವಿ ಮಾಡಿದರು.

ಕಂದಾಯ ಸಚಿವ ಆರ್.ಅಶೋಕ್ ಮಾತನಾಡಿ, ಕಾಂಗ್ರೆಸ್‌ನ ಸತೀಶ್ ಜಾರಕಿಹೊಳಿ ಹಿಂದೂಗಳ ಬಗ್ಗೆ ಹಗುರವಾಗಿ ಮಾತನಾಡುತ್ತಾರೆ. ಸಿದ್ದರಾಮಯ್ಯ ಅಲ್ಪಸಂಖ್ಯಾತರ ಓಲೈಕೆಗಾಗಿ ಹಿಂದೂಗಳನ್ನು ಮತಾಂತರ ಮಾಡಿದ ಟಿಪ್ಪುವನ್ನು ಹುಲಿ ಎಂದು ಸಂಬೋಧನೆ ಮಾಡುತ್ತಾರೆ. 'ಕಾಂಗ್ರೆಸ್‌ನವರೇ ನೀವು ಟಿಪ್ಪುನನ್ನು ನೆಚ್ಚಿಕೊಂಡರೆ ಕೊನೆಗೆ ಟಿಪ್ಪು ಡ್ರಾಪ್ ಗತಿ' ಎಂದು ಲೇವಡಿ ಮಾಡಿದರು. ಬೆಂಗಳೂರು ವಿಮಾನ ನಿಲ್ದಾಣದಲ್ಲಿ ನಾಡಪ್ರಭು ಕೆಂಪೇಗೌಡ ಪ್ರತಿಮೆಯನ್ನು ನಿರ್ಮಾಣ ಮಾಡಲು ಬಿಜೆಪಿ ಸರ್ಕಾರವೇ ಬರಬೇಕಾಯಿತು. ಮುಂದಿನ ದಿನಗಳಲ್ಲಿ ಕೆಂಪೇಗೌಡರ ಪ್ರತಿಮೆಯನ್ನು ವಿಧಾನಸೌಧದ ಮುಂಭಾಗ ನಿರ್ಮಾಣ ಮಾಡುತ್ತೇವೆ ಎಂದು ಘೋಷಿಸಿದರು.


ಪಾಂಡವಪುರದಲ್ಲಿ ವೀರಶೈವ ಲಿಂಗಾಯತ ಹಾಗೂ ಕುರುಬ ಸಮುದಾಯದ ಭವನಗಳನ್ನು ನಿರ್ಮಿಸಲು ಸಹಕಾರ ನೀಡುವಂತೆ ಸಿಎಂಗೆ ಮನವಿ ಮಾಡಲಾಗಿದೆ ಎಂದು ಬಿಜೆಪಿ ಮುಖಂಡ ಡಾ.ಇಂದ್ರೇಶ್ ಹೇಳಿದರು. ಜಿಲ್ಲಾ ಉಸ್ತುವಾರಿ ಸಚಿವ ಕೆ.ಗೋಪಾಲಯ್ಯ, ಸಚಿವ ಕೆ.ಸಿ.ನಾರಾಯಣಗೌಡ, ಬಿಜೆಪಿ ಜಿಲ್ಲಾಧ್ಯಕ್ಷ ಉಮೇಶ್ ಮಾತನಾಡಿದರು. ಎಂಎಲ್‌ಸಿ ರವಿಕುಮಾರ್, ಜಗದೀಶ್ ಹಿರೇಮನಿ, ಮುಖಂಡರಾದ ಅಶೋಕ್ ಜಯರಾಮು, ಸಿದ್ದರಾಮಯ್ಯ, ಮೈಶುಗರ್ ಮಾಜಿ ಅಧ್ಯಕ್ಷ ಜೆ.ಶಿವಲಿಂಗೇಗೌಡ, ಬಿಜೆಪಿ ತಾಲೂಕು ಅಧ್ಯಕ್ಷ ಅಶೋಕ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕಾಂತರಾಜ್, ಮಹಿಳಾ ಮೋರ್ಚಾ ಕಾರ್ಯದರ್ಶಿ ಮಂಗಳ ನವೀನ್‌ಕುಮಾರ್, ಮೇಲುಕೋಟೆ ಮಂಡಲ ಅಧ್ಯಕ್ಷ ಎಸ್‌ಎನ್‌ಟಿ ಸೋಮಶೇಖರ್, ಮುಖಂಡ ನವೀನ್‌ಕುಮಾರ್, ಧನಂಜಯ್ ಸೇರಿದಂತೆ ಹಲವರು ಹಾಜರಿದ್ದರು.

ಕಪ್ಪು ಬಾವುಟ ಪ್ರದರ್ಶನ: ಕಬ್ಬಿನ ಹಾಗೂ ಹಾಲಿನ ದರ ಏರಿಕೆ ಮಾಡುವ ಸಂಬಂಧ ಸಿಎಂ ನೀಡಿದ ಭರವಸೆ ಈಡೇರಿಸದ ಹಿನ್ನೆಲೆಯಲ್ಲಿ ರೈತ ಸಂಘದ ಕಾರ್ಯಕರ್ತರು ಶುಕ್ರವಾರ ಸಿಎಂ ಬಸವರಾಜ ಬೊಮ್ಮಾಯಿ ಅವರಿಗೆ ಕಪ್ಪು ಬಾವುಟ ಪ್ರದರ್ಶನ ಮಾಡಿ ಆಕ್ರೋಶ ವ್ಯಕ್ತಪಡಿಸಿದರು. ಪಟ್ಟಣದ ಮಂಡ್ಯ ಸರ್ಕಲ್‌ನಲ್ಲಿ ಜಿಲ್ಲಾಧ್ಯಕ್ಷ ಎ.ಎಲ್.ಕೆಂಪೂಗೌಡರ ನೇತೃತ್ವದಲ್ಲಿ ರೈತ ಸಂಘದ ಕಾರ್ಯಕರ್ತರು ರಸ್ತೆ ಬಂದ್ ಮಾಡಿ ಪ್ರತಿಭಟನೆ ಮಾಡಲು ಮುಂದಾದರು. ವಿಷಯ ತಿಳಿದ ಪೊಲೀಸರು ಸ್ಥಳಕ್ಕೆ ಬಂದು ಬ್ಯಾರಿಕೇಡ್ ಹಾಕಿ ರಸ್ತೆ ಪಕ್ಕ ಪ್ರತಿಭಟನೆ ನಡೆಸಲು ಅವಕಾಶ ಮಾಡಿಕೊಟ್ಟು, ಸುತ್ತಲು ಪೊಲೀಸ್ ಸರ್ಪಗಾವಲು ಹಾಕಿದರು.

ಪದ್ಮಭೂಷಣ ಪಂಡಿತ್ ಪುಟ್ಟರಾಜ ಗವಾಯಿ 12ನೇ ಪುಣ್ಯ ಸ್ಮರಣೆ

ಇಂದು 'ಭೈರವದಿಂದ ಭೈರವಿ' ಸಂಗೀತೋತ್ಸವ

ತಬಲಾ ವಿದ್ವಾನ್ ಬಾಲಕನಿಗೆ 'ಪುಟ್ಟಶ್ರೀ ಸಮ್ಮಾನ್' ಪುರಸ್ಕಾರ


ಪುಟ್ಟರಾಜ ಗವಾಯಿ


ರಾಜೀವ್ ತಾರಾನಾಥ್


ರೋಷನ್ ಕೊಲರಕರ್


ಕುಮಾರ ಮರಡೂರು


ಅಂಭಾಪ್ರಸಾದ್


ಮೃತ್ಯುಂಜಯ

ಮೈಸೂರು, ಡಿ.16(ಆರ್‌ಕೆಬಿ)– ಡಾ.ಪಂಡಿತ್ ಪುಟ್ಟರಾಜ ಕವಿ ಗವಾಯಿ ಅವರ 12ನೇ ಪುಣ್ಯ ಸ್ಮರಣೆ ಅಂಗವಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಮೈಸೂರಿನ ಶ್ರೀ ಗುರು ಪುಟ್ಟರಾಜ ಸಂಗೀತ ಸಭಾ ವತಿಯಿಂದ ಶನಿವಾರ(ಡಿ.17) ಬೆಳಗ್ಗೆ 9ರಿಂದ ಸಂಜೆ 6.30ರವರೆಗೆ ಇಡೀ ದಿನ 'ಭೈರವದಿಂದ ಭೈರವಿ' ಹಾಗೂ 'ಪುಟ್ಟಶ್ರೀ ಸಮ್ಮಾನ್' ಸಂಗೀತೋತ್ಸವ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಸಂಗೀತ ಸಭಾದ ಭೀಮಾಶಂಕರ ಬಿದನೂರು ತಿಳಿಸಿದರು.

ಮೈಸೂರು ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರಿನ ಕುವೆಂಪು ನಗರದ ಗಾನಭಾರತಿ ಸಂಗೀತ ಸಭಾಂಗಣದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಸಂಗೀತ ಜುಗಲ್ಬಂದಿ, ಪಿಟೀಲು ವಾದನ ಸೇರಿ ಹಲವು ಕಾರ್ಯಕ್ರಮಗಳಿವೆ.


ಶರಣಕುಮಾರ

ಬೆಳಗ್ಗೆ 9ಕ್ಕೆ ಮೈಸೂರಿನ ಮೃತ್ಯುಂಜಯ ಕಾಚಪೂರ ಅವರ ಭೈರವ ರಾಗದಿಂದ ಕಾರ್ಯಕ್ರಮ ಪ್ರಾರಂಭವಾಗಲಿದೆ. ಬೆಳಗ್ಗೆ 10 ಗಂಟೆಗೆ ಮೇಯರ್ ಶಿವಕುಮಾರ್ ಕಾರ್ಯಕ್ರಮಕ್ಕೆ ಚಾಲನೆ ನೀಡಲಿದ್ದಾರೆ. ಎಸ್‌ಜಿಪಿ ಸಂಗೀತ ಸಭಾದ ಗೌರವಾಧ್ಯಕ್ಷ


ನೌಶಾದ್, ನಿಷಾದ್ ಹರ್ಲಾಪುರ

ಮಾ.ವಿ. ರಾಮಪ್ರಸಾದ್ ಅಧ್ಯಕ್ಷತೆ ವಹಿಸುವರು. ಇದೇ ಸಂದರ್ಭದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ ಅವರು ಬೀದರ್‌ನ ಕು.ರೋಷನ್ ಕೊಲರಕರ್ ಅವರಿಗೆ 'ಪುಟ್ಟಶ್ರೀ ಸಮ್ಮಾನ್' ಪ್ರದಾನ ಮಾಡಲಿದ್ದಾರೆ. ಪ್ರಗತಿಪರ ರೈತ, ಹಿರಿಯ ಕಲಾವಿದ ಹಾಗೂ ಮಾಜಿ ಸೈನಿಕರನ್ನು ಇದೇ ಸಂದರ್ಭದಲ್ಲಿ ಸನ್ಮಾನಿಸಲಾಗುವುದು. ಶಿಲ್ಪಕಲಾ ಅಕಾಡೆಮಿ ಅಧ್ಯಕ್ಷ ವೀರಣ್ಣ ಅರ್ಕಸಾಲಿ, ದಾವಣಗೆರೆಯ ಸಮಾಜ ಸೇವಕ ಟಿ.ಕೆ. ಕರಿಬಸಪ್ಪಭಾಗವಹಿಸುವರು ಎಂದು ಹೇಳಿದರು.

ನಂತರದ ಕಾರ್ಯಕ್ರಮಗಳಲ್ಲಿ ಶಿವಮೊಗ್ಗದ ನೌಶಾದ್ ಹಾಗೂ ನಿಷಾದ್ ಹರ್ಲಾಪುರ ಅವರ ಜುಗಲ್‌ಬಂದಿ ಗಾಯನ, ಯಾದಗಿರಿ ಶರಣಕುಮಾರ ವಠಾರ ಗಾಯನ, ಪುಟ್ಟಶ್ರೀ ಪುರಸ್ಕೃತ ಬೀದರ್‌ನ ಕು.ರೋಷನ್ ಕೊಲರಕರ್ ತಬಲಾ ವಾದನ, ಮಧ್ಯಾಹ್ನ ಎಸ್‌ಜಿಪಿ ಸಂಗೀತ ವಿದ್ಯಾಲಯ ವಿದ್ಯಾರ್ಥಿಗಳಿಂದ ಸಮೂಹ ತಬಲಾ ವಾದನ, ಸಮೂಹ ಗಾಯನವಿದೆ.

ಸಂಜೆ ಪಂ.ಕುಮಾರ ಮರಡೂರು ಗಾಯನ, ನಾದಯೋಗಿ ವಿದ್ವಾನ್ ಮೈಸೂರು ಅಂಭಾಪ್ರಸಾದ್ ಅವರಿಂದ ಕರ್ನಾಟಕ ಸಂಗೀತ ಪಿಟೀಲು ವಾದನ, ಸಂಜೆ 6.30ಕ್ಕೆ ಭೈರವಿ ಮಂಗಲ ಸಂಗೀತ ಅಂತಾರಾಷ್ಟ್ರೀಯ ಸರೋದ್ ಮಾಂತ್ರಿಕ ಪಂ.ರಾಜೀವ್ ತಾರಾನಾಥ್ ಅವರಿಂದ ಭೈರವಿ ಮಂಗಲ ಸಂಗೀತದೊಂದಿಗೆ ಕಾರ್ಯಕ್ರಮ ಮುಕ್ತಾಯವಾಗಲಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಮೃತ್ಯುಂಜಯ ಕಾಚಪುರ, ಗಿರೀಶ್ ಶಿಲ್ಪಿ, ರಮೇಶ್, ಜಗದೀಶ್‌ಬಾಬು ಉಪಸ್ಥಿತರಿದ್ದರು.

ಡಿ.20, 21ರಂದು ಮೈಸೂರು ಜಿಲ್ಲಾ ಸರ್ಕಾರಿ ನೌಕರರ ಕ್ರೀಡಾಕೂಟ



ಮೈಸೂರು, ಡಿ.16(ಆರ್‌ಕೆಬಿ)– ಮೈಸೂರಿನ ಚಾಮುಂಡಿವಿಹಾರ ಕ್ರೀಡಾಂಗಣದಲ್ಲಿ ಡಿ.20 ಮತ್ತು 21ರಂದು 2022–23ನೇ ಸಾಲಿನ ರಾಜ್ಯ ಸರ್ಕಾರಿ ನೌಕರರ ಮೈಸೂರು ಜಿಲ್ಲಾ ಮಟ್ಟದ ಕ್ರೀಡಾಕೂಟ ಆಯೋಜಿಸಲಾಗಿದೆ ಎಂದು ಮೈಸೂರು ಜಿಲ್ಲಾ ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಜೆ.ಗೋವಿಂದರಾಜು ತಿಳಿಸಿದರು.

ಮೈಸೂರು ಪತ್ರಕರ್ತರ ಭವನದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಕ್ರೀಡಾಕೂಟದ ಮಾಹಿತಿ ನೀಡಿದ ಅವರು, ಜಿಪಂ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾ ಶಾಖೆ ಆಶ್ರಯದಲ್ಲಿ ಕ್ರೀಡಾಕೂಟ ನಡೆಯಲಿದೆ. ಡಿ.20 ರಂದು ಬೆಳಗ್ಗೆ 10 ಗಂಟೆಗೆ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಕ್ರೀಡಾಕೂಟಕ್ಕೆ ಚಾಲನೆ ನೀಡುವರು. 21ರಂದು ಸಂಜೆ 4 ಗಂಟೆಗೆ ಕ್ರೀಡಾಕೂಟ ಸಮಾರೋಪಗೊಳ್ಳಲಿದೆ ಎಂದರು.

ಚಾಮುಂಡಿವಿಹಾರ ಕ್ರೀಡಾಂಗಣ, ಮೈಸೂರು ಸ್ಪೋರ್ಟ್ಸ್ ಪೆವಿಲಿಯನ್, ಮೈಸೂರು ವಿವಿ, ಜೆ.ಪಿ.ನಗರ ಮಹರ್ಷಿ ಶಾಲೆ, ಕೆ.ಜಿ.ಕೊಪ್ಪಲಿನ ಕನ್ನೇಗೌಡ ಕ್ರೀಡಾಂಗಣಗಳಲ್ಲಿ ಕ್ರೀಡೆ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳು ನಡೆಯಲಿವೆ. ಹಾಕಿ, ಕುಸ್ತಿ, ಕಬಡ್ಡಿ, ವಾಲಿಬಾಲ್, ಅಥ್ಲೆಟಿಕ್ಸ್, ಟೆನಿಕಾಯ್ಟ್, ವೇಯ್ಟ್‌ಲಿಫ್ಟಿಂಗ್, ಪವರ್ ಲಿಫ್ಟಿಂಗ್, ಬೆಸ್ಟ್ ಫಿಸಿಕ್, ಚೆಸ್, ಥ್ರೋಬಾಲ್, ಈಜು, ಕೇರಂ, ಬಾಲ್ ಬ್ಯಾಡ್ಮಿಂಟನ್, ಟೆನ್ನಿಸ್, ಫುಟ್‌ಬಾಲ್, ಬ್ಯಾಡ್ಮಿಂಟನ್, ಟೇಬಲ್ ಟೆನ್ನಿಸ್, ಕ್ರಿಕೆಟ್ ಕ್ರೀಡೆಗಳಿರುತ್ತವೆ ಎಂದು ತಿಳಿಸಿದರು.

ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ಸಂಗೀತದ ವಿವಿಧ ಪ್ರಾಕಾರಗಳು, ಜಾನಪದ ಗೀತೆ, ನೃತ್ಯ, ವಾದ್ಯ ಸಂಗೀತ, ಕರಕುಶಲ ವಸ್ತುಗಳ ಪ್ರದರ್ಶನ, ಕಿರುನಾಟಕ ಇತ್ಯಾದಿ ನಡೆಸಲಾಗುವುದು. ಭಾಗವಹಿಸುವ ಕ್ರೀಡಾಪಟುಗಳು ಹೆಸರು ನೋಂದಾಯಿಸಿಕೊಂಡು, ಡಿ.20ರಂದು ನಡೆಯುವ ಕ್ರೀಡಾಕೂಟದ ಉದ್ಘಾಟನಾ ಸಮಾರಂಭದಲ್ಲಿ ಪಥ ಸಂಚಲನದಲ್ಲಿ ಭಾಗವಹಿಸಬೇಕು. ವಿಜೇತ ಕ್ರೀಡಾಪಟುಗಳಿಗೆ ಒಲಂಪಿಕ್ ಮಾದರಿಯ ಪದಕ, ಪ್ರಮಾಣಪತ್ರಗಳನ್ನು ನೀಡಲಾಗುವುದು ಎಂದರು. ಸುದ್ದಿಗೋಷ್ಠಿಯಲ್ಲಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ಟಿ.ಆರ್. ಲೋಹಿತ್ ಗಂಗಾಧರ್, ಸರ್ಕಾರಿ ನೌಕರರ ಸಂಘದ ಪದಾಧಿಕಾರಿಗಳಾದ ರೇವಣ್ಣ ರಮೇಶ್ ಕುಮಾರ, ಆನಂದ್, ಗಿರೀಶ್, ಗಣೇಶ್ ಉಪಸ್ಥಿತರಿದ್ದರು.

ಹೆಚ್‌ಡಿಕೆ 'ಪಂಚರತ್ನ ಯೋಜನೆ' ಕರಪತ್ರ ಹಂಚಿ ಕೃಷ್ಣರಾಜ ಕ್ಷೇತ್ರದಲ್ಲಿ ಜೆಡಿಎಸ್ ಪ್ರಚಾರ ಆರಂಭ



ಮೈಸೂರು, ಡಿ.16(ಆರ್‌ಕೆಬಿ)– ಕರ್ನಾಟಕವನ್ನು ಸರ್ವಜನಾಂಗದ ಶಾಂತಿಯ ತೋಟವಾಗಿ ಮಾಡುವ ಪರಿಕಲ್ಪನೆ ಹೊಂದಿರುವ ಜೆಡಿಎಸ್ ವರಿಷ್ಠ ಹೆಚ್.ಡಿ.ಕುಮಾರಸ್ವಾಮಿ ಅವರ 'ಪಂಚರತ್ನ ಯೋಜನೆ' ಮುಂದಿಟ್ಟುಕೊಂಡು ಮುಂಬರುವ ವಿಧಾನಸಭಾ ಚುನಾವಣೆ ಎದುರಿಸಲು ಸಜ್ಜಾಗಿರುವ ಜೆಡಿಎಸ್ ಪಕ್ಷಕ್ಕೆ ಮತ ನೀಡುವಂತೆ ಕೃಷ್ಣರಾಜ ಕ್ಷೇತ್ರದಲ್ಲಿ ಮತದಾರರಿಗೆ ಕರಪತ್ರದ ಜೊತೆಗೆ ಹಣ್ಣುಗಳನ್ನು ವಿತರಿಸಿ ಮನವಿ ಮಾಡಲಾಗುವುದು ಎಂದು ಮೈಸೂರು ನಗರ ಜೆಡಿಎಸ್ ಕಾರ್ಯಾಧ್ಯಕ್ಷ ಎಸ್.ಪ್ರಕಾಶ್ ಪ್ರಿಯದರ್ಶಿನಿ ತಿಳಿಸಿದರು.

ಮೈಸೂರು ಪತ್ರಕರ್ತರ ಭವನದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕುಮಾರಸ್ವಾಮಿ ಅವರ ಪಂಚರತ್ನ ಯೋಜನೆಯಲ್ಲಿ ಆರೋಗ್ಯ ಸಂಪತ್ತು ಎಂಬ ಅಂಶವಿದ್ದು, ಜನರ ಆರೋಗ್ಯದ ದೃಷ್ಟಿಯಿಂದ ಪ್ರಕೃತಿ ನೀಡಿರುವ ಅತ್ಯಮೂಲ್ಯ ಹಣ್ಣುಗಳನ್ನು ಬಳಸುವ ಮೂಲಕ ಆರೋಗ್ಯ ಭಾಗ್ಯ ಪಡೆಯಲಿ ಎಂಬುದು ನಮ್ಮ ಉದ್ದೇಶವಾಗಿದೆ. ಇದರಿಂದ ರೈತರು ಬೆಳೆದ ಹಣ್ಣುಗಳಿಗೆ ಉತ್ತಮ ಬೆಲೆಯೂ ಬರುತ್ತದೆ ಎಂದು ಹೇಳಿದರು.

ಕುರುಬ ಸಮಾಜಕ್ಕೆ ಸೇರಿದ ನಾನು ಕೃಷ್ಣರಾಜ ಕ್ಷೇತ್ರದಲ್ಲಿ ಜೆಡಿಎಸ್ ಟಿಕೆಟ್ ಆಕಾಂಕ್ಷಿಯಾಗಿದ್ದು, 30 ವರ್ಷದಿಂದ ಸಾರ್ವಜನಿಕ ಜೀವನದಲ್ಲಿದ್ದು, ಪಕ್ಷದ ವಿವಿಧ ಸ್ತರಗಳಲ್ಲಿ ಪಕ್ಷ ಸಂಘಟನೆಯಲ್ಲಿ ತೊಡಗಿಸಿಕೊಂಡಿದ್ದೇನೆ. ಕೃಷ್ಣರಾಜ ಕ್ಷೇತ್ರದಲ್ಲಿ ವಿವಿಧ ಆಶ್ರಮಗಳು, ವಿದ್ಯಾರ್ಥಿ ನಿಲಯಗಳಲ್ಲಿ ನನ್ನ ಸ್ನೇಹ ಬಳಗದಿಂದ ಈಗಾಗಲೇ 98 ಬಾರಿ ಹಣ್ಣು ವಿತರಣಾ ಕಾರ್ಯಕ್ರಮ ನಡೆಸಿದ್ದೇನೆ. ಅಲ್ಲದೆ ಜಿಲ್ಲಾ ವ್ಯಾಪ್ತಿಯಲ್ಲಿ ಕುರುಬರಿಂದ ಕುರುಬರಿಗಾಗಿ ಉಚಿತ ಕುರಿ ನೀಡುವ ಯೋಜನೆ ಮೂಲಕ 3 ಕಾರ್ಯಕ್ರಮ ಆಯೋಜಿಸಿದ್ದೇನೆ. ಹೀಗಾಗಿ 2023ರ ವಿಧಾನಸಭಾ ಚುನಾವಣೆಯಲ್ಲಿ ಹಣ ಹೊರತುಪಡಿಸಿ, ಜನರ ಪ್ರೀತಿ, ವಿಶ್ವಾಸ, ಪಕ್ಷದ ವರಿಷ್ಠರ ಆಶೀರ್ವಾದ, ಮುಖಂಡರು, ಕಾರ್ಯಕರ್ತರ ಸಹಕಾರ ಪಡೆದು, ಚುನಾವಣೆಯಲ್ಲಿ ಗೆಲ್ಲಬಹುದು ಎಂಬುದನ್ನು ಸ್ಪರ್ಧಿಸಿ, ಸಾಬೀತುಪಡಿಸುವುದಾಗಿ ಪ್ರಕಾಶ್ ಪ್ರಿಯದರ್ಶನ್ ತಿಳಿಸಿದರು.

ವರಿಷ್ಠರು ಈ ಬಾರಿ ನನಗೇ ಟಿಕೆಟ್ ನೀಡಿ, ಕೃಷ್ಣರಾಜ ಕ್ಷೇತ್ರದಲ್ಲಿ ಗೆಲುವು ಪಡೆಯಲು ಆಶೀರ್ವದಿಸುವಂತೆ ಮನವಿ ಮಾಡಿರುವುದಾಗಿ ತಿಳಿಸಿದರು. ಡಿ.19ರಂದು ಬೆಳಗ್ಗೆ 9.30ಕ್ಕೆ ಮೈಸೂರಿನ ನಾರಾಯಣಶಾಸ್ತ್ರಿ ರಸ್ತೆಯ ಶ್ರೀ ಮಹದೇಶ್ವರ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿ, ಚುನಾವಣಾ ಪ್ರಚಾರ ಕಾರ್ಯ ಆರಂಭಿಸುವುದಾಗಿ ಅವರು ಹೇಳಿದರು. ಸುದ್ದಿಗೋಷ್ಠಿಯಲ್ಲಿ ಪಕ್ಷದ ಮುಖಂಡರಾದ ಗಿರೀಶ್‌ಗೌಡ, ಯದುನಂದನ, ರಾಧಾಕೃಷ್ಣ, ಇಮ್ರಾನ್ ಉಪಸ್ಥಿತರಿದ್ದರು.

ಮತ್ತೆ ಉತ್ತರ ಕರ್ನಾಟಕ ಪ್ರತ್ಯೇಕ ರಾಜ್ಯದ ಕೂಗು

ವಿಜಯನಗರ ರಾಜಧಾನಿ ಎಂದ ಸಚಿವ ಆನಂದ್ ಸಿಂಗ್

ವಿಜಯನಗರ: ಮತ್ತೆ ಉತ್ತರ ಕರ್ನಾಟಕ ಪ್ರತ್ಯೇಕ ರಾಜ್ಯದ ಕೂಗು ಕೇಳಿ ಬಂದಿದ್ದು, ಉತ್ತರ ಕರ್ನಾಟಕ ಪ್ರತ್ಯೇಕ ರಾಜ್ಯವಾದರೆ ಅದಕ್ಕೆ ವಿಜಯನಗರ ರಾಜಧಾನಿ ಆಗುತ್ತೆ ಎಂದು ಪ್ರವಾಸೋದ್ಯಮ ಸಚಿವ ಆನಂದ್ ಸಿಂಗ್ ಅಚ್ಚರಿಯ ಹೇಳಿಕೆ ನೀಡಿದ್ದಾರೆ.



ವಿಜಯನಗರ ಜಿಲ್ಲೆಯ ಹೊಸಪೇಟೆ ತಾಲೂಕಿನ ಭಟ್ಟರಹಳ್ಳಿ ಗ್ರಾಮದ ಆಂಜನೇಯ ದೇಗುಲದ ಬಳಿ ಬಿಜೆಪಿ ಕಚೇರಿ ಶಂಕುಸ್ಥಾಪನೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಜಿಲ್ಲಾ ಕೇಂದ್ರದಲ್ಲಿ ಅರ್ಧ ಎಕರೆ ಪ್ರದೇಶದಲ್ಲಿ ಜಿಲ್ಲಾ ಕಚೇರಿ ಕಾಮಗಾರಿ ಆರಂಭವಾಗಿದೆ. ವಿಜಯನಗರ ಸಾಮ್ರಾಜ್ಯ ನೆಲದ ಗುಣವೇ ವಿಶೇಷ. ಆದ್ದರಿಂದ ಉತ್ತರ ಕರ್ನಾಟಕ ಪ್ರತ್ಯೇಕ ರಾಜ್ಯವಾದರೆ ನೂತನ ವಿಜಯನಗರ ಜಿಲ್ಲೆ ರಾಜಧಾನಿಯಾಗುವ ಸಾಧ್ಯತೆ ಇದೆ ಎಂದಿದ್ದಾರೆ. ಉಮೇಶ್ ಕತ್ತಿ ಅವರ ಬಳಿಕ ಈಗ ಆನಂದ್ ಸಿಂಗ್ ಅವರು ಉತ್ತರ ಕರ್ನಾಟಕದ ಪ್ರತ್ಯೇಕ ರಾಜ್ಯದ ಪರ ಧ್ವನಿ ಎತ್ತಿದ್ದಾರೆ.

ಗ್ರಾಹಕ ಜಾಗರಣ ಪಾಕ್ಷಿಕ ಆಚರಣೆ

ಗ್ರಾಹಕರಿಗೆ ಗ್ರಾಹಕ ಕಾಯ್ದೆಗಳ ತಿಳುವಳಿಕೆ ಮೂಡಿಸಬೇಕು



ಮೈಸೂರು, ಡಿ.16(ಆರ್‌ಕೆಬಿ)– ಅಖಿಲ ಭಾರತೀಯ ಗ್ರಾಹಕ ಪಂಚಾಯತ್ ಮೈಸೂರು ಘಟಕದ ವತಿಯಿಂದ ಗ್ರಾಹಕ ಜಾಗರಣ ಪಾಕ್ಷಿಕ 2022ರ ಅಂಗವಾಗಿ ವಿದ್ಯಾರ್ಥಿಗಳು ಹಾಗೂ ಗ್ರಾಹಕರಿಗೆ ಗ್ರಾಹಕ ಹಕ್ಕುಗಳ ಜಾಗೃತಿ ಕಾರ್ಯಕ್ರಮ ನಡೆಸಲಾಯಿತು.

ವಿದ್ಯಾರಣ್ಯಪುರಂನಲ್ಲಿರುವ ವಿದ್ಯಾರಣ್ಯ ಕೋಚಿಂಗ್ ಸೆಂಟರ್ ಆವರಣದಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಕರ್ನಾಟಕ ರಾಜ್ಯ ಮುಕ್ತ ವಿವಿ ಅರ್ಥಶಾಸ್ತ್ರ ಸಂಶೋಧನಾ ಮತ್ತು ಅಧ್ಯಯನ ವಿಭಾಗದ ಅಧ್ಯಕ್ಷೆ ಆರ್.ಎಚ್.ಪವಿತ್ರ ಮಾತನಾಡಿ, ವಿದ್ಯಾರ್ಥಿಗಳು ಮತ್ತು ಜನರಲ್ಲಿ ಗ್ರಾಹಕ ಜಾಗೃತಿ ಉಂಟು ಮಾಡುವ ಉದ್ದೇಶದಿಂದ ಗ್ರಾಹಕರ ಕಾಯ್ದೆಯನ್ನು ಅರಿತು ಅದರ ಮಹತ್ವವನ್ನು ಜನಸಾಮಾನ್ಯರಿಗೆ ತಿಳಿಸಬೇಕಾಗಿದೆ. ನೊಂದ ಗ್ರಾಹಕರು ನ್ಯಾಯ ಪಡೆಯುವಲ್ಲಿ ಪ್ರಮುಖ ಪಾತ್ರ ವಹಿಸಬೇಕು. ವಿದ್ಯಾರ್ಥಿಗಳು ಗ್ರಾಹಕರ ಹಕ್ಕುಗಳ ಕುರಿತು ವಿಶೇಷ ಜ್ಞಾನ ಪಡೆಯಲು ಶಿಕ್ಷಕರು ಶ್ರಮಿಸಬೇಕು ಎಂದರು.

ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ ಮಾತನಾಡಿ, ವಸ್ತು, ಸೇವೆಗಳ ಖರೀದಿಗೂ ಮುನ್ನ ಅದರಲ್ಲಿನ ನಿಬಂಧನೆ, ಷರತ್ತುಗಳನ್ನು ಓದುವ ತಾಳ್ಮೆಯೂ ನಮ್ಮಲ್ಲಿ ಇಲ್ಲದಂತಾಗಿದೆ. ಹಾಗಾಗಿ ಗ್ರಾಹಕರ ಶೋಷಣೆ ದ್ವಿಗುಣಗೊಳ್ಳುತ್ತಲೇ ಇದೆ. ವಂಚಿಸುವ ಸಂಸ್ಥೆಗಳನ್ನು ಶಿಕ್ಷಿಸಲು ಕಠಿಣ ಕಾನೂನಿನ ಅಗತ್ಯವಿದೆ. ಅಲ್ಲದೆ, ಗ್ರಾಹಕರ ಹಕ್ಕುಗಳ ಬಗ್ಗೆ ಜಾಗೃತಿ ಮೂಡಿಸಿ, ಅವರನ್ನು ಸುಶಿಕ್ಷಿತರನ್ನಾಗಿಸುವ ನಿಟ್ಟಿನಲ್ಲಿ ಅಖಿಲ ಭಾರತೀಯ ಗ್ರಾಹಕ ಪಂಚಾಯತ್ ಗ್ರಾಹಕರ ಸಮಸ್ಯೆಗಳಿಗೆ ಸೂಕ್ತ ಪರಿಹಾರ ನೀಡುವಲ್ಲಿ ಮುತುವರ್ಜಿ ವಹಿಸಬೇಕು ಎಂದು ಹೇಳಿದರು.

ಅಖಿಲ ಭಾರತಿಯ ಗ್ರಾಹಕ ಪಂಚಾಯತ್ ಮೈಸೂರು ಘಟಕದ ಅಧ್ಯಕ್ಷ ಡಾ.ಜಿ.ವಿ.ರವಿಶಂಕರ್, ಸಂಘಟನಾ ಕಾರ್ಯದರ್ಶಿ ವಿಕ್ರಂ ಅಯ್ಯಂಗಾರ್, ಹಿರಿಯ ಸದಸ್ಯ ರಂಗನಾಥ್, ಕಾರ್ಯದರ್ಶಿ ರವಿಶಂಕರ್, ಚಕ್ರಪಾಣಿ, ಮಲ್ಲಿಕಾರ್ಜುನಸ್ವಾಮಿ ಇನ್ನಿತರರು ಉಪಸ್ಥಿತರಿದ್ದರು.

ಮಾಸಾಂತ್ಯಕ್ಕೆ ಮೈಸೂರು–ಬೆಂಗಳೂರು ಸೇರಿ ರಾಜ್ಯದ ಪ್ರಮುಖ ನಗರಗಳಲ್ಲಿ ಇ–ಬಸ್ ಸಂಚಾರ

ಬೆಂಗಳೂರು: ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ತನ್ನ ಮಹತ್ವಾಕಾಂಕ್ಷೆಯ ಅಂತರ ನಗರ ಎಲೆಕ್ಟ್ರಿಕ್ ಬಸ್ ಸೇವೆಯನ್ನು ಡಿಸೆಂಬರ್ ಅಂತ್ಯದೊಳಗೆ ಆರಂಭಿಸಲು ಸಿದ್ಧವಾಗಿದೆ. ಮೊದಲ ಬಸ್ ನ್ನು ಹೈದರಾಬಾದ್ ಮೂಲದ ಎಲೆಕ್ಟ್ರಿಕ್ ಬಸ್ ತಯಾರಕ ಒಲೆಕ್ಟ್ರಾ ಗ್ರೀನ್‌ಟೆಕ್ ಲಿಮಿಟೆಡ್ ಮುಂದಿನ ವಾರದ ಆರಂಭದಲ್ಲಿ ತಲುಪಿಸುವ ನಿರೀಕ್ಷೆಯಿದೆ.



ಕೇಂದ್ರ ಸರ್ಕಾರದ ವೇಗದ ಅಳವಡಿಕೆ ಮತ್ತು ವಿದ್ಯುತ್ ವಾಹನಗಳ ಉತ್ಪಾದನೆ ಯೋಜನೆಯಡಿ ಕನಿಷ್ಠ ಆರು ಮಾರ್ಗಗಳಲ್ಲಿ ಬಸ್‌ಗಳನ್ನು ಓಡಿಸಲು ಯೋಜಿಸಲಾಗಿದ್ದರೂ, ಮೊದಲ ಬಸ್ ಈ ತಿಂಗಳ ಅಂತ್ಯದ ವೇಳೆಗೆ ಬೆಂಗಳೂರು ಮತ್ತು ಮೈಸೂರು ನಡುವೆ ಸಂಚರಿಸುವ ಸಾಧ್ಯತೆಯಿದೆ.

ಮುಂದಿನ ವಾರದಲ್ಲಿ ಮೊದಲ ಇ–ಬಸ್ ನ್ನು ಸಾರಿಗೆ ನಿಗಮಕ್ಕೆ ತಲುಪಿಸುವ ನಿರೀಕ್ಷೆಯಿದೆ. ಅದನ್ನು ಪರೀಕ್ಷಿಸಲು ಮತ್ತು ಬೆಂಗಳೂರು–ಮೈಸೂರು ಮಾರ್ಗದಲ್ಲಿ ಇಂಟರ್‌ಸಿಟಿ ಕಾರ್ಯಾಚರಣೆಯನ್ನು ಪ್ರಾರಂಭಿಸಲು ಯೋಜಿಸಲಾಗಿದೆ ಎಂದು ಹಿರಿಯ ಕೆಎಸ್‌ಆರ್‌ಟಿಸಿ ಅಧಿಕಾರಿಯೊಬ್ಬರು ಟಿಎನ್‌ಐಇಗೆ ತಿಳಿಸಿದ್ದಾರೆ.

ಸಾರಿಗೆ ನಿಗಮವು 50 ಎಲೆಕ್ಟ್ರಿಕ್ ಬಸ್‌ಗಳಿಗೆ ಆರ್ಡರ್ ಮಾಡಿದ್ದು, ಡಿಸೆಂಬರ್ ಅಂತ್ಯದೊಳಗೆ ಅವುಗಳನ್ನು ವಿತರಿಸುವ ನಿರೀಕ್ಷೆಯಿದೆ ಎಂದು ಅಧಿಕಾರಿ ಹೇಳಿದರು. ಪ್ರತಿ ಇ–ಬಸ್‌ನ ಬೆಲೆ ಸುಮಾರು 1.8 ಕೋಟಿ ರೂಪಾಯಿ ಮತ್ತು ವೋಲ್ವೋ ಬಸ್‌ಗಳಂತೆಯೇ 43 ಪುಶ್–ಬ್ಯಾಕ್ ಸೀಟುಗಳು, ವೈಯಕ್ತಿಕ ಚಾರ್ಜಿಂಗ್ ಪಾಯಿಂಟ್‌ಗಳು ಮತ್ತು ಎಸಿ ವೆಂಟ್‌ಗಳನ್ನು ಹೊಂದಿರುತ್ತದೆ. ಗ್ರಾಸ್ ಕಾಸ್ಟ್ ಕಾಂಟ್ರಾಕ್ಟ್ (GCC) ಅಡಿಯಲ್ಲಿ ಖಾಸಗಿ ಆಪರೇಟರ್ ಒಲೆಕ್ಟ್ರಾ ಬಸ್‌ಗಳನ್ನು ನಿರ್ವಹಿಸಿದರೆ, ಕೆಎಸ್‌ಆರ್‌ಟಿಸಿ ಪ್ರತಿ ಕಿ.ಮೀಗೆ ಕಾರ್ಯಾಚರಣೆ ವೆಚ್ಚ 55 ರೂಪಾಯಿಯಾಗಿದೆ. ಆರಂಭಿಕ ಹಂತದಲ್ಲಿ 250 ಕಿಮೀ ದಾಟದ ಮಾರ್ಗಗಳಲ್ಲಿ ಬಸ್‌ಗಳನ್ನು ಓಡಿಸುತ್ತೇವೆ. ಎಲೆಕ್ಟ್ರಿಕ್ ಬಸ್‌ಗಳು ಒಂದೇ ಚಾರ್ಜ್‌ನಲ್ಲಿ 250 ಕಿಮೀ ಕ್ರಮಿಸುವ ಸಾಮರ್ಥ್ಯದೊಂದಿಗೆ ಬರಲಿವೆ. ಬೆಂಗಳೂರಿನಿಂದ ಮೈಸೂರು, ತುಮಕೂರು, ಹಾಸನ ಮತ್ತು ಚಿತ್ರದುರ್ಗದಂತಹ ಸ್ಥಳಗಳಿಗೆ ಬಸ್‌ಗಳು ಕಾರ್ಯನಿರ್ವಹಿಸಲಿವೆ. ಉದ್ದದ ಮಾರ್ಗಗಳಲ್ಲಿ ಚಾರ್ಜಿಂಗ್ ಸ್ಟೇಷನ್‌ಗಳಂತಹ ಅಗತ್ಯ ಮೂಲಸೌಕರ್ಯಗಳನ್ನು ನಿರ್ಮಿಸುವ ಕಾರ್ಯ ಪ್ರಗತಿಯಲ್ಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಜ.2 ರಿಂದ 11 ರವರೆಗೆ ಕೂಡಲ ಸಂಗಮದಿಂದ ಬೆಂಗಳೂರು ಫ್ರೀಡಂ ಪಾರ್ಕ್‌ವರೆಗೆ

ಸಮಾಜ ಪರಿವರ್ತನಾ ಸತ್ಯಾಗ್ರಹ ಯಾತ್ರೆ: ಎಸ್.ಆರ್.ಹಿರೇಮಠ್

ಮೈಸೂರು, ಡಿ.16(ಆರ್‌ಕೆಬಿ)– ಜನಾಂದೋಲನ ಮಹಾ ಮೈತ್ರಿ, ಸಿಟಿಜನ್ ಫಾರ್ ಡೆಮಾಕ್ರಸಿ, ಜನತಂತ್ರ ಪ್ರಯೋಗ ಶಾಲೆ ಆಶ್ರಯದಲ್ಲಿ ಜನವರಿ 2ರಿಂದ 11ರವರೆಗೆ ಬಾಗಲಕೋಟೆಯ ಕೂಡಲಸಂಗಮದಿಂದ ಬೆಂಗಳೂರಿನ ಫ್ರೀಡಂ ಪಾರ್ಕ್‌ವರೆಗೆ 'ಸಮಾಜ ಪರಿವರ್ತನಾ ಸತ್ಯಾಗ್ರಹ ಯಾತ್ರೆ' ಆಯೋಜಿಸಿರುವುದಾಗಿ ಜನಾಂದೋಲನ ಮಹಾಮೈತ್ರಿಯ ಮುಖ್ಯಸ್ಥ ಎಸ್.ಆರ್.ಹಿರೇಮಠ್ ತಿಳಿಸಿದರು.



ಮೈಸೂರು ಪತ್ರಕರ್ತರ ಭವನದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೂಡಲಸಂಗಮದಿಂದ ಪ್ರಧಾನ ಜಾಥಾ ಸೇರಿದಂತೆ ನಾಲ್ಕು ದಿಕ್ಕಿನಿಂದ ಜಾಥಾ ಸಂಚರಿಸಿ, ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಜ.11ರಂದು ಬೆಳಗ್ಗೆ 11 ಗಂಟೆಗೆ ಸಮಾವೇಶಗೊಳ್ಳಲಿದೆ ಎಂದರು.

ಎಲ್ಲರನ್ನೂ ಒಳಗೊಳ್ಳುವ ಜನಪರ, ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ನೀತಿಗಾಗಿ, ಸಮಾಜವನ್ನು ಒಡೆದು ಆಳುವ ಜನ ವಿರೋಧಿ, ಫ್ಯಾಸಿಸ್ಟ್ ಸರ್ಕಾರವನ್ನು ಕಿತ್ತೊಗೆಯುವುದು, ದೀರ್ಘಾವಧಿಯಲ್ಲಿ ಹಿಂಸೆ, ಶೋಷಣೆ, ಅಸಮಾನತೆ ಆಧಾರಿತ ಸಮಾಜ ವ್ಯವಸ್ಥೆಯನ್ನು ಸಮತಾ ಸಮಾಜವಾಗಿ ಬದಲಾಯಿಸುವ ಅವಶ್ಯಕತೆಯನ್ನು ಜನರಲ್ಲಿ ಬಿತ್ತಲು ಈ ಯಾತ್ರೆ ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

ರೈತರು–ಕೂಲಿಕಾರರ ಕೇಂದ್ರಿತ ಪ್ರಧಾನ ಜಾಥಾ ಜ.2ರಂದು ಕೂಡಲಸಂಗಮದಿಂದ ಹೊರಟು 11ರಂದು ಬೆಂಗಳೂರು ತಲುಪಲಿದೆ. ಕೋಮು ಸೌಹಾರ್ದತೆ ಕೇಂದ್ರಿತ ಭಾವೈಕ್ಯತಾ ಜಾಥಾ ಜ.5ರಂದು ಮಂಗಳೂರಿನಿಂದ ಹೊರಟು 11ರಂದು ಬೆಂಗಳೂರು ಸೇರಲಿದೆ. ಸಾಮೂಹಿಕ ಭೂಮಿ ಸಂರಕ್ಷಣಾ ಕೇಂದ್ರಿತ ಜಾಥಾ ಜ.7ರಿಂದ ಜ.9ರವರೆಗೆ ಕುಸನೂರಿನಿಂದ ದಾವಣಗೆರೆ ತಲುಪಲಿದೆ. ಸಂವಿಧಾನ ರಕ್ಷಣೆ ಕೇಂದ್ರಿತ ಜಾಥಾ ಜ.9ರಿಂದ ಕೋಲಾರದಿಂದ ಹೊರಟು 11ರಂದು ಬೆಂಗಳೂರು ತಲುಪಲಿದೆ. ಹೀಗೆ ನಾಲ್ಕು ಕಡೆಯಿಂದ ಹೊರಡುವ ಜಾಥಾ ಬೆಂಗಳೂರಿನಲ್ಲಿ ಸಮಾಗಮ ಸತ್ಯಾಗ್ರಹ ಸಮಾವೇಶವಾಗಲಿವೆ ಎಂದರು.

ಈ ಸಂದರ್ಭದಲ್ಲಿ ರಾಜ್ಯ ಸರ್ಕಾರ ಮೂರು ಕರಾಳ ಕೃಷಿ ಕಾಯ್ದೆ ರದ್ದುಗೊಳಿಸಬೇಕು, ಕನಿಷ್ಠ ಬೆಂಬಲ ಬೆಲೆ ಹಾಗೂ ಪ್ರೊಕ್ಯೂರ್‌ಮೆಂಟ್ ನೀತಿಗಳನ್ನು ಕಾಯಿದೆ ಬದ್ಧಗೊಳಿಸಬೇಕು. ವಿದ್ಯುತ್ ಮಸೂದೆ ಕೈಬಿಡಬೇಕು. ಮನ್ರೇಗಾ ಕೆಲಸದ ದಿನಗಳನ್ನು 200ಕ್ಕೆ ಹೆಚ್ಚಿಸಿ ಕನಿಷ್ಠ 600 ರೂ., ಕೂಲಿ ನೀಡಬೇಕು. ದಲಿತರ ಮೇಲಿನ ಹಲ್ಲೆ ಮತ್ತು ಅಸ್ಪೃಶ್ಯತಾ ಆಚರಣೆಯನ್ನು ಕಠಿಣ ಕ್ರಮಗಳ ಮೂಲಕ ನಿಯಂತ್ರಿಸಬೇಕು, ಜನಸಾಮಾನ್ಯರ ಬದುಕನ್ನು ದಿವಾಳಿಯೆಬ್ಬಿಸುತ್ತಿರುವ ನಿರುದ್ಯೋಗ ಹಾಗೂ ಹಣದುಬ್ಬರ ನಿಯಂತ್ರಿಸಬೇಕು. ರಾಜ್ಯ ಸರ್ಕಾರ ಭೂಸ್ವಾಧೀನ ಕಾಯಿದೆ ರೂಪಿಸಬೇಕು. ಶಿಕ್ಷಣದ ಖಾಸಗೀಕರಣ, ಸಮಾಜದ ಕೋಮುವಾದೀಕರಣ ನಿಲ್ಲಿಸಿ, ಕರ್ನಾಟಕವನ್ನು ಸರ್ವಜನಾಂಗದ ಶಾಂತಿಯ ತೋಟವನ್ನಾಗಿಸಬೇಕು. ಕಾರ್ಮಿಕ ವಿರೋಧಿ ಕಾರ್ಪೊರೇಟ್ ಪರ ಲೇಬರ್ ಕೋಡ್‌ಗಳ ರದ್ದುಪಡಿಸಬೇಕು. ಈಗಾಗಲೇ ರದ್ದುಪಡಿಸಿರುವ ಕಾರ್ಮಿಕ ಕಾಯಿದೆ ಮರು ಸ್ಥಾಪಿಸಬೇಕು. ಸಾರ್ವಜನಿಕ ಉದ್ದಿಮೆಗಳ, ಸಾರ್ವಜನಿಕ ಭೂಮಿಯ ಖಾಸಗೀಕರಣ–ಮಾರಾಟ ನಿಲ್ಲಿಸಬೇಕು. ಮಹಿಳೆಯರ ಮೇಲಿನ ದೌರ್ಜನ್ಯ ತಡೆಗಟ್ಟಬೇಕು ಎಂಬ ಹಕ್ಕೊತ್ತಾಯಗಳನ್ನು ಮಂಡಿಸಲಾಗುತ್ತದೆ ಎಂದು ಹೇಳಿದರು.

ತಮ್ಮ ದಶಕಗಳ ಅವಧಿಯ ಸುದೀರ್ಘ ಹೋರಾಟಗಳೆಲ್ಲವೂ ಫಲ ಕೊಟ್ಟಿವೆ. ಈ ಯಾತ್ರೆಯನ್ನು ಚುನಾವಣಾ ವೇಳೆ ಎಂಬ ಕಾರಣಕ್ಕಾಗಿ ಕೈಗೊಂಡಿಲ್ಲ. ಕೇವಲ ನಿರಂತರ ಹೋರಾಟದ ಭಾಗವಾಗಿದೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಕೆ.ವಿ.ಭಟ್, ಹೊಸಕೋಟೆ ಬಸವರಾಜು, ಉಗ್ರನರಸಿಂಹೇಗೌಡ, ನಗರ್ಲೆ ವಿಜಯಕುಮಾರ್ ಉಪಸ್ಥಿತರಿದ್ದರು.

ನಂಜನಗೂಡು, ತಿ.ನರಸೀಪುರದಲ್ಲಿ

ಸೇವಾ ಕಾರ್ಯಗಳೊಂದಿಗೆ ಹೆಚ್‌ಡಿಕೆ ಹುಟ್ಟುಹಬ್ಬ ಆಚರಣೆ

● ಶ್ರೀಕಂಠೇಶ್ವರ, ಶ್ರೀಗುಂಜಾ ನರಸಿಂಹಸ್ವಾಮಿ ದೇವಾಲಯಗಳಲ್ಲಿ ವಿಶೇಷ ಪೂಜೆ ● ರೋಗಿಗಳಿಗೆ ಹಣ್ಣು ಹಂಪಲು, ಬ್ರೆಡ್ ವಿತರಣೆ





ನಂಜನಗೂಡು, ಡಿ.16– ಹೆಚ್.ಡಿ. ಕುಮಾರಸ್ವಾಮಿ ನಾಡು ಕಂಡ ಅತ್ಯಂತ ಜನಪ್ರಿಯ ಮುಖ್ಯಮಂತ್ರಿ. ಅವರ ಹುಟ್ಟುಹಬ್ಬವನ್ನು ಸೇವಾ ಕಾರ್ಯಗಳ ಮೂಲಕ ವಿನೂತನವಾಗಿ ಆಚರಿಸಲಾಗುತ್ತಿದೆ ಎಂದು ಜೆಡಿಎಸ್ ಜಿಲ್ಲಾಧ್ಯಕ್ಷ ನರಸಿಂಹಸ್ವಾಮಿ ಹೇಳಿದರು.

ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಹುಟ್ಟುಹಬ್ಬದ ಅಂಗವಾಗಿ ನಗರದ ಸಾರ್ವಜನಿಕ ಆಸ್ಪತ್ರೆ, ತಾಯಿ ಮತ್ತು ಮಕ್ಕಳ ಆಸ್ಪತ್ರೆಗಳಲ್ಲಿ ರೋಗಿಗಳಿಗೆ ಹಣ್ಣು, ಬ್ರೆಡ್ ಬಿಸ್ಕತ್ ವಿತರಿಸಿ ಅವರು ಮಾತನಾಡಿದರು.

ರಾಜ್ಯದಲ್ಲಿ ಬಡವರ ಸಂಕಷ್ಟ ನಿವಾರಣೆ ಮಾಡಬೇಕೆಂಬ ಸಂಕಲ್ಪದೊಂದಿಗೆ ಸರ್ಕಾರಿ ಆಸ್ಪತ್ರೆಗಳನ್ನು ಉನ್ನತೀಕರಿಸುವುದು, ಶಿಕ್ಷಣಕ್ಕೆ ಒತ್ತು ನೀಡುವುದು, ವಸತಿ ಕಾರ್ಯಕ್ರಮಗಳು ಸೇರಿದಂತೆ ಹೊಸ ಗುರಿಯೊಂದಿಗೆ ಪಂಚರತ್ನ ಕಾರ್ಯಕ್ರಮ ರೂಪಿಸಿ ಸಂಘಟನೆಯಲ್ಲಿ ತೊಡಗಿದ್ದಾರೆ. ಅವರು ಸ್ವಂತ ಬಲದಿಂದ ಅಧಿಕಾರಕ್ಕೆ ಬರಲಿ ಎಂದು ಶ್ರೀಕಂಠೇಶ್ವರನಲ್ಲಿ ಪ್ರಾರ್ಥನೆ ಮಾಡಲಾಗಿದೆ ಎಂದರು.

ನಂಜನಗೂಡು ಕ್ಷೇತ್ರದ ಟಿಕೇಟ್ ಆಕಾಂಕ್ಷಿ ಆರ್.ಮಾದೇಶ ಮಾತನಾಡಿ, ಹೆಚ್.ಡಿ. ಕುಮಾರಸ್ವಾಮಿ ಅವರು ರೈತಪರ ಕಾಳಜಿಯಿಂದ ರೈತರನ್ನು ಸಾಲ ಮುಕ್ತಗೊಳಿಸಿದ ಮಣ್ಣಿನ ಮಗ. ಅವರ ಹುಟ್ಟುಹಬ್ಬದ ಅಂಗವಾಗಿ ಶ್ರೀಕಂಠೇಶ್ವರ ದೇವಾಲಯದಲ್ಲಿ ವಿಶೇಷ ಪೂಜೆ ಸಲ್ಲಿಸಿ, ಅನ್ನಸಂತರ್ಪಣೆ ಹಾಗೂ ತಾಯಿ ಮತ್ತು ಮಕ್ಕಳ ಆಸ್ಪತ್ರೆ, ಸರ್ಕಾರಿ ಆಸ್ಪತ್ರೆಗಳಲ್ಲಿ ರೋಗಿಗಳಿಗೆ ಹಣ್ಣು ವಿತರಣೆಯಂತಹ ಸಾಮಾಜಿಕ ಕಾರ್ಯಕ್ರಮಗಳ ಮೂಲಕ ಹುಟ್ಟುಹಬ್ಬ ಆಚರಿಸಲಾಗುತ್ತಿದೆ ಎಂದರು.

ಜೆಡಿಎಸ್ ತಾಲೂಕು ಅಧ್ಯಕ್ಷ ಆರ್.ವಿ. ಮಹದೇವಸ್ವಾಮಿ, ಮುಖಂಡರಾದ ಪುನೀತ್, ಮಹದೇವು, ರಜತ್, ನಂಜಪ್ಪ, ಪ್ರಕಾಶ್, ಶಿವಕುಮಾರ್, ನಿತಿನ್, ಶ್ರೀಧರ್, ನಂಜನಾಯಕ, ಮಂಜೇಶ್, ರಾಜೇಶ್, ಸೌಂಧರ್ಯ ಸೇರಿದಂತೆ ಕಾರ್ಯಕರ್ತರು ಇದ್ದರು.

ತಿ.ನರಸೀಪುರ: ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರ ಹುಟ್ಟುಹಬ್ಬದ ಅಂಗವಾಗಿ ವರುಣಾ ಕ್ಷೇತ್ರದ ಜೆಡಿಎಸ್ ಕಾರ್ಯಕರ್ತರು ಪಟ್ಟಣದ ಸಾರ್ವಜನಿಕ ಆಸ್ಪತ್ರೆ ಹೊರ ರೋಗಿಗಳಿಗೆ ಹಣ್ಣು, ಬ್ರೆಡ್ ವಿತರಿಸಿದರು.

ಪಟ್ಟಣದ ಶ್ರೀಗುಂಜಾ ನರಸಿಂಹಸ್ವಾಮಿ ದೇವಸ್ಥಾನಕ್ಕೆ ತೆರಳಿದ ಜೆಡಿಎಸ್ ಕಾರ್ಯಕರ್ತರು ಹಾಗೂ ಹೆಚ್‌ಡಿಕೆ ಅಭಿಮಾನಿಗಳು ಕುಮಾರಸ್ವಾಮಿ ಅವರಿಗೆ ಹೆಚ್ಚಿನ ಆರೋಗ್ಯಕ್ಕಾಗಿ ಪ್ರಾರ್ಥನೆ ಸಲ್ಲಿಸಿ ವಿಶೇಷ ಪೂಜೆ ಸಲ್ಲಿಸಿ ಸಿಹಿ ಹಂಚಿ ಸಂಭ್ರಮಿಸಿದರು.

ವರುಣಾ ಕ್ಷೇತ್ರದ ನಿಕಟಪೂರ್ವ ಅಧ್ಯಕ್ಷ ತಾಯೂರು ಪ್ರಕಾಶ್, ಕ್ಷೇತ್ರಾಧ್ಯಕ್ಷ ಚಿನ್ನಸ್ವಾಮಿ, ಜಿಪಂ ಮಾಜಿ ಸದಸ್ಯ ಜಯಪಾಲ್ ಭರಣಿ, ಕೆಂಪಯ್ಯನಹುಂಡಿ ಚನ್ನೇಗೌಡ, ಎಂ.ಶಿವಪ್ರಸಾದ್, ಆರ್.ಬಸವರಾಜು, ಯುವ ಘಟಕದ ಉಪಾಧ್ಯಕ್ಷ ನಿಲಸೋಗೆ ಮಹೇಶ್, ಯಡದೊರೆ ಸತೀಶ್, ಅಬೀದ್ ಹುಸೇನ್, ಆಲಗೂಡು ಸತೀಶ್, ಹುನಗನಹಳ್ಳಿ ಚಂದ್ರು, ಮರಿದೇವೇಗೌಡ, ಹಿಟ್ಟುವಳ್ಳಿ ಪ್ರಭು, ವೆಂಕಟೇಶ್ ಪಾವು, ವೀರೇಂದ್ರ, ಮೂಗೂರು ಬಲ್ಲಯ್ಯ, ಭೈರಾಪುರ ಎಂ.ರಮೇಶ್, ತಿರುಮಕೂಡಲು ರವಿ, ಇಂಡವಾಳು ಸತೀಶ್, ಶಂಕರ, ಮಲ್ಲಿಕಾ, ಕೃಷ್ಣಾಪುರ ರಾಮಣ್ಣ, ಮರಿಸ್ವಾಮಿ ಸೇರಿದಂತೆ ಪಕ್ಷದ ಕಾರ್ಯಕರ್ತರು ಹಾಜರಿದ್ದರು.

ಹಾಡ್ಯ: ಗ್ರಾಪಂ ಕೆರೆಗಳ ಹರಾಜು



ಮಲ್ಲುಂಡಿ, ಡಿ.16– ನಂಜನಗೂಡು ತಾಲೂಕಿನ ಹಾಡ್ಯ ಗ್ರಾಪಂ ವ್ಯಾಪ್ತಿಯ ಕೆರೆಗಳ ಹರಾಜು ಪ್ರಕ್ರಿಯೆ ಗ್ರಾಪಂ ಅಧ್ಯಕ್ಷೆ ಮಹದೇವಮ್ಮ ಉಮೇಶ್ ಅಧ್ಯಕ್ಷತೆಯಲ್ಲಿ ನಡೆಯಿತು.

ಸತತ ಮಳೆಯಿಂದ ಗ್ರಾಮದ ಕೆರೆಗಳು ಭರ್ತಿಯಾಗಿರುವ ಹಿನ್ನೆಲೆಯಲ್ಲಿ ಮೀನು ಸಾಕಾಣಿಕೆಗೆ ಅನುಕೂಲವಾಗಲಿ ಎಂದು ಸರ್ಕಾರದ ಹರಾಜು 5 ಸಾವಿರದಂತೆ ಹರಾಜು ನಡೆಸಲಾಯಿತು. ಹಾಡ್ಯ ಗ್ರಾಮದ ದೊಡ್ಡ ಕೆರೆ 30 ಸಾವಿರ, ಚಿಕ್ಕಕೆರೆ 10 ಸಾವಿರಕ್ಕೆ ಹರಾಜು ಮಾಡಲಾಯಿತು. ಗ್ರಾಪಂ ಅಧ್ಯಕ್ಷೆ ಮಹದೇವಮ್ಮ ಮಾತನಾಡಿ, ಹಲವು ವರ್ಷಗಳಿಂದ ನೀರು ಇಲ್ಲದೆ ಕೆರೆಗಳು ಬತ್ತಿ ಹೋಗಿದ್ದವು. ಈ ಬಾರಿ ಉತ್ತಮ ಮಳೆಯಿಂದ ಕೆರೆಗಳು ತುಂಬಿವೆ. ಆದ್ದರಿಂದ ಪಂಚಾಯತಿ ವತಿಯಿಂದ ಮೀನು ಸಾಕಾಣಿಕೆಗೆ ಅವಕಾಶ ಕಲ್ಪಿಸಲಾಗಿದೆ ಎಂದರು.

ಗ್ರಾಪಂ ಸದಸ್ಯರಾದ ಕೃಷ್ಣ, ಮಹದೇವಸ್ವಾಮಿ, ಕೃಷ್ಣಮೂರ್ತಿ, ಪುಟ್ಟೇಗೌಡ, ಕೆರೆ ಬಿಟ್‌ದಾರ ಶಿವರುದ್ರ, ಪಿಡಿಓ ಕರಿಯಪ್ಪ, ಕಾರ್ಯದರ್ಶಿ ನಂಜುಂಡಯ್ಯ, ಮುಖಂಡ ಉಮೇಶ್ ಸೇರಿದಂತೆ ಪ್ರಮುಖರಿದ್ದರು.

ಹಿತರಕ್ಷಣಾ ಕಾಯ್ದೆ ಜಾರಿಗೆ ಆಗ್ರಹಿಸಿ ವಕೀಲರಿಂದ ಪ್ರತಿಭಟನೆ



ಕೆ.ಆರ್.ನಗರ, ಡಿ.16– ಸಮಸ್ತ ವಕೀಲರ ಹಿತರಕ್ಷಣ ಕಾಯ್ದೆ ಜಾರಿಗೆ ಒತ್ತಾಯಿಸಿ ಕೆ.ಆರ್.ನಗರ ತಾಲೂಕು ವಕೀಲರ ಸಂಘದ ವಕೀಲರು ಕಲಾಪ ಬಹಿಷ್ಕರಿಸಿ, ಪಟ್ಟಣದಲ್ಲಿ ಪ್ರತಿಭಟನೆ ಮಾಡಿದರು.

ವಕೀಲರ ಸಂಘದ ಅಧ್ಯಕ್ಷ ಕೆ.ಎಸ್. ದಿಲೀಪ್ ನೇತೃತ್ವದಲ್ಲಿ ವಕೀಲರು ನ್ಯಾಯಾಲಯದ ಆವರಣದಿಂದ ವಿ.ವಿ.ರಸ್ತೆ ಮೂಲಕ ಬಂದು ಡಾ.ಬಿ.ಆರ್.ಅಂಬೇಡ್ಕರ್ ಪುತ್ಥಳಿಗೆ ಮಾಲಾರ್ಪಣೆ ಮಾಡಿ, ಶೀಘ್ರ ಕಾಯ್ದೆ ಜಾರಿಗೆ ತರುವಂತೆ ಸರ್ಕಾರವನ್ನು ಆಗ್ರಹಿಸಿದರು. ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅಧ್ಯಕ್ಷ ಕೆ.ಎಸ್. ದಿಲೀಪ್, ಕರ್ನಾಟಕ ರಾಜ್ಯ ವಕೀಲರ ಪರಿಷತ್ತು ರಾಜ್ಯ ಸರ್ಕಾರಕ್ಕೆ ಕಳೆದ ವರ್ಷವೇ ವಕೀಲರ ಸಂರಕ್ಷಣಾ ಕಾಯ್ದೆ ಕರಡು ಪ್ರತಿಯನ್ನು ಸಲ್ಲಿಸಿದೆ. ಆದರೆ ಈವರೆಗೂ ಮುಖ್ಯಮಂತ್ರಿಗಳು ಯಾವುದೇ ತೀರ್ಮಾನಕ್ಕೆ ಕೈ ಗೊಂಡಿಲ್ಲ ಬೆಳಗಾವಿಯಲ್ಲಿ ಚಳಿಗಾಲದ ಅಧಿವೇಶನದಲ್ಲಿ ಮಂಡನೆ ಮಾಡಿ ಉಭಯ ಸದನಗಳ ಒಪ್ಪಿಗೆ ಪಡೆದು ಜಾರಿಗೆ ತರಬೇಕು ಎಂದು ಮನವಿ ಮಾಡಿದರು.

ತಹಶೀಲ್ದಾರ್ ಎಸ್.ಸಂತೋಷ್ ಅವರಿಗೆ ಮನವಿ ಪತ್ರ ಸಲ್ಲಿಸಲಾಯಿತು. ಸಂಘದ ಉಪಾಧ್ಯಕ್ಷ ಸಿ.ಕೆ.ಮಂಜುನಾಥ್, ಕಾರ್ಯದರ್ಶಿ ಜಿ.ಕೆ.ನೂತನ್ ಕುಮಾರ್, ವಕೀಲರಾದ ಪ್ರಕಾಶ್, ಎಸ್.ಎಸ್.ಗಾಂಧಿ, ಎನ್.ಪ್ರಸಾದ್, ತಿಮ್ಮಪ್ಪ, ಕೆ.ಎನ್.ಸತೀಶ್, ಪೂರ್ಣಿಮಾ ಗುರುಶಾಂತಪ್ಪ, ಬಿ.ಎಸ್.ಶಿವಶಂಕರ್, ಮಹೇಶ್, ಚೇತನ್, ಡಿ.ಸಿ.ಗೋವಿಂದರಾಜು, ಪಿ.ವಿಶ್ವನಾಥ್, ಕೆ.ಪಿ.ಮಂಜುನಾಥ್, ಡಿ.ಆರ್. ರಮೇಶ್, ಕೆ.ಸಿ.ಹರೀಶ್, ಟಿ.ತಿಮ್ಮನಗೌಡರು, ಚಂದ್ರಮೌಳಿ ಸೇರಿದಂತೆ ಇತರರಿದ್ದರು.

ವಿಜಯೇಂದ್ರ ಗೆಲುವು ಖಚಿತ: ಆಲಗೂಡು ಮಂಜು



ತಿ.ನರಸೀಪುರ, ಡಿ.16– ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ವರುಣಾ ಕ್ಷೇತ್ರದಿಂದ ಸ್ಪರ್ಧಿಸಿದರೆ ಬಿ.ವೈ.ವಿಜಯೇಂದ್ರ ಅವರ ಗೆಲುವು ತಡೆಯಲು ಯಾರಿಂದಲೂ ಸಾಧ್ಯವಿಲ್ಲ ಎಂದು ಜಿಲ್ಲಾ ಬಿಜೆಪಿ ಎಸ್‌ಸಿ ಮೋರ್ಚಾ ಉಪಾಧ್ಯಕ್ಷ ಆಲಗೂಡು ಮಂಜು ಹೇಳಿದರು.

ಪಟ್ಟಣದ ಕಬಿನಿ ಅತಿಥಿ ಗೃಹದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಪಟ್ಟಣದ ಪುರಸಭೆ ಮಾಜಿ ಅಧ್ಯಕ್ಷ ಮದನ್ ರಾಜ್ ಅವರು ವಿಜಯೇಂದ್ರ ವರುಣಾ ಕ್ಷೇತ್ರದಲ್ಲಿ ಗೆದ್ದರೆ ರಾಜಕೀಯ ಸನ್ಯಾಸ ಸ್ವೀಕರಿಸುವುದಾಗಿ ನೀಡಿದ್ದ ಹೇಳಿಕೆಗೆ ಪ್ರತಿಕ್ರಿಯೆ ನೀಡಿದ ಅವರು ಮದನ್‌ರಾಜ್ ರಾಜಕೀಯ ಸನ್ಯಾಸತ್ವ ಸ್ವೀಕರಿಸಲು ಸಿದ್ದರಾಗಿರಲಿ ಎಂದು ವ್ಯಂಗ್ಯವಾಡಿದರು.

ಕಳೆದ ಚುನಾವಣೆಯಲ್ಲಿ ಡಾ.ಜಿ. ಪರಮೇಶ್ವರ್ ಅವರ ಅಧ್ಯಕ್ಷತೆಯಲ್ಲಿ ದಲಿತರ ಹೆಸರಲ್ಲಿ ಮುಖ್ಯಮಂತ್ರಿ ಹುದ್ದೆಗೇರಿದ ಸಿದ್ದರಾಮಯ್ಯ ಒಂದೇ ಒಂದು ವರ್ಷವು ದಲಿತರಿಗೆ ಮುಖ್ಯಮಂತ್ರಿಯಾಗಲು ಅವಕಾಶ ನೀಡದೇ ಅಧಿಕಾರ ದಾಹ ಪ್ರದರ್ಶನ ಮಾಡಿದ್ದರು ಎಂದು ಮಂಜು ಆರೋಪಿಸಿದರು.

ಹಿಂದುಳಿದ ವರ್ಗಗಳ ಉಪಾಧ್ಯಕ್ಷ ಕುಪ್ಯ ಎಂ.ಮಹದೇವಯ್ಯ, ಮೂಗೂರು ಜಯಣ್ಣ, ನಂದಕುಮಾರ್, ನಿರಂಜನ್ ಗೋಷ್ಠಿಯಲ್ಲಿದ್ದರು.

ಶ್ರೀಕಂಠೇಶ್ವರನ ಹುಂಡಿಯಲ್ಲಿ 2.40 ಕೋಟಿ ಸಂಗ್ರಹ



ನಂಜನಗೂಡು, ಡಿ.16– ಶ್ರೀಕಂಠೇಶ್ವರ ದೇವಾಲಯದ 26 ಹುಂಡಿಗಳಲ್ಲಿ 2.40 ಕೋಟಿ ರೂ. ಸಂಗ್ರಹವಾಗಿದೆ. ದಾಸೋಹ ಭವನದಲ್ಲಿ ಶುಕ್ರವಾರ ಹುಂಡಿಗಳನ್ನು ತೆರೆದು ಎಣಿಕೆ ಕಾರ್ಯ ನಡೆಸಲಾಯಿತು.

ಹುಂಡಿಯಲ್ಲಿ ನಗದು 2,40,96,139, ಚಿನ್ನ 194.8 ಗ್ರಾಂ, 5.5 ಕೆಜಿ ಬೆಳ್ಳಿ ಹಾಗೂ 31 ವಿದೇಶಿ ಕರೆನ್ಸಿಗಳು ದೊರೆತಿವೆ. ಸಿಂಗಾಪುರದ 20 ಡಾಲರ್, ಇಂಗ್ಲೆಂಡ್ 10 ಪೌಂಡ್ಸ್, ಯುರೋಪಿನ 35 ಯುರೋ, ಸೌದಿಯ 5 ರಿಯಲ್, ರಿಕ್ಸ್ ಬ್ಯಾಂಕ್ 500, ಅರಬ್ ಎಮಿರೇಟ್ಸ್‌ನ 10 ಧರಮ್, ಯುಎಸ್‌ಎನ 82 ಪೌಂಡ್ಸ್ ದೊರೆತಿವೆ. ಬ್ಯಾಂಕ್ ಆಫ್ ಬರೋಡಾ ಸಿಬ್ಬಂದಿ ಹಾಗೂ ದೇವಾಲಯದ ಸಿಬ್ಬಂದಿ ನೂರಕ್ಕೂ ಹೆಚ್ಚು ಸ್ವಸಹಾಯ ಸಂಘದ ಮಹಿಳಾ ಸದಸ್ಯೆಯರು ಹುಂಡಿ ಹಣ ಎಣಿಕೆ ಕಾರ್ಯದಲ್ಲಿ ನೆರವಾದರು. ಉಪವಿಭಾಗಾಧಿಕಾರಿ ಕಮಲಾಬಾಯಿ, ದೇವಾಲಯದ ಇಓ ಜಗದೀಶ್ ಕುಮಾರ್, ಎಇಓ ವೆಂಕಟೇಶ್ ಪ್ರಸಾದ್, ಲೆಕ್ಕಾಧಿಕಾರಿ ಗುರುಮಲ್ಲಯ್ಯ, ಬ್ಯಾಂಕ್ ಆಫ್ ಬರೋಡಾದ ವ್ಯವಸ್ಥಾಪಕ ಟಿ.ಕೆ.ನಾಯಕ್ ಉಪಸ್ಥಿತರಿದ್ದರು.

ಅಪಘಾತದಲ್ಲಿ ಗಾಯಗೊಂಡಿದ್ದ ವಿದ್ಯಾರ್ಥಿಗಳಿಗೆ ಚಿಕಿತ್ಸೆ

ಹುಣಸೂರು, ಡಿ.16– ತಾಲೂಕಿನ ಧರ್ಮಾಪುರ ಸರ್ಕಾರಿ ಪ್ರೌಢಶಾಲೆ ವಿದ್ಯಾರ್ಥಿಗಳು ಪ್ರವಾಸಕ್ಕೆ ತೆರಳಿದ ವೇಳೆ ಶಿವಮೊಗ್ಗ ಜಿಲ್ಲೆ ಸಾಗರದ ಬಳಿ ಶುಕ್ರವಾರ ಶಾಲಾ ಬಸ್ ಅಪಘಾತಕ್ಕೀಡಾಗಿ ಗಾಯಗೊಂಡಿದ್ದ ವಿದ್ಯಾರ್ಥಿಗಳು ಇಂದು ಹುಣಸೂರಿನ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದರು. ತೀವ್ರವಾಗಿ ಗಾಯಗೊಂಡಿದ್ದವರನ್ನು ಮೈಸೂರಿನ ಜಿಲ್ಲಾ ಆಸ್ಪತ್ರೆಗೆ ಕಳುಹಿಸಲಾಗಿದೆ.



ಗಾಯಗೊಂಡವರಲ್ಲಿ ಅಮೃತ, ಪಲ್ಲವಿ, ದಿವ್ಯ ಎಲ್.ಭರತ್, ಅಮೂಲ್ಯ, ಲಕ್ಷ್ಮಿ, ಐಶ್ವರ್ಯ ಎಸ್.ಪ್ರಿಯದರ್ಶಿನಿ, ಐಶ್ವರ್ಯ ಕೆ.ರಮ್ಯ, ಸಹನಾ, ರಾಜೇಶ್, ದಿವ್ಯ ಕೆ. ಹಾಗೂ ಲಾವಣ್ಯ ಮತ್ತು ಮುಖ್ಯ ಶಿಕ್ಷಕ ಶಿವರುದ್ರಪ್ಪ ಅವರುಗಳನ್ನು ಆಸ್ಪತ್ರೆಗೆ ಸೇರಿಸಿ ಚಿಕಿತ್ಸೆ ನೀಡಲಾಯಿತು.

ಮೈಸೂರು ಜಿಲ್ಲಾ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರ ಕಚೇರಿ ಶಿಕ್ಷಣಾಧಿಕಾರಿ ಕಮಲಮ್ಮ, ಕ್ಷೇತ್ರ ಶಿಕ್ಷಣಾಧಿಕಾರಿ ರೇವಣ್ಣ, ಕ್ಷೇತ್ರ ಸಮನ್ವಯಾಧಿಕಾರಿ ಸಂತೋಷ್, ದೈಹಿಕ ಶಿಕ್ಷಣಾಧಿಕಾರಿ ಲೋಕೇಶ್, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಮಾಜಿ ಅಧ್ಯಕ್ಷ ಸ್ವಾಮಿ, ಬಿಆರ್‌ಸಿಗಳಾದ ನರಸಿಂಹ, ರಂಗಸ್ವಾಮಿ ಹಾಗೂ ಬಿಇಓ ಕಚೇರಿ ಸಿಬ್ಬಂದಿ ಬೆಳಗ್ಗೆಯಿಂದ ಸಂಜೆಯವರೆಗೂ ಆಸ್ಪತ್ರೆಯಲ್ಲಿ ನಿಂತು ಎಲ್ಲಾ ಮಕ್ಕಳಿಗೂ ಚಿಕಿತ್ಸೆ ಕೊಡಿಸಿ ವಿದ್ಯಾರ್ಥಿಗಳನ್ನು ಮನೆಗಳಿಗೆ ಕಳುಹಿಸಿದರು.

ಸೂಕ್ತ ಬಸ್ ವ್ಯವಸ್ಥೆಗೆ ಆಗ್ರಹಿಸಿ ವಿದ್ಯಾರ್ಥಿಗಳ ಪ್ರತಿಭಟನೆ



ಸರಗೂರು, ಡಿ.16– ಸರಗೂರಿನಿಂದ ಮೈಸೂರಿಗೆ ಹಾಗೂ ಕಾಡಂಚಿನ ಗ್ರಾಮಗಳಿಂದ ಪಟ್ಟಣಕ್ಕೆ ಶಾಲಾ ಸಮಯಕ್ಕೆ ವ್ಯವಸ್ಥಿತವಾಗಿ ಬಸ್ ವ್ಯವಸ್ಥೆ ಮಾಡುವಂತೆ ಒತ್ತಾಯಿಸಿ ಶುಕ್ರವಾರ ಬಸ್ ನಿಲ್ದಾಣದಲ್ಲಿ ನೂರಾರು ಶಾಲಾ ವಿದ್ಯಾರ್ಥಿಗಳು 2 ಗಂಟೆಗೂ ಹೆಚ್ಚು ಸಮಯ ಬಸ್ ತಡೆದು ಪ್ರತಿಭಟನೆ ನಡೆಸಿದರು.

ಸರಗೂರಿನಿಂದ ನೂರಾರು ವಿದ್ಯಾರ್ಥಿಗಳು ಮೈಸೂರಿಗೆ ಓದಲು ಹೋಗುತ್ತಾರೆ, ಆದರೆ, ಬೆಳಗ್ಗೆ ಬಸ್‌ಗಳ ವ್ಯವಸ್ಥೆ ಸರಿಯಿಲ್ಲದ ಕಾರಣ ದಿನ ತಡವಾಗಿ ಶಾಲೆಗೆ ಹೋಗುವುದರಿಂದ ಶಿಕ್ಷಣಕ್ಕೆ ತೊಂದರೆ ಆಗುತ್ತಿದೆ. ಸಮಸ್ಯೆ ಕುರಿತು ಹಲವು ಸಲ ಬಸ್ ನಿಲ್ದಾಣದ ಅಧಿಕಾರಿಗಳ ಗಮನಕ್ಕೆ ತಂದರೂ ಪ್ರಯೋಜವಾಗಿಲ್ಲ. ಸಮಸ್ಯೆ ಬಗೆಹರಿಸುವ ಮನಸ್ಸು ಮಾಡುತ್ತಿಲ್ಲ ಎಂದು ವಿದ್ಯಾರ್ಥಿಗಳು ತೀವ್ರವಾಗಿ ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನಾ ಸ್ಥಳಕ್ಕಾಗಮಿಸಿದ ಹೆಚ್.ಡಿ. ಕೋಟೆ ಡಿಪೋ ಮ್ಯಾನೇಜರ್ ತ್ಯಾಗರಾಜ್ ಮಾತನಾಡಿ, ಸರಗೂರು ಹಾಗೂ ಗ್ರಾಮೀಣ ಭಾಗಕ್ಕೆ ಬೇಕಾಗುವ ಬಸ್ ಸೌಲಭ್ಯ ಒದಗಿಸಲಾಗುವುದು. ಸೂಕ್ತ ಸಮಯಕ್ಕೆ ಬಸ್ ಇಲ್ಲದಿರುವುದು ಗಮನಕ್ಕೆ ಬಂದಿದ್ದು, ಅಧಿಕಾರಿಗಳ ಗಮನಕ್ಕೆ ತಂದು ಸಮಸ್ಯೆ ಬಗೆಹರಿಸಲಾಗುವುದು ಎಂದರು.

ಪಪಂ ಸದಸ್ಯ ಶ್ರೀನಿವಾಸ್ ಮಾತನಾಡಿ, ತಾಲೂಕಿನಲ್ಲಿ ಹೆಚ್ಚು ಗ್ರಾಮಗಳು ಕಾಡಂಚಿನಲ್ಲಿದ್ದು ಬೆಳಗ್ಗೆ ಹಾಗೂ ಸಂಜೆ ನಿಗದಿತ ಸಮಯಕ್ಕೆ ಬಸ್ ಕಲ್ಪಿಸಿ ಗ್ರಾಮೀಣ ಭಾಗದ ಪ್ರಯಾಣಿಕರಿಗೆ ಹಾಗೂ ವಿದ್ಯಾರ್ಥಿಗಳಿಗೆ ಅನುಕೂಲ ಮಾಡಬೇಕು ಎಂದರು. ಪ್ರತಿಭಟನೆಯಲ್ಲಿ ಹೆಚ್.ಎಸ್.ರಮೇಶ್, ಜೆಡಿಎಸ್ ಮುಖಂಡ ಎಂ.ನಾಗರಾಜು, ಬಸವರಾಜು, ಲಕ್ಷ್ಮಣ, ರಘು, ಪ್ರಕಾಶ್, ಶಾಲಾ ಕಾಲೇಜು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಹೆಚ್‌ಡಿಎಫ್‌ಸಿ ಬ್ಯಾಂಕ್ ಶಾಖೆ ಉದ್ಘಾಟನೆ



ತಿ.ನರಸೀಪುರ, ಡಿ.16– ಗ್ರಾಮೀಣ ಜನರಿಗೆ ಹಣಕಾಸಿನ ವ್ಯವಹಾರವನ್ನು ಸುಲಲಿತವಾಗಿ ನಡೆಸಲು ಬ್ಯಾಂಕ್‌ಗಳು ತಾಲೂಕು ಕೇಂದ್ರಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಶಾಖೆಯನ್ನು ತೆರೆಯಬೇಕು ಎಂದು ಪಿಕಾರ್ಡ್ ಬ್ಯಾಂಕ್ ಮಾಜಿ ಅಧ್ಯಕ್ಷ, ಹಾಲಿ ಸದಸ್ಯ ಕೆ.ವಜ್ರೇಗೌಡ ಹೇಳಿದರು.

ಪಟ್ಟಣದ ಶ್ರೀ ಮಹದೇಶ್ವರ ಪ್ಲಾಜಾದಲ್ಲಿ ಹೆಚ್‌ಡಿಎಫ್‌ಸಿ ಬ್ಯಾಂಕ್ ಶಾಖೆ ಮತ್ತು ಎಟಿಎಂ ಕೇಂದ್ರವನ್ನು ಸ್ಥಳೀಯ ಉದ್ಯಮಿಗಳ ಜತೆ ಉದ್ಘಾಟಿಸಿ ಮಾತನಾಡಿದ ಅವರು, ಬ್ಯಾಂಕ್‌ಗಳ ವಿಲೀನಗೊಳಿಸಿದ ಕೇಂದ್ರ ಸರ್ಕಾರದ ಕ್ರಮದಿಂದ ಬ್ಯಾಂಕ್‌ಗಳಲ್ಲಿ ಒತ್ತಡ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಬ್ಯಾಂಕ್‌ಗಳು ಇನ್ನೂ ಶಾಖೆಗಳನ್ನು ತೆರೆಯುವ ಅಗತ್ಯವಿದೆ ಎಂದರು.

ತಹಶೀಲ್ದಾರ್ ಸಿ.ಜಿ.ಗೀತಾ ಮಾತನಾಡಿ, ನಗರ ಪ್ರದೇಶಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಹೆಚ್‌ಡಿಎಫ್‌ಸಿ ಬ್ಯಾಂಕ್ ಈಗ ಗ್ರಾಮೀಣ ಜನರಿಗೆ ಬ್ಯಾಂಕಿಂಗ್ ಸೇವೆ ನೀಡಲು ಪಟ್ಟಣದಲ್ಲಿಯೂ ಆರಂಭವಾಗಿರುವುದು ಹೆಮ್ಮೆಯ ವಿಷಯ ಎಂದು ತಿಳಿಸಿದರು.

ಬ್ಯಾಂಕ್ ಕ್ಲಸ್ಟರ್ ಮುಖ್ಯಸ್ಥ ಅಶೋಕ್ ರಾವ್ ಮಾತನಾಡಿ, ಮೈಸೂರು ವಿಭಾಗದಲ್ಲಿ 14ನೇ ಶಾಖೆಯಾಗಿ ಹೆಚ್‌ಡಿಎಫ್‌ಸಿ ಬ್ಯಾಂಕ್ ಉದ್ಘಾಟನೆಗೊಳ್ಳುತ್ತಿದೆ. ಹಣಕಾಸಿನ ವ್ಯವಹಾರ ಹಾಗೂ ಸಾಲ ಸೌಲಭ್ಯ ಸೇರಿದಂತೆ ಎಲ್ಲಾ ವಿಧದ ಬ್ಯಾಂಕಿಂಗ್ ಸೇವೆಗಳನ್ನು ಜನರಿಗೆ ನೀಡುತ್ತೇವೆ ಎಂದು ಮಾಹಿತಿ ನೀಡಿದರು.

ಉದ್ಯಮಿಗಳಾದ ಸಮಿಉಲ್ಲಾ, ಶ್ರೀಕಂಠಪ್ರಸಾದ್, ರೆಡ್ಡಿ, ಶಾಖಾ ವ್ಯವಸ್ಥಾಪಕ ಎಂ.ಎಸ್. ಲಕ್ಷ್ಮಣ್ ಸಿಂಗ್, ಗುತ್ತಿಗೆದಾರ ಹಿರಿಯೂರು ಪರಶಿವಮೂರ್ತಿ, ಬ್ಯಾಂಕ್ ಅಧಿಕಾರಿಗಳಾದ ಬಿ.ಎಮ್.ಗೌರೀಶ್, ಮಧುಚಂದನ್, ಮಹದೇವಪ್ರಭು ಹಾಜರಿದ್ದರು.

ಕೆ.ಆರ್.ನಗರದಲ್ಲಿ ಭತ್ತ, ರಾಗಿ ಖರೀದಿ ಕೇಂದ್ರ ಉದ್ಘಾಟನೆ



ಕೆ.ಆರ್.ನಗರ, ಡಿ.16– ದಲ್ಲಾಳಿ ಹಾವಳಿ ನಿಯಂತ್ರಣಕ್ಕಾಗಿ ಭತ್ತ ಮತ್ತು ರಾಗಿ ಖರೀದಿ ಕೇಂದ್ರ ತೆರೆಯಲಾಗಿದೆ. ಅಧಿಕಾರಿಗಳು ರೈತರಿಗೆ ಅನುಕೂಲ ಕಲ್ಪಸಬೇಕು. ಇಲ್ಲದಿದ್ದರೇ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ಶಾಸಕ ಸಾ.ರಾ.ಮಹೇಶ್ ತಿಳಿಸಿದರು.

ಪಟ್ಟಣದ ಎಪಿಎಂಸಿ ಆವರಣದಲ್ಲಿ ಭತ್ತ ಮತ್ತು ರಾಗಿ ಖರೀದಿ ಕೇಂದ್ರ ಉದ್ಘಾಟಿಸಿ ಮಾತನಾಡಿದ ಅವರು, ಕೆ.ಆರ್.ನಗರ ಮತ್ತು ಸಾಲಿಗ್ರಾಮ ಎಪಿಎಂಸಿ ಆವರಣ ಹಾಗೂ ಚುಂಚನಕಟ್ಟೆ ಪ್ರವಾಸಿ ಮಂದಿರದ ಬಳಿ ಸರ್ಕಾರದ ಸುತ್ತೋಲೆಯಂತೆ ಸರ್ಕಾರದ ಬೆಂಬಲ ಬೆಲೆ ಯೋಜನೆಯಡಿ ಖರೀದಿ ಕೇಂದ್ರಗಳನ್ನು ತೆರೆಯಲಾಗಿದ್ದು, ರೈತರು ಸದುಪಯೋಗ ಪಡಿಸಿಕೊಳ್ಳಬೇಕು ಎಂದರು.

ಸರ್ಕಾರ ಸಾಮಾನ್ಯ ಭತ್ತ ಕ್ವಿಂಟಾಲ್‌ಗೆ 2040 ರೂ., ಗ್ರೇಡ್–ಎ ಭತ್ತ ಕ್ವಿಂಟಾಲ್‌ಗೆ 2060 ರೂ. ಹಾಗೂ ರಾಗಿ ಕ್ವಿಂಟಾಲ್‌ಗೆ 3578 ರೂ. ಬೆಂಬಲ ಬೆಲೆ ನಿಗದಿ ಮಾಡಿದ್ದು, ಇಂದಿನಿಂದ ಕೃಷಿ ಉತ್ಪನ್ನಗಳ ನೋಂದಣಿ ಪ್ರಾರಂಭವಾಗಿದ್ದು, ಜ.1 ರಿಂದ ಖರೀದಿಸಲಾಗುವುದು. ಎಕರೆಗೆ 25 ರಿಂದ ಗರಿಷ್ಠ 40 ಕ್ವಿಂಟಾಲ್ ಭತ್ತವನ್ನು ಒಬ್ಬ ರೈತರಿಂದ ಖರೀದಿಸಲಾಗುವುದು. ಅಲ್ಲದೇ ಎಕರೆಗೆ 10 ರಿಂದ ಗರಿಷ್ಠ 20 ಕ್ವಿಂಟಾಲ್ ರಾಗಿಯನ್ನು ಒಬ್ಬ ರೈತರಿಂದ ಖರೀದಿಸಲಾಗುವುದು ಎಂದರು.

ರೈತರನ್ನು ಬಿಟ್ಟು ದಲ್ಲಾಳಿಗಳು ಭತ್ತ ಮತ್ತು ರಾಗಿ ತಂದಲ್ಲಿ ಕ್ರಿಮಿನಲ್ ಪ್ರಕರಣ ದಾಖಲಿಸಲಾಗುವುದು. ಬೆಳಗ್ಗೆ ಮಾತ್ರ ಭತ್ತ ರಾಗಿ ಖರೀದಿಗೆ ನೋಂದಣಿ ಮಾಡಬೇಕು. ರಾತ್ರಿ ವೇಳೆ ಮಾಡಬಾರದು. ಅಂತಹ ವಿಷಯ ತಿಳಿದು ಬಂದರೆ ತಪ್ಪಿತಸ್ಥರನ್ನು ಸ್ಥಳದಲ್ಲೇ ಅಮಾನತು ಮಾಡಲಾಗುವುದು ಎಂದು ಎಚ್ಚರಿಕೆ ನೀಡಿದರು.

ಜನಪ್ರತಿನಿಧಿಗಳ ಶಿಫಾರಸುಗಳಿಗೆ ಮಣಿಯದೆ ಆರ್‌ಟಿಸಿದಾರರನ್ನು ಮಾತ್ರ ನೋಂದಣಿ ಮಾಡಬೇಕು. ಆರ್‌ಟಿಸಿದಾರನ ಆಧಾರ್ ಕಾರ್ಡ್ ಹಾಗೂ ಮಹಿಳಾ ಆರ್‌ಟಿಸಿದಾರರಾಗಿದ್ದರೇ ಆಕೆ ಪತಿ ಬಂದರೆ ಅವರ ಆರ್‌ಟಿಸಿ ಇರಬೇಕು. ರೈತರ ಒತ್ತಾಯದ ಮೇರೆಗೆ ಭತ್ತ ಒಕ್ಕಣೆ ಮಾಡಿ ಮನೆಯಲ್ಲಿ ಶೇಖರಿಸಿ ನಂತರ ಖರೀದಿ ಕೇಂದ್ರಕ್ಕೆ ತರಬೇಕಾಗಿರುವುದರಿಂದ ಖರ್ಚು ಹೆಚ್ಚಾಗಲಿದೆ. ಸಚಿವರೊಂದಿಗೆ ಮಾತಮಾಡಿ ಸೋಮವಾರದಿಂದಲೇ ಖರೀದಿಸಲು ಕ್ರಮ ವಹಿಸಲಾಗುವುದು ಎಂದರು.

ಈ ವೇಳೆ ತಹಸೀಲ್ದಾರ್‌ಗಳಾದ ಎಸ್. ಸಂತೋಷ್, ಮೋಹನ್ ಕುಮಾರ್, ಟಿಎಪಿಸಿಎಂಎಸ್ ಅಧ್ಯಕ್ಷ ಪರಶಿವಮೂರ್ತಿ, ನಿರ್ದೇಶಕರಾದ ಬಾಲು, ರಮೇಶ್, ಕೃಷ್ಣಮೂರ್ತಿ, ಎಪಿಎಂಸಿ ಕಾರ್ಯದರ್ಶಿ ಮಹೇಶ್, ಸಿಬ್ಬಂದಿ ಚೆಲುವರಾಜ್, ಆಹಾರ ಶಿರಸ್ತೇದಾರ್ ಸದಾನಂದ, ಆಹಾರ ನಿರೀಕ್ಷಕ ಕುಮಾರ್ ಸೇರಿದಂತೆ ಇನ್ನಿತರರಿದ್ದರು.

ಆನೆ ದಾಳಿ: ಮಹಿಳೆಗೆ ಗಾಯ

ಹುಣಸೂರು, ಡಿ. 16– ಆನೆ ದಾಳಿಗೆ ಮಹಿಳೆಯೊಬ್ಬರು ಗಾಯಗೊಂಡಿರುವ ಘಟನೆ ಹುಣಸೂರಿನ ಕೊಳಗಟ್ಟ ಗ್ರಾಮದಲ್ಲಿ ಶುಕ್ರವಾರ ಸಂಭವಿಸಿದೆ.

ವಿವರ: ಗ್ರಾಮದ ಮಹೇಶ್ ಎಂಬುವರ ಪತ್ನಿ ಸಿದ್ದಮ್ಮ ಶುಕ್ರವಾರ ಬೆಳಗ್ಗೆ ಜಮೀನಿನಲ್ಲಿ ಅವರೆಕಾಯಿ ಕೊಯ್ಯುವ ವೇಳೆ ಆನೆಗಳು ದಾಳಿ ಮಾಡಿವೆ. ಆಗ ಆನೆಯೊಂದು ಸೊಂಡಿಲಿನಿಂದ ಸಿದ್ದಮ್ಮರನ್ನು ತಳ್ಳಿದ ಕಾರಣ ಹಳ್ಳಕ್ಕೆ ಬಿದ್ದು ಬೆನ್ನುಮೂಳೆ ಮುರಿದಿದೆ. ಗಾಯಾಳು ಮಹಿಳೆ ಹುಣಸೂರಿನ ಸಾರ್ವಜನಿಕ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಅರಣ್ಯ ಇಲಾಖೆಯ ಆರ್‌ಎಫ್‌ಓ ನಂದಕುಮಾರ್, ಸಿಬ್ಬಂದಿ ನಂಜುಂಡ ಆಸ್ಪತ್ರೆಗೆ ಭೇಟಿ ನೀಡಿ ಗಾಯಗೊಂಡಿರುವ ಮಹಿಳೆ ಆರೋಗ್ಯ ವಿಚಾರಿಸಿ, ಇಲಾಖೆಯಿಂದ ಬರುವ ಪರಿಹಾರ ಕೊಡಿಸುವ ಭರವಸೆ ನೀಡಿದರು.

ಹುಲ್ಲಹಳ್ಳಿ ಸೇತುವೆ ದುರಸ್ತಿಗೆ ಆಗ್ರಹಿಸಿ ಪ್ರತಿಭಟನೆ



ನಂಜನಗೂಡು, ಡಿ.16– ಹುಲ್ಲಹಳ್ಳಿ ಸೇತುವೆ ದುರಸ್ತಿಗೆ ಒತ್ತಾಯಿಸಿ ತಾಲೂಕಿನ ರೈತ ಸಂಘದ ಅಧ್ಯಕ್ಷ ರೇಣುಕಾ ಮೂರ್ತಿ ನೇತೃತ್ವದಲ್ಲಿ ವಾಹನಗಳನ್ನು ತಡೆದು ಪ್ರತಿಭಟನೆ ನಡೆಸಲಾಯಿತು.

ಸೇತುವೆ ಮೇಲ್ಭಾಗದಲ್ಲಿ ಗುಂಡಿ ಉಂಟಾಗಿ ಬಳಸಿದ ಕಬ್ಬಿಣ ಸರಳುಗಳು ಮೇಲೆ ಬಂದಿದ್ದು ಸಂಚಾರ ದುಸ್ತರವಾಗಿದೆ. ದುರಸ್ತಿ ಕಾಮಗಾರಿಗೆ 50 ಲಕ್ಷ ರೂ. ಮಂಜೂರಾಗಿದ್ದು, ಕಾಮಗಾರಿ ಪ್ರಾರಂಭಿಸದೆ ಅಧಿಕಾರಿಗಳು ವಿಳಂಬ ಮಾಡುತ್ತಿದ್ದಾರೆ ಎಂದು ಆರೋಪಿಸಿದರು.

ಪ್ರತಿಭಟನಾ ಸ್ಥಳಕ್ಕೆ ಆಗಮಿಸಿದ ಕಾವೇರಿ ನಿಗಮದ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ನವೀನ್ ಮನವಿ ಸ್ವೀಕರಿಸಿ ಮಾತನಾಡಿ, ಸೇತುವೆ ಮೇಲಿರುವ ಗುಂಡಿಗಳನ್ನು ಮತ್ತು ಸೇತುವೆ ಮೇಲ್ಭಾದರವನ್ನು ದುರಸ್ತಿ ಮಾಡಲು ಟೆಂಡರ್ ಕರೆದು ಗುತ್ತಿಗೆದಾರರನ್ನು ನೇಮಿಸಲಾಗಿದೆ. ಸದ್ಯದಲ್ಲೇ ಕಾಮಗಾರಿ ಪ್ರಾರಂಭಿಸಲಾಗುವುದು ಎಂದರು.

ಸ್ಥಳಕ್ಕೆ ಸಿಪಿಐ ಲಕ್ಷ್ಮೀಕಾಂತ ತಳವಾರ್, ಹುಲ್ಲಹಳ್ಳಿ ಎಸ್‌ಐಗಳಾದ ಕೃಷ್ಣಕಾಂತ ಮತ್ತು ನಂಜುಂಡೇರಾಜ್ ಅರಸ್ ಭದ್ರತೆ ನೀಡಿದ್ದರು. ಜಿಲ್ಲಾ ಗೌರವಾಧ್ಯಕ್ಷ ಸುಕುಗುರೂಜೀ, ಜಿಲ್ಲಾ ಉಪಾಧ್ಯಕ್ಷ ಕೃಷ್ಣಗೌಡ, ತಾಲೂಕು ಉಪಾಧ್ಯಾಕ್ಷ ನಾಗೇಶ್, ಹೋಬಳಿ ಘಟಕದ ಅಧ್ಯಕ್ಷ ನಂದೀಶ್, ಮುಖಂಡ ಬಸವಣ್ಣ ಭಾಗವಹಿಸಿದ್ದರು.

ಕೆಂಪನಂಜಮ್ಮ ನಿಧನ



ಹೆಚ್.ಡಿ.ಕೋಟೆ, ಡಿ.16– ತಾಲೂಕಿನ ಹೈರಿಗೆ ಗ್ರಾಮದ ನಿವಾಸಿ ತಾಪಂ ಮಾಜಿ ಅಧ್ಯಕ್ಷ ದೇವರಾಜ್ ಅವರ ತಾಯಿ ಕೆಂಪನಂಜಮ್ಮ(90) ಶುಕ್ರವಾರ ನಿಧನರಾದರು.

ಮೃತರು ಇಬ್ಬರು ಪುತ್ರರು, ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶನಿವಾರ ಸ್ವಗ್ರಾಮದ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು ಎಂದು ಕುಟುಂಬ ವರ್ಗ ತಿಳಿಸಿದೆ.

DOCUMENTS LOST

Certified copy of registered sale deed dated 7.11.1997 executed by smt.Shashirekha in favour of sri G.N.Murari-Doc.No.4156/1997-98 of Book-1 & Certified Copy of Registered sale deed dated 8.2.1995 Executed by sri C.A.Muttanna Through his GPA Sri N.B.Rajendra in Favour of Smt.Shashirekha-Doc.No.5767/1994-95 of Book-1. Finders please contact

9008491860

ಮೈಸೂರು ಮಹಾನಗರ ಪಾಲಿಕೆ, ಮೈಸೂರು

ಕಾರ್ಯಪಾಲಕ ಅಭಿಯಂತರವರ ಕಛೇರಿ (ವಿದ್ಯುತ್ ವಿಭಾಗ), ಮೈಸೂರು ಮಹಾನಗರ ಪಾಲಿಕೆ, ಮೈಸೂರು.

ಸಂಖ್ಯೆ: ಮೈನಪಾ/ಕಾ.ಇಂ(ವಿ)/ಟಿ.ಎನ್–14/2022–23 ದಿನಾಂಕ: 14.12.2022

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ

ಮೈಸೂರು ಮಹಾನಗರ ಪಾಲಿಕೆಯ ಕಾರ್ಯಪಾಲಕ ಅಭಿಯಂತರುಗಳ ಕೋರಿಕೆ ಮೇರೆಗೆ ಪಾಲಿಕೆ ಅನುದಾನ–2022–23ನೇ ಸಾಲಿನ ಲೆಕ್ಕ ಶೀರ್ಷಿಕೆ ಅನುದಾನದಡಿ ಟೆಂಡರ್‌ಗಳಿಗೆ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. ವಿವರ ಈ ಕೆಳಕಂಡಂತಿರುತ್ತದೆ.

ಕ್ರ ಸಂ	ವಿವರ	ಒಟ್ಟು ಕಾಮಗಾರಿಗಳು	ಟೆಂಡರ್ ಮೊತ್ತ (ರೂ.ಲಕ್ಷಗಳಲ್ಲಿ)	ಇ– ಪೋರ್ಟಲ್ ನಲ್ಲಿ ಟೆಂಡರ್ ಚಾಲ್ತಿಗೆ ಬರುವ ದಿನಾಂಕ	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	ಟೆಂಡರ್/ ತಾಂತ್ರಿಕ ಬಿಡ್ ತೆರೆಯುವ ದಿನಾಂಕ
1	ಕಾರ್ಯಪಾಲಕ ಅಭಿಯಂತರರು (ವಿದ್ಯುತ್ ವಿಭಾಗ)	1	5.00	15.12.2022	22.12.2022	23.12.2022

ವಿಶೇಷ ಸೂಚನೆ: ಮುಂದೆ ಯಾವುದೇ ಸೂಚನೆ/ ಬದಲಾವಣೆ/ ತಿದ್ದುಪಡಿಗಳಿದ್ದಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು ಮತ್ತು ಯಾವುದೇ ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದಿಲ್ಲ.

ಸಹಿ/–
ಕಾರ್ಯಪಾಲಕ ಅಭಿಯಂತರರು (ವಿದ್ಯುತ್ ವಿಭಾಗ)
ಮೈಸೂರು ಮಹಾನಗರ ಪಾಲಿಕೆ, ಮೈಸೂರು.

ವಾಸಾಸಂಇ/ಮೈಸೂರು/ಶಿರಡಿ ಸಾಯಿ/777/2022–23

ಜಿಲ್ಲಾ ಪಂಚಾಯತ್ ಮೈಸೂರು

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ

ಜಿಲ್ಲಾ ಪಂಚಾಯತ್ ಕಾರ್ಯಾಲಯ, ಕೃಷ್ಣರಾಜ ಬುಲೇವಾರ್ಡ್ ರಸ್ತೆ, ಮೈಸೂರು–570 005. ದೂರವಾಣಿ: 0821–2526301 / 2330052

ಸಂ:ಡಿಆರ್‌ಡಿ(1)/ಉಖಾಯೋ/2022–23/19176 ದಿನಾಂಕ:12.12.2022

ಪತ್ರಿಕಾ ಪ್ರಕಟಣೆ

ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ಮೈಸೂರು ಜಿಲ್ಲೆಯಲ್ಲಿ ಖಾಲಿ ಇರುವ ತಾಲ್ಲೂಕು ತಾಂತ್ರಿಕ ಸಹಾಯಕ ಅಭಿಯಂತರರು, ಐಇಸಿ ತಾಂತ್ರಿಕ ಸಂಯೋಜಕರು, ಕೃಷಿ ಇಲಾಖೆ, ತೋಟಗಾರಿಕ ಇಲಾಖೆ, ಅರಣ್ಯ ಇಲಾಖೆ, ರೇಷ್ಮೆ ಇಲಾಖೆ ಮತ್ತು ಆಡಳಿತ ಸಹಾಯಕರು ಹುದ್ದೆಗಳಿಗೆ ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲು ಅರ್ಹ ಅಭ್ಯರ್ಥಿಗಳು ವಿದ್ಯಾರ್ಹತೆಗೆ ಸಂಬಂಧಪಟ್ಟ ಪೂರ್ಣ ದಾಖಲಾತಿಗಳೊಂದಿಗೆ ಆನ್‌ಲೈನ್ ಮೂಲಕ NIC ಜಿಲ್ಲಾ ವೆಬ್‌ಸೈಟ್ mysore.nic.in ನಲ್ಲಿ ಲಭ್ಯವಿರುವ ನಿಗದಿತ ನಮೂನೆಯಲ್ಲಿ ವಿವರ ಭರ್ತಿ ಮಾಡಿ ಅಭ್ಯರ್ಥಿಗಳು ಅರ್ಜಿಯನ್ನು ಸಲ್ಲಿಸಬಹುದಾಗಿರುತ್ತದೆ.

ಕ್ರಮ ಸಂಖ್ಯೆ	ಹುದ್ದೆ ಹೆಸರು/ ಹುದ್ದೆಗಳ ಸಂಖ್ಯೆ	ವಿದ್ಯಾರ್ಹತೆ	ವಯೋಮಿತಿ	ಅನುಭವ	ಗೌರವ ಸಂಭಾವನೆ (ಮಾಹೆಯಾನ)
1.	ತಾಂತ್ರಿಕ ಸಹಾಯಕ ಅಭಿಯಂತರರು (TAE)–04	ಇಂಜಿನಿಯರಿಂಗ್ ಪದವೀಧರರು (ಸಿವಿಲ್) ಗಣಕಯಂತ್ರ ಜ್ಞಾನ ಕಡ್ಡಾಯ	ಗರಿಷ್ಠ–40 ವರ್ಷ	ಸಂಬಂಧಪಟ್ಟ ಕ್ಷೇತ್ರದಲ್ಲಿ ಕನಿಷ್ಠ 2–3 ವರ್ಷಗಳ ಅನುಭವ	ರೂ.24,000/–
2.	ಐಇಸಿ (ಮಾಹಿತಿ ಶಿಕ್ಷಣ ಸಂವಹನ)–01	Post Graduation in Mass Communication or any Post Graduation with diploma in mass communication or related subjects and computer knowledge in the absence of the above any post graduation with computer knowledge (Photography, Videography, Photo Editing and design Video Editing & Documentation)	ಗರಿಷ್ಠ–40 ವರ್ಷ	ಸಂಬಂಧಪಟ್ಟ ಕ್ಷೇತ್ರದಲ್ಲಿ ಕನಿಷ್ಠ 2–3 ವರ್ಷಗಳ ಅನುಭವ	ರೂ.24,000/–
3.	ತಾಂತ್ರಿಕ ಸಂಯೋಜಕರು (TC)–02	ಇಂಜಿನಿಯರಿಂಗ್ ಪದವೀಧರರು (ಸಿವಿಲ್) – ಗಣಕಯಂತ್ರ ಜ್ಞಾನ ಕಡ್ಡಾಯ	ಗರಿಷ್ಠ–40 ವರ್ಷ	ಸಂಬಂಧಪಟ್ಟ ಕ್ಷೇತ್ರದಲ್ಲಿ ಕನಿಷ್ಠ 2–3 ವರ್ಷಗಳ ಅನುಭವ	ರೂ.29,000/–
4.	ತಾಂತ್ರಿಕ ಸಹಾಯಕರು (ಕೃಷಿ ಇಲಾಖೆ)–04	ಬಿ.ಎಸ್ಸಿ – ಕೃಷಿ	21–40 ವರ್ಷ	ಬಿ.ಎಸ್ಸಿ, ಕೃಷಿ ಹಾಗೂ ಸಂಬಂಧಿಸಿದ ಕಾರ್ಯ ಕ್ಷೇತ್ರದಲ್ಲಿ 2–3 ವರ್ಷಗಳ ಅನುಭವ	ರೂ.24,000/–
	ತಾಂತ್ರಿಕ ಸಹಾಯಕರು (ತೋಟಗಾರಿಕೆ ಇಲಾಖೆ) – 10	ಬಿ.ಎಸ್ಸಿ – ತೋಟಗಾರಿಕೆ		ಬಿ.ಎಸ್ಸಿ, ತೋಟಗಾರಿಕೆ ಹಾಗೂ ಸಂಬಂಧಿಸಿದ ಕಾರ್ಯ ಕ್ಷೇತ್ರದಲ್ಲಿ 2–3 ವರ್ಷಗಳ ಅನುಭವ	ರೂ.24,000/–
	ತಾಂತ್ರಿಕ ಸಹಾಯಕರು (ಅರಣ್ಯ ಇಲಾಖೆ–06	ಬಿ.ಎಸ್ಸಿ – ಅರಣ್ಯ		ಬಿ.ಎಸ್ಸಿ, ಅರಣ್ಯ ಹಾಗೂ ಸಂಬಂಧಿಸಿದ ಕಾರ್ಯ ಕ್ಷೇತ್ರದಲ್ಲಿ 2–3 ವರ್ಷಗಳ ಅನುಭವ	ರೂ.24,000/–
	ತಾಂತ್ರಿಕ ಸಹಾಯಕರು (ರೇಷ್ಮೆ ಇಲಾಖೆ–01	ಬಿ.ಎಸ್ಸಿ – ರೇಷ್ಮೆ		ಬಿ.ಎಸ್ಸಿ, ರೇಷ್ಮೆ ಹಾಗೂ ಸಂಬಂಧಿಸಿದ ಕಾರ್ಯ ಕ್ಷೇತ್ರದಲ್ಲಿ 2–3 ವರ್ಷಗಳ ಅನುಭವ	ರೂ.24,000/–
5.	ಆಡಳಿತ ಸಹಾಯಕರು (Administration Assistant) -08	ಬಿ.ಕಾಂ ಪದವೀಧರರಾಗಿರಬೇಕು, ಕನ್ನಡ ಮತ್ತು ಇಂಗ್ಲಿಷ್ ಟೈಪಿಂಗ್‌ನಲ್ಲಿ ಪರಿಣಿತಿ ಹೊಂದಿರಬೇಕು. MS Word, Excel, PowerPoint ರಲ್ಲಿ ಕಂಪ್ಯೂಟರ್ ಜ್ಞಾನ ಹೊಂದಿರಬೇಕು (ಈ ಹುದ್ದೆಗೆ ಮೆರಿಟ್ ಆಧಾರದಲ್ಲಿ ಆಯ್ಕೆಯಾದ ಅಭ್ಯರ್ಥಿಗಳಿಗೆ ಮಾತ್ರ ಕಂಪ್ಯೂಟರ್ ಟೆಸ್ಟ್ ನೀಡಲಾಗುವುದು)	ಗರಿಷ್ಠ–40 ವರ್ಷ		ರೂ.17,600/–

ಅರ್ಜಿಯ ವೇಳಾಪಟ್ಟಿ: ಅರ್ಜಿ ಸಲ್ಲಿಸುವ ಪ್ರಾರಂಭಿಕ **ದಿನಾಂಕ: 15.12.2022.** ಅರ್ಜಿ ಸಲ್ಲಿಸುವ ಕೊನೆಯ **ದಿನಾಂಕ: 30.12.2022. ದೂರವಾಣಿ ಸಂಖ್ಯೆ: (ಮೊ: 9980001309. ಸೂಚನೆಗಳು:** 1. ಹುದ್ದೆಗಳು ತಾತ್ಕಾಲಿಕವಾದವು. 2. ಮೆರಿಟ್ ಆಧಾರದಲ್ಲಿ ಖಾಲಿ ಹುದ್ದೆಗೆ ಅನುಗುಣವಾಗಿ 1:3 ಆಧಾರದಲ್ಲಿ ಅಭ್ಯರ್ಥಿಗಳಿಗೆ ದೂರವಾಣಿ ಮುಖೇನ ದಾಖಲಾತಿ ಪರಿಶೀಲನೆಗೆ ದಿನಾಂಕ ಗೊತ್ತುಪಡಿಸಲಾಗುವುದು. ಸದರಿ ದಿನಾಂಕದಂದು ಎರಡು ಭಾವಚಿತ್ರ/ಆಧಾರ್ ಕಾರ್ಡ್/ಚುನಾವಣಾ ಗುರುತಿನ ಚೀಟಿ, SSLC ಅಂಕಪಟ್ಟಿ ಹಾಗೂ ಪದವಿ/ಸ್ನಾತಕೋತ್ತರ ಪದವಿ ಅಂಕಪಟ್ಟಿಗಳು/ಅನುಭವ ಪ್ರಮಾಣ ಪತ್ರ/ಕಂಪ್ಯೂಟರ್ ಜ್ಞಾನ ಹೊಂದಿದ ಪ್ರಮಾಣ ಪತ್ರಗಳನ್ನು (ಇತರೆ ಎಲ್ಲಾ ದಾಖಲಾತಿಗಳನ್ನು) ಪತ್ರಾಂಕಿತ ಅಧಿಕಾರಿ/ನೋಟರಿ ರವರಿಂದ ಧೃಡೀಕರಿಸಿಕೊಂಡು ಖುದ್ದು ಹಾಜರಾಗುವುದು.

ಷರತ್ತುಗಳು: 1. ಅರ್ಜಿ ಹಾಕುವ ಪ್ರತಿಯೊಬ್ಬ ಅಭ್ಯರ್ಥಿಯು ಹುದ್ದೆಗೆ ಸಮರ್ಥಿಸುವ ಮೂಲ ದಾಖಲಾತಿಗಳು ಅಂಕಪಟ್ಟಿಗಳು, ಪ್ರಮಾಣ ಪತ್ರಗಳು ಇತ್ಯಾದಿ ಸಂಬಂಧಪಟ್ಟ ಅಂಗೀಕೃತ ಸಂಸ್ಥೆಯಿಂದ/ವಿಶ್ವವಿದ್ಯಾಲಯದಿಂದ ಪಡೆದಿರಬೇಕು. ತಪ್ಪಿದ್ದಲ್ಲಿ ಅರ್ಜಿಯು ತಿರಸ್ಕೃತಗೊಳ್ಳುವುದು. 2. ಹುದ್ದೆಗೆ ನಿಗಧಿಪಡಿಸಿದ ಮಾಹಿತಿಯನ್ನು / ದಾಖಲಾತಿಗಳನ್ನು ಆನ್‌ಲೈನ್‌ನಲ್ಲಿ ತಿಳಿಯದೇ ತಪ್ಪು ಮಾಹಿತಿಯನ್ನು ಇಂದ್ರೀಕರಿಸಿದಲ್ಲಿ ಅರ್ಜಿಯು ತಿರಸ್ಕೃತಗೊಳ್ಳುವುದು. 3. ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಅಧಿಕಾರವು ಈ ಕೆಳಕಂಡ ಸಂಸ್ಥೆಯ ಆಡಳಿತಕ್ಕೆ ಒಳಪಟ್ಟಿರುತ್ತದೆ.

ಸಹಿ/–ಮೆ: ಮೇಘಾ ಸರ್ವಿಸಸ್ ಪ್ರೈವೇಟ್ ಲಿಮಿಟೆಡ್,
ಪ್ಲಾಟ್ ನಂ.659, ಕೀರ್ತಿನಗರ, ವಿಜಯಪುರ–58101.

DIPR/MYS/KAVITA/766/2022-23